ಕನ್ನಡ ಅಭಿವೃದ್ಧಿ ಪ್ರಾಧಿಕಾರ
ವಿಧಾನಸೌಧ, ಬೆಂಗಳೂರು

# ಸರ್ಕಾರಿ ಶಾಲೆಗಳ ಸಬಲೀಕರಣ ಸಮಿತಿ ವರದಿ

## ೦೪-೦೯-೨೦೧೭

samachara.com

ಪ್ರೊ. ಎಸ್.ಜಿ. ಸಿದ್ಧರಾಮಯ್ಯ
ಅಧ್ಯಕ್ಷರು

ಪದನಱಿದು ನುಡಿಯಲುಂ ನುಡಿದುದ
ನಱಿಯಲುಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುರಿತೋದದೆಯುಂ
ಕಾವ್ಯಪ್ರಯೋಗ ಪರಿಣತಮತಿಗಳ್

*ಕವಿರಾಜಮಾರ್ಗ*

samachara.com

# ಅಧ್ಯಕ್ಷರ ಮಾತು

ಮಾನವ ಹಕ್ಕುಗಳ ಇಂದಿನ ಯುಗದಲ್ಲಿ ಶಿಕ್ಷಣ ಎಲ್ಲ ಮಕ್ಕಳ ಮೂಲಭೂತ ಹಕ್ಕೆಂಬುದು ಸಾರ್ವತ್ರಿಕ ಸತ್ಯ. ಈ ಸಾರ್ವತ್ರಿಕ ಸತ್ಯವನ್ನು ಸಾರ್ವತ್ರೀಕರಣಗೊಳಿಸುವ ಪ್ರಯತ್ನಗಳು ಸ್ವಾತಂತ್ರ್ಯ ಪೂರ್ವದಿಂದಲೂ ನಡೆಯುತ್ತಾ ಬಂದಿವೆ. ಇದಕ್ಕೆ ನಿದರ್ಶನವಾಗಿ ೧೮೮೨ರಲ್ಲಿ ಶಿಕ್ಷಣ ಆಯೋಗದ (ಹಂಟರ್ ಆಯೋಗ) ಮುಂದೆ ಹಾಜರಾಗಿ ಸಾಕ್ಷಾಧಾರಗಳನ್ನು ಒದಗಿಸಿದ ಜ್ಯೋತಿ ಬಾ ಫುಲೆಯವರು ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಒತ್ತಾಯಿಸಿದರು. ಸ್ವತಂತ್ರ ಭಾರತದಲ್ಲಿ ಶಿಕ್ಷಣ ಸಾರ್ವತ್ರೀಕರಣದ ಮಹತ್ವವನ್ನು ಅರಿತ ನಮ್ಮ ಸಂವಿಧಾನ ರಚನಕಾರರು ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನಿರ್ದೇಶಕ ತತ್ವಗಳಡಿಯಲ್ಲಿ ಒಂದು ಕಾಲಮಿತಿಯ ಕಾರ್ಯಕ್ರಮವನ್ನಾಗಿ ಸೇರಿಸಿದರು. ಅದರಂತೆ, ಎಲ್ಲಾ ಮಕ್ಕಳಿಗೆ ಶಾಲಾ ಶಿಕ್ಷಣವನ್ನು ಒದಗಿಸುವ ಗುರಿ ೧೯೬೦ಕ್ಕೆ ಮುಗಿಯಬೇಕಿತ್ತು. ಆದರೆ, ಸ್ವಾತಂತ್ರ್ಯ ಬಂದು ೬೯ ವರ್ಷಗಳು ಕಳೆದರೂ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸುವ ಗುರಿಯನ್ನು ತಲುಪದಿರುವುದರ ಬಗ್ಗೆ ಪ್ರಜ್ಞಾವಂತ ಸಮಾಜ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ.

ಇಂದು ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಬೇಕೆಂಬ ಬೇಡಿಕೆ ಕೇವಲ ರಾಷ್ಟ್ರಗಳಿಗೆ ಮಾತ್ರ ಸೀಮಿತವಾಗದೆ ಒಂದು ಜಾಗತಿಕ ವಿಷಯವಾಗಿದೆ. ಜೊತೆಗೆ, ಮಾನವ ಹಕ್ಕುಗಳ ಅವಿಭಾಜ್ಯ ಅಂಗವಾಗಿರುವ ಈ ಶಿಕ್ಷಣದ ಹಕ್ಕು ಪ್ರತಿಯೊಂದು ಮಗುವಿಗೂ ಸಿಗಲೇಬೇಕೆಂಬ ಕೂಗು ಜಾಗತಿಕ ಮಟ್ಟದಲ್ಲಿ ಗಟ್ಟಿಯಾಗುತ್ತಿದೆ. ಈ ಸಂಬಂಧ ಅಂತರಾಷ್ಟ್ರೀಯ ಮಟ್ಟದಲ್ಲಿ ಹಲವು ಒಪ್ಪಂದಗಳು ಮತ್ತು ಒಡಂಬಡಿಕೆಗಳು ಜಾರಿಗೆ ಬಂದಿವೆ. ಅವುಗಳಲ್ಲಿ ಒಂದು ಮಹತ್ವದ ಒಡಂಬಡಿಕೆಯೆಂದರೆ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ. ಈ ಒಡಂಬಡಿಕೆಯನ್ನು ವಿಶ್ವಸಂಸ್ಥೆಯು ಸದಸ್ಯ ರಾಷ್ಟ್ರಗಳ ಒಪ್ಪಿಗೆಗಾಗಿ ೧೯೮೯ರಲ್ಲಿ ತೆರೆದಿಟ್ಟಾಗ ಭಾರತ ಸರ್ಕಾರವು ಈ ಒಡಂಬಡಿಕೆಯನ್ನು ಡಿಸೆಂಬರ್ ೧೯೯೨

samachara.com

ಅಂಗೀಕರಿಸಿದೆ. ಈ ಬೆಳವಣಿಗೆಯ ಭಾಗವಾಗಿ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಸಾಧಿಸುವ ನಿಟ್ಟಿನಲ್ಲಿ ಅಂತರಾಷ್ಟ್ರೀಯ ಮಟ್ಟದ ಒತ್ತಡಗಳು ಹೆಚ್ಚುತ್ತಿದ್ದು, ಭಾರತ ಇದಕ್ಕೆ ಹೊರತಲ್ಲ.

ಇದರ ಜೊತೆಗೆ ಭಾರತದಲ್ಲಿ ನ್ಯಾಯಾಂಗದ ಕ್ರಿಯಾಶೀಲತೆಯಿಂದಾಗಿ ನಿರ್ದೇಶಕ ತತ್ವದ ಅಡಿಯಲ್ಲಿದ್ದ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒಂದು ಮೂಲಭೂತ ಹಕ್ಕಾನ್ನಾಗಿ ಘೋಷಿಸಿದ ಸರ್ವೋಚ್ಚ ನ್ಯಾಯಾಲಯವು ೧೯೯೩ರಲ್ಲಿ ಐತಿಹಾಸಿಕ ತೀರ್ಪನ್ನು ನೀಡಿದೆ. ಇಂದು, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕಾನೂನುಗಳ ಅನ್ವಯ ಶಿಕ್ಷಣ ಎಲ್ಲ ಮಕ್ಕಳ ಮೂಲಭೂತ ಹಕ್ಕು. ಈ ಮೂಲಭೂತ ಹಕ್ಕನ್ನು ಸಾಕಾರಗೊಳಿಸುವುದು ಎಲ್ಲ ಸರ್ಕಾರಗಳ ಆದ್ಯ ಕರ್ತವ್ಯ ಮತ್ತು ಜವಾಬ್ದಾರಿ.

ಮಾನವ ಹಕ್ಕು ಮತ್ತು ಕಾನೂನಿನ ಪರಿಭಾಷೆಯಲ್ಲಿ ಶಿಕ್ಷಣ ಒಂದು ಮೂಲಭೂತ ಹಕ್ಕಾಗಿದ್ದರೂ ಅದನ್ನು ಸಾಕಾರಗೊಳಿಸಬೇಕಾದ ರಾಷ್ಟ್ರಗಳು ಶಿಕ್ಷಣವನ್ನು ತಮ್ಮ ಅಭಿವೃದ್ಧಿಯ ಭಾಗವೆಂದು ಪರಿಗಣಿಸಿ ಅಗತ್ಯ ಸಂಪನ್ಮೂಲ ಮತ್ತು ಹಣಕಾಸಿನ ನೆರವನ್ನು ಒದಗಿಸುವಲ್ಲಿ ನಿರೀಕ್ಷಿತ ಮಟ್ಟಕ್ಕೆ ಸ್ಪಂದಿಸುತ್ತಿಲ್ಲವೆಂಬುದು ನಾಗರಿಕ ಸಮಾಜಕ್ಕಿರುವ ಆತಂಕ. ಶಿಕ್ಷಣದ ಹಕ್ಕು ಕೇವಲ ಅಕ್ಷರಭ್ಯಾಸ ಕಲಿಸಬಹುದಾದ ಶಾಲಾ ಶಿಕ್ಷಣಕ್ಕೆ ಮಾತ್ರ ಸೀಮಿತವಾಗದೇ ಎಲ್ಲ ಮಕ್ಕಳಿಗೆ ಸಮಾನ ಗುಣಮಟ್ಟದ ಶಿಕ್ಷಣ ಒದಗಿಸಬಲ್ಲ ಸಮಾನ ಶಾಲಾ ವ್ಯವಸ್ಥೆಯನ್ನು ಕಟ್ಟಿಕೊಳ್ಳುವ ಮೂಲಕ ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಆಧಾರದ ಮೇಲೆ ಹೊಸ ಸಮಾಜವನ್ನು ಕಟ್ಟಿಕೊಳ್ಳಬೇಕೆಂಬ ಆಶಯ ನೈಜ ಜನಪರ ಚಳುವಳಿಗಳ ಮೂಲಭೂತ ಬೇಡಿಕೆಯಾಗಿದೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರವು ರಾಜ್ಯದಲ್ಲಿ ನಿರಂತರ ಚರ್ಚೆಯ ಮೂಲಕ ಸರ್ಕಾರಿ ಕನ್ನಡ ಶಾಲೆಗಳನ್ನು ಬಲಗೊಳಿಸಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ನೀತಿ ನಿರೂಪಣೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುತ್ತಾ ಬಂದಿದೆ. ಈ ಹಿನ್ನೆಲೆಯಲ್ಲಿ, ಕಳೆದ ಒಂದೂವರೆ ದಶಕದಿಂದ ರಾಜ್ಯದಲ್ಲಿ ಸರ್ಕಾರಿ ಶಾಲೆಗಳು ದುರ್ಬಲಗೊಳ್ಳುತ್ತಿದ್ದು, ಶಿಕ್ಷಣದ ಖಾಸಗೀಕರಣ ಹಾಗು ವ್ಯಾಪಾರೀಕರಣ ನಾಗಾಲೋಟದಲ್ಲಿ ಸಾಗುತ್ತಿರುವುದು ನಾಗರಿಕ ಸಮಾಜದಲ್ಲಿ ಆತಂಕವನ್ನು ಸೃಷ್ಟಿಸಿದೆ. ಭಾರತದ ಸಂವಿಧಾನದಲ್ಲಿ ಶಿಕ್ಷಣ ಮೂಲಭೂತ ಹಕ್ಕಾಗಿದ್ದು, ಅದನ್ನು ಸಾಕಾರಗೊಳಿಸುವ ಗುರುತರವಾದ ಜವಾಬ್ದಾರಿ ಕೇಂದ್ರ ಹಾಗು ರಾಜ್ಯ ಸರ್ಕಾರಗಳ ಮೇಲಿದೆ ಎಂಬುದನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಬಲವಾಗಿ ಪ್ರತಿಪಾದಿಸುತ್ತದೆ.

samachara.com

ಸರ್ಕಾರಿ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಉತ್ತಮ ಕಲಿಕಾ ವಾತಾವರಣವನ್ನು ಸೃಷ್ಟಿಸಿ ಶಾಲೆಗಳಲ್ಲಿ ಕಲಿಕೆಯನ್ನು ಕೇಂದ್ರ ಬಿಂದುವನ್ನಾಗಿಸಲು ಸಾಧ್ಯವಾಗಬಹುದಾದ ರೀತಿಯಲ್ಲಿ ಶಿಕ್ಷಣ ವ್ಯವಸ್ಥೆಯನ್ನು ಪುನರ್‌ರಚಿಸುವುದು ಇಂದಿನ ತುರ್ತು ಅಗತ್ಯ. ದಿನದಿಂದ ದಿನಕ್ಕೆ ತೀರ ದುರ್ಬಲ ಸ್ಥಿತಿ ಮುಟ್ಟುತ್ತಿರುವ ಸರ್ಕಾರಿ ಶಾಲೆಗಳ ಸಬಲೀಕರಣವಾಗದ ಹೊರತು ಉಚಿತ ಹಾಗು ಕಡ್ಡಾಯ ಶಿಕ್ಷಣದ ಉದ್ದೇಶ ಸಫಲವಾಗುವುದಿಲ್ಲ ಎಂಬುದನ್ನು ಅರಿತ ಕರ್ನಾಟಕ ಸರ್ಕಾರ ಜೂನ್ ೨೦೧೯ರಲ್ಲಿ ಸರ್ಕಾರಿ ಶಾಲೆಗಳ ಸಬಲೀಕರಣ ಸಮಿತಿಯೊಂದನ್ನು ರಚಿಸಿತು. ಆ ಸಮಿತಿಯ ರಚನೆಯು ಇಂತಿದೆ :

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನು ಸರ್ಕಾರಿ ಶಾಲೆಗಳ ಸಬಲೀಕರಣ ಸಮಿತಿಯ ಅಧ್ಯಕ್ಷರನ್ನಾಗಿಯೂ, ಪ್ರೊ. ಚಂದ್ರಶೇಖರ ದಾಮ್ಲೆ, ಶ್ರೀ ಪ. ಮಲ್ಲೇಶ್, ಶ್ರೀ ಗಂಗಾಧರ ಕುಷ್ಟಗಿ, ಶ್ರೀಮತಿ ಬಾನು ಮುಷ್ತಾಕ್, ಫಾ. ಅಂಬ್ರೋಸ್ ಪಿಂಟೋ ಸದಸ್ಯರನ್ನಾಗಿಯೂ, ಡಾ. ಕೆ. ಮುರಳಿಧರ್, ಸದಸ್ಯ ಕಾರ್ಯದರ್ಶಿಯನ್ನಾಗಿಯೂ ನೇಮಿಸಿತು. ಆ ಸಂರ್ಭದಲ್ಲಿ ಈಗಾಗಲೇ ಆ ಕ್ಷೇತ್ರದಲ್ಲಿ ಗುಣಾತ್ಮಕ ರೀತಿಯಲ್ಲಿ ಸೇವೆ ಸಲ್ಲಿಸಿರುವ ಶ್ರೀ ಟಿ.ಎಂ. ಕುಮಾರ್ ಅವರನ್ನು ಹಾಗು ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಸಂಶೋಧನೆಗೆ ತೊಡಗಿಸಿಕೊಂಡು ಅದರ ತಳಸ್ಪರ್ಶಿ ಸತ್ಯಶೋಧನೆ ನಡೆಸಿರುವ ಡಾ. ವಿ.ಪಿ. ನಿರಂಜನಾರಾಧ್ಯ, ಫೆಲೋ ಹಾಗು ಶಿಕ್ಷಣ ಕಾರ್ಯಕ್ರಮದ ಮುಖ್ಯಸ್ಥರು ಮತ್ತು ಖ್ಯಾತ ಶಿಕ್ಷಣ ತಜ್ಞರು ಸಮಾನ ಗುಣಾತ್ಮಕ ಶಾಲಾ ಶಿಕ್ಷಣ ಸಾರ್ವತ್ರೀಕರಣ ಕಾರ್ಯಕ್ರಮ ಮಗು ಮತ್ತು ಕಾನೂನು ಕೇಂದ್ರ, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ ಹಾಗೂ ಶಿಕ್ಷಣ ತಜ್ಞರು, ಇವರುಗಳನ್ನು ಪೂರಕ ಮಾಹಿತಿ ತಜ್ಞರುಗಳನ್ನಾಗಿ ಪರಿಗಣಿಸಿತು. ಸಮಿತಿಯು ರಾಜ್ಯದ ಹಲವಾರು ಕಡೆ ಕ್ಷೇತ್ರ ಅಧ್ಯಯನ ಮಾಡಿದಂತೆ ಮಾಹಿತಿ ಕಲೆಹಾಕಿತು. ಅಧ್ಯಯನಕ್ಕೆ ಅಗತ್ಯವಾದ ಪ್ರಶ್ನಾವಳಿಗಳನ್ನು ರೂಪಿಸಿಕೊಳ್ಳುವುದರ ಜೊತೆಗೆ ನೇರವಾಗಿ ಶಾಲಾ ಪರಿಸ್ಥಿತಿಗಳನ್ನು ಪರಿವೀಕ್ಷಿಸಿತು ಹಾಗೂ ಹಲವಾರು ದಶಕಗಳ ಅನುಭವವುಳ್ಳ ತಜ್ಞರು ಮತ್ತು ಈ ಕ್ಷೇತ್ರದಲ್ಲಿ ಹಲವು ದಶಕಗಳಿಂದ ಕೆಲಸ ನಿರ್ವಹಿಸುತ್ತಿರುವ ಸರ್ಕಾರ ಹಾಗು ಸರ್ಕಾರೇತರ ಸಂಘಟನೆಯ ಗೆಳೆಯರು ತಮ್ಮ ಅಪಾರ ಅನುಭವ ಹಾಗು ಒಳನೋಟಗಳನ್ನು ಆಧರಿಸಿ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಹೀಗಾಗಿ ವರದಿಗೆ ಮಾಹಿತಿಗಳನ್ನು ಕ್ಷೇತ್ರಾಧ್ಯಯನ ತಜ್ಞರ ಜೊತೆ ಚರ್ಚೆ ವಿಚಾರ ವಿನಿಮಯ ಪರಿಶೀಲನೆಗಳ ಮೂಲಕ ಸಂಗ್ರಹಿಸಲಾಗಿದೆ. ಇದರ ಜೊತೆಗೆ ಶಿಕ್ಷಣ ಕ್ಷೇತ್ರದ ಉಸ್ತುವಾರಿ ನಿರ್ವಹಿಸುತ್ತಿರುವ ಅಧಿಕಾರಿಗಳಿಂದ ಅಂಕಿಅಂಶಗಳನ್ನು ಎಲ್ಲ ಜಿಲ್ಲೆಗಳಿಂದಲೂ



samachara.com

ತರಿಸಿಕೊಳ್ಳಲಾಯಿತು. ವಿಶೇಷವಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಜಿಲ್ಲಾ ಪರಿಶೀಲನೆಗೆ ಹೋದಾಗ ಕಡ್ಡಾಯವಾಗಿ ಎಲ್ಲ ಜಿಲ್ಲೆಗಳ ಶೈಕ್ಷಣಿಕ ಪರಿಸ್ಥಿತಿಯನ್ನು ನೇರವಾಗಿ ಪರಿಶೀಲಿಸಿ ಮಾಹಿತಿ ಕಲೆಹಾಕಿತು. ಇದೆಲ್ಲದರ ಸಾರರೂಪದ ಫಲಿತವಾಗಿ ಈ ವರದಿಯನ್ನು ಸಿದ್ಧಪಡಿಸಲಾಗಿದೆ. ಹುಟ್ಟಿನಿಂದ ೧೮ ವರ್ಷದ ಎಲ್ಲಾ ಮಕ್ಕಳು ತಮ್ಮ ಪರಿಸರದಲ್ಲಿಯೇ ಗುಣಾತ್ಮಕ ಆರೈಕೆ, ರಕ್ಷಣೆ ಮತ್ತು ಸಮಾನ ಗುಣಮಟ್ಟದ ಶಿಕ್ಷಣವನ್ನು ಪಡೆಯು ವಂತಹ ಹೊಸ ಶೈಕ್ಷಣಿಕ ವ್ಯವಸ್ಥೆಯನ್ನು ಕುರಿತು ಸಮಗ್ರವಾಗಿ ಈ ವರದಿಯಲ್ಲಿ ಚಿಂತಿಸಲಾಗಿದೆ. ಪ್ರಮುಖವಾಗಿ ಈ ನಾಡಿನ ಎಲ್ಲ ಮಕ್ಕಳು ಸಮಾನ ಗುಣಮಟ್ಟದ ಶಿಕ್ಷಣ ಪಡೆಯುವ ಮೂಲಭೂತ ಹಕ್ಕನ್ನು ಸಾಕಾರಗೊಳಿಸಬೇಕಿದೆ ಎಂಬುದನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಎತ್ತಿ ಹಿಡಿಯುತ್ತದೆ. ಈ ವಿಷಯದಲ್ಲಿ ಸರ್ಕಾರ ತ್ವರಿತ ತೀರ್ಮಾನ ಕೈಗೊಳ್ಳಬೇಕೆಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಒಕ್ಕೊರಲಿನಿಂದ ಸರ್ಕಾರವನ್ನು ಒತ್ತಾಯಿಸುತ್ತದೆ. ನಮ್ಮೆಲ್ಲರ ಈ ಪ್ರಯತ್ನದ ಮೂಲಕ, ರಾಜ್ಯದ ಎಲ್ಲಾ ಮಕ್ಕಳು ಸಮಾನ ಗುಣಮಟ್ಟದ ಶಿಕ್ಷಣ ಪಡೆಯಲು ಅನುವಾಗುವಂತಹ ಒಂದು ಬಲಿಷ್ಠ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಕಟ್ಟಿಕೊಳ್ಳಲು ಸಾಧ್ಯವಾದರೆ ನಮ್ಮೆಲ್ಲರ ಶ್ರಮ ಸಾರ್ಥಕ.

ತಮ್ಮ ನಿರಂತರ ಸಂಶೋಧನೆಯ ಮೂಲಕ ಸಮಾನ ಗುಣಮಟ್ಟದ ಶಿಕ್ಷಣ ನೀತಿಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿರುವ ಮತ್ತು ಸರ್ಕಾರಿ ಶಾಲೆಗಳ ಸಬಲೀಕರಣ ಸಮಿತಿಯ ಕ್ರಿಯಾಶೀಲ ಸಲಹೆಗಾರರಾಗಿ ಕೆಲಸವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿದ ಡಾ. ವಿ.ಪಿ. ನಿರಂಜನಾರಾಧ್ಯರವರಿಗೆ ವಿಶೇಷವಾಗಿ ಪ್ರಾಧಿಕಾರವು ಅಭಾರಿಯಾಗಿದೆ. ಶ್ರೀ ಟಿ.ಎಂ. ಕುಮಾರ್ ಅವರಿಗೆ ಚರ್ಚೆಯಲ್ಲಿ ಭಾಗವಹಿಸಿದ್ದ ಶಿಕ್ಷಣ ತಜ್ಞರುಗಳಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕೃತಜ್ಞತೆ ಸಲ್ಲಿಸುತ್ತಿದೆ.*

**ಪ್ರೊ. ಎಸ್.ಜಿ. ಸಿದ್ಧರಾಮಯ್ಯ**
ಅಧ್ಯಕ್ಷರು
ಸರ್ಕಾರಿ ಶಾಲೆಗಳ ಸಬಲೀಕರಣ ಸಮಿತಿ ಹಾಗೂ
ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ

---

* ಕರ್ನಾಟಕ ಸರ್ಕಾರವು ಸರ್ಕಾರಿ ಶಾಲೆಗಳ ಸಬಲೀಕರಣ ಸಮಿತಿಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ನೇತೃತ್ವದಲ್ಲಿ ೧೩-೦೬-೨೦೧೬ರಲ್ಲಿ ರಚಿಸಿತು. ಆಗ ಕ.ಅ.ಪ್ರಾ. ಅಧ್ಯಕ್ಷರಾಗಿದ್ದವರು ಡಾ. ಎಲ್. ಹನುಮಂತಯ್ಯನವರು. ಈ ಸಂದರ್ಭದಲ್ಲಿ ಅವರನ್ನು ಗೌರವದಿಂದ ನೆನೆಯುತ್ತೇವೆ.

# ಸರ್ಕಾರಿ ಶಾಲೆಗಳ ಸಬಲೀಕರಣ ಸಮಿತಿಯ ವರದಿ

## ಶಿಫಾರಸುಗಳು

### ಶಿಫಾರಸು–೧

ಮಕ್ಕಳ ಜೀವ ರಕ್ಷಣೆಯ ದೃಷ್ಟಿಯಿಂದ ಹಾಗು ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ನಿರಾಳವಾಗಿ ಕಳುಹಿಸುವ ವಾತಾವರಣ ಸೃಷ್ಟಿಯ ಅಗತ್ಯತೆಯಿಂದ, ದುಸ್ಥಿತಿಯಲ್ಲಿರುವ ಎಲ್ಲಾ ಶಾಲಾ ಕೊಠಡಿ ಗಳನ್ನು ತುರ್ತಾಗಿ ನವೀಕರಣಗೊಳಿಸಬೇಕು ಮತ್ತು ಸರ್ಕಾರಿ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ತಕ್ಷಣ ತುರ್ತು ಕ್ರಮ ವಹಿಸಬೇಕು. ಸರ್ಕಾರಿ ಶಾಲೆಗಳನ್ನು ಮುಚ್ಚುವ, ವಿಲೀನ ಮಾಡುವ ಪ್ರಕ್ರಿಯೆಯನ್ನು ತಕ್ಷಣ ನಿಲ್ಲಿಸಿ ಮುಚ್ಚಿರುವ ಎಲ್ಲಾ ಸರ್ಕಾರಿ ಶಾಲೆಗಳನ್ನು ಪುನಃ ತೆರೆಯಲು ಕ್ರಮ ಕೈಗೊಳ್ಳಬೇಕು.

samachara.com

# ವಿವರಣೆ

ಶಿಕ್ಷಣ ಹಕ್ಕು ಕಾಯಿದೆ ಸೆಕ್ಷನ್ ೩(೧).ಇದರ ಅನ್ವಯ, ಆರರಿಂದ ಹದಿನಾಲ್ಕು ವರ್ಷದೊಳಗಿನ ಪ್ರತಿಯೊಂದು ಮಗುವು ತನ್ನ ಹತ್ತಿರದ ಶಾಲೆಯಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮೂಲಭೂತ ಹಕ್ಕನ್ನು ಹೊಂದಿದೆ. ಇದೇ ಸಂದರ್ಭದಲ್ಲಿ ಮಗು ಪ್ರಾಥಮಿಕ ಶಿಕ್ಷಣ ಪಡೆಯಲು ಮತ್ತು ಪೂರ್ಣಗೊಳಿಸಲು ಅಡ್ಡಿಯುಂಟು ಮಾಡಬಹುದಾದ ಯಾವುದೇ ಬಗೆಯ ಶುಲ್ಕ ಅಥವಾ ಖರ್ಚುಗಳನ್ನು ಮಗು ಸಂದಾಯಮಾಡಬೇಕಿಲ್ಲ. ಈ ಹಕ್ಕನ್ನು ಸಾಕಾರಗೊಳಿಸಲು, ಸರ್ಕಾರ ಮಗುವಿನ ನೆರೆಹೊರೆಯಲ್ಲಿ ಶಾಲೆಯನ್ನು ಕಲ್ಪಿಸಬೇಕಿದೆ. ಈ ಶಾಲೆಗಳಲ್ಲಿ, ಶಿಕ್ಷಣ ಹಕ್ಕು ಕಾಯಿದೆ ಅನ್ವಯ ಅಗತ್ಯ ಮೂಲ ಸೌಕರ್ಯವನ್ನು ಒದಗಿಸುವುದು ಸರ್ಕಾರಿ ಶಾಲೆಗಳ ಸಬಲೀಕರಣ ದೃಷ್ಟಿಯಿಂದ ಅತ್ಯಂತ ಮಹತ್ವದ ಕೆಲಸವಾಗಿದೆ.

ಆದರೆ, ಶಿಕ್ಷಣ ಹಕ್ಕು ಕಾಯಿದೆ ಜಾರಿಯಾಗಿ ಏಳು ವರ್ಷಗಳು ಮುಗಿದಿದ್ದರೂ ಸರ್ಕಾರಿ ಶಾಲೆಗಳ ಸ್ಥಿತಿಗತಿ ಹಾಗೇಯೇ ಮುಂದುವರಿದಿದೆ. ಉದಾಹರಣೆಗೆ, ಶಿಕ್ಷಣ ಹಕ್ಕು ಕಾಯಿದೆ ಪ್ರಾರಂಭವಾದ ೨೦೧೦–೧೧ನೇ ಸಾಲಿನಲ್ಲಿ ಕ್ರಮವಾಗಿ ೨೩,೧೯ ಕಿರಿಯ ಮತ್ತು ೨೨,೫೬೮ ಹಿರಿಯ ಪ್ರಾಥಮಿಕ ಶಾಲೆಗಳಿದ್ದವು. ೨೦೧೬–೧೭ನೇ ಸಾಲಿನಲ್ಲಿ ಇವುಗಳ ಸಂಖ್ಯೆ ಕ್ರಮವಾಗಿ ೨೧,೪೪೧ ಮತ್ತು ೨೨,೪೫೪ಕ್ಕೆ ಇಳಿದಿದೆ. ಅಂದರೆ, ಶಿಕ್ಷಣ ಮೂಲಭೂತ ಹಕ್ಕಾಗಿ ಜಾರಿಯಾದ ನಂತರ ಸರ್ಕಾರ ೧೬೬೮ ಕಿರಿಯ ಹಾಗು ೧೧೪ ಹಿರಿಯ ಸರ್ಕಾರಿ ಪ್ರಾಥಮಿಕ ಕನ್ನಡ ಶಾಲೆಗಳನ್ನು ಮುಚ್ಚಿದೆ. ಇದಲ್ಲದೆ ಸಾವಿರಾರು ಶಾಲೆಗಳು ವಿದ್ಯಾರ್ಥಿಗಳ ಕೊರತೆಯ ನೆಪದಲ್ಲಿ ವಿಲೀನೀಕರಣಕ್ಕೆ ಒಳಗಾಗಿವೆ. ಇದೇ ಅವಧಿಯಲ್ಲಿ, ಖಾಸಗಿ ಅನುದಾನ ರಹಿತ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ಕ್ರಮವಾಗಿ ೨೭೬೧ ರಿಂದ ೪೨೭೯ ಹಾಗು ೭೪೯೧ ರಿಂದ ೯೧೫೯ಕ್ಕೆ ಏರಿದೆ. ಕಳೆದ ೭ ವರ್ಷಗಳಲ್ಲಿ ೧೭೭೮

ಸರ್ಕಾರಿ ಶಾಲೆಗಳು ಮುಚ್ಚಿದ್ದರೆ ೩೧೮೬ ಖಾಸಗಿ ಅನುದಾನ ರಹಿತ ಶಾಲೆಗಳು ಪ್ರಾರಂಭವಾಗಿವೆ.

ಮೂಲಭೂತ ಸೌಕರ್ಯಗಳನ್ನು ಅದರಲ್ಲೂ ವಿಶೇಷವಾಗಿ ಕಲಿಕೆಗೆ ಅಗತ್ಯವಾದ ತರಗತಿ ಕಲಿಕಾ ಕೋಣೆಗಳ ಸ್ಥಿತಿಯನ್ನು ನೋಡುವುದಾದರೆ ೨೦೧೦-೧೧ರಲ್ಲಿ ರಾಜ್ಯದ ಎಲಿಮೆಂಟರಿ ಶಾಲೆಗಳಲ್ಲಿ ಲಭ್ಯವಿದ್ದ ಒಟ್ಟು ಕೊಠಡಿಗಳು ೧,೯೮,೪೧೫. ಅವುಗಳಲ್ಲಿ ಕಲಿಕೆಗೆ ಬಳಸಬಹುದಾದ ಉತ್ತಮ ಕೊಠಡಿಗಳು ೧,೩೫,೦೦೦. ಅಂದರೆ ಸರಿಸುಮಾರು ೬೩,೪೧೫ ಕೊಠಡಿಗಳು ಕಲಿಕೆಗೆ ಪೂರಕವಾಗಿಲ್ಲ. ೨೦೧೬-೧೭ರಲ್ಲಿ ಎಲಿಮೆಂಟರಿ ಶಾಲೆಗಳಲ್ಲಿ ಲಭ್ಯವಿದ್ದ ಒಟ್ಟು ಕೊಠಡಿಗಳು ೨,೧೧,೦೯೮. ಅವುಗಳಲ್ಲಿ ಕಲಿಕೆಗೆ ಬಳಸಬಹುದಾದ ಉತ್ತಮ ಕೊಠಡಿಗಳು ೧,೩೭,೯೬೯. ಅಂದರೆ ಸರಿಸುಮಾರು ೭೩,೧೨೯ ಕೊಠಡಿಗಳು ಕಲಿಕೆಗೆ ಪೂರಕವಾಗಿಲ್ಲ. ಒಟ್ಟಾರೆ, ಕಲಿಕೆಗೆ ಯೋಗ್ಯವಿಲ್ಲದ ಕೊಠಡಿಗಳ ಸಂಖ್ಯೆ ೨೦೧೦-೧೧ ರಲ್ಲಿ ೬೩,೪೧೫ ರಿಂದ ೨೦೧೬-೧೭ ರಲ್ಲಿ ೭೩,೧೨೯ಕ್ಕೆ ಏರಿದೆ. ಜೊತೆಗೆ, ಶೌಚಾಲಯ, ವಿದ್ಯುಚ್ಛಕ್ತಿ, ಗ್ರಂಥಾಲಯ, ಕುಡಿಯುವ ನೀರು, ಆಟದ ಮೈದಾನ ಇತ್ಯಾದಿ ಸೌಲಭ್ಯಗಳು ಕೇವಲ ಅಂಕಿ-ಅಂಶಗಳಾಗಿಯೇ ಉಳಿದಿದ್ದು ಕಾರ್ಯ ನಿರ್ವಹಣೆ ದೃಷ್ಟಿಯಿಂದ ಅವು ಉಪಯೋಗಕ್ಕೆ ಬಾರದಂತಿವೆ. ಪರಿಸ್ಥಿತಿ, ಹೀಗಿದ್ದಲ್ಲಿ ಸರ್ಕಾರಿ ಶಾಲೆ ಉಳಿದು-ಬೆಳೆಯುವ ಬಗೆಯಾದರು ಹೇಗೆ ಎಂಬ ಪ್ರಶ್ನೆ ಎಲ್ಲಾ ಪ್ರಜ್ಞಾವಂತ ನಾಗರಿಕರನ್ನು ಕಾಡುತ್ತಿದೆ.

ಇನ್ನು ಶಿಕ್ಷಕರ ವಿಷಯಕ್ಕೆ ಸಂಬಂಧಿಸಿದಂತೆ, ೨೦೧೦-೧೧ನೇ ಸಾಲಿನಲ್ಲಿ ಎಲಿಮೆಂಟರಿ ಶಾಲೆಗಳಲ್ಲಿ ಒಟ್ಟು ಮುಂಜೂರಾದ ಮತ್ತು ಕಾರ್ಯನಿರ್ವಹಿಸುತ್ತಿದ್ದ ಶಿಕ್ಷಕರ ಸಂಖ್ಯೆ ಕ್ರಮವಾಗಿ ೨೦೨೪೮೩ ಮತ್ತು ೧೮೯೪೫೧. ಇದು ೨೦೧೬-೧೭ನೇ ಸಾಲಿನಲ್ಲಿ ಕ್ರಮವಾಗಿ ೧,೯೪,೭೧೮ ಮತ್ತು ೧೬೬೧೩೬. ಅಂದರೆ, ೨೦೧೬-೧೭ನೇ ಸಾಲಿನಲ್ಲಿ ಎಲಿಮೆಂಟರಿ ಶಾಲೆಗಳಲ್ಲಿ ಮುಂಜೂರಾದ ಹುದ್ದೆಗಳ ಪೈಕಿ ಖಾಲಿಯಿರುವ ಶಿಕ್ಷಕರ ಹುದ್ದೆಗಳ ಸಂಖ್ಯೆ ೨೮,೫೮೨.

ಈ ಎಲ್ಲಾ ಅಂಶಗಳನ್ನು ಸೂಕ್ಮವಾಗಿ ಗಮನಿಸಿದರೆ, ಸರ್ಕಾರ ಸರ್ಕಾರಿ ಶಾಲೆಗಳನ್ನು ಉಳಿಸಿ ಬೆಳೆಸಿ ನೆರೆಹೊರೆಯ ಸಮಾನ ಶಾಲೆಗಳನ್ನಾಗಿಸಲು ಈ ಕೆಳಕಂಡ ಕ್ರಮಗಳನ್ನು ತಕ್ಷಣ ಕೈಗೊಳ್ಳಬೇಕು:

samachara.com

- ಸರ್ಕಾರ ಈಗ ಮುಚ್ಚಿರುವ ಎಲ್ಲಾ ಸರ್ಕಾರಿ ಶಾಲೆಗಳನ್ನು ಪುನರಾರಂಭಿಸುವುದು.

- ಮುಚ್ಚಿರುವ ಸರ್ಕಾರಿ ಶಾಲೆಗಳ ಯಾವುದೇ ಆಸ್ತಿ, ಜಾಗ, ಸೌಲಭ್ಯಗಳನ್ನು ಯಾವುದೇ ಖಾಸಗಿ ವ್ಯಕ್ತಿ ಅಥವಾ ಸಂಸ್ಥೆಗೆ ಅಥವಾ ಸರ್ಕಾರದ ಇತರೆ ಇಲಾಖೆಯವರಿಗೆ ಪರಭಾರೆ ಮಾಡದಂತೆ ಎಚ್ಚರಿಕೆಯ ಕ್ರಮವಹಿಸಿ ಮುಚ್ಚಿರುವ ಶಾಲೆಗಳನ್ನು ಆದಷ್ಟೂ ಶೀಘ್ರವಾಗಿ ಪುನರಾರಂಭಿಸುವುದು.

- ಸರ್ಕಾರಿ ಶಾಲೆಗಳಲ್ಲಿ ಖಾಲಿಯಿರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವುದರ ಜೊತೆಗೆ ಸರ್ಕಾರಿ ಶಾಲೆಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮವಹಿಸುವುದು.

samachara.com

## ಶಿಫಾರಸು–೨

**ಸರ್ಕಾರಿ ಕಿರಿಯ–ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಪೂರ್ವ–ಪ್ರಾಥಮಿಕ ತರಗತಿಗಳನ್ನು ತಕ್ಷಣ ಪ್ರಾರಂಭಿಸಬೇಕು.**

samachara.com

# ವಿವರಣೆ

ರಾಜ್ಯದ ಸರ್ಕಾರಿ ಕಿರಿಯ-ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣದ ವ್ಯವಸ್ಥೆ ಇಲ್ಲದಿರುವುದು ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕುಸಿಯಲು ಒಂದು ಪ್ರಮುಖ ಕಾರಣವಾಗಿದೆ.

ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ ೨೦೦೯ ಪ್ರಕರಣ ೧೧ರ ಅನ್ವಯ ಮೂರು ವರ್ಷ ತುಂಬಿ ನಾಲ್ಕನೇ ವರ್ಷಕ್ಕೆ ಕಾಲಿರಿಸುವ ಮಕ್ಕಳನ್ನು ಪ್ರಾಥಮಿಕ ಶಿಕ್ಷಣಕ್ಕಾಗಿ ಸಿದ್ಧಗೊಳಿಸುವ ದೃಷ್ಟಿಯಿಂದ ಮತ್ತು ಮಕ್ಕಳು ಆರು ವರ್ಷ ಪೂರೈಸುವವರೆಗೆ ಅವರಿಗೆ ಎಳೆ ವಯಸ್ಸಿನ ಆರೈಕೆ ದೊರಕಿಸಿ ಶಿಕ್ಷಣ ಒದಗಿಸುವ ದೃಷ್ಟಿಯಿಂದ ಪೂರ್ವಪ್ರಾಥಮಿಕ ತರಗತಿ-೧ (ಎಲ್‌ಕೆಜಿ) ಹಾಗು ಪೂರ್ವಪ್ರಾಥಮಿಕ ತರಗತಿ-೨ (ಯುಕೆಜಿ) ಮಾದರಿಯಲ್ಲಿ ಸರ್ಕಾರವು ಸಮುಚಿತ ಕಿರಿಯ-ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಉಚಿತ ಪ್ರಾಥಮಿಕ ಶಾಲಾ ಪೂರ್ವ ಶಿಕ್ಷಣ ಒದಗಿಸುವುದಕ್ಕಾಗಿ ಅಗತ್ಯ ವ್ಯವಸ್ಥೆ ಮಾಡಬೇಕೆಂದು ಹೇಳುತ್ತದೆ.

ಈ ಹಿನ್ನೆಲೆಯಲ್ಲಿ, ಸರ್ಕಾರಿ ಕಿರಿಯ-ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದಲೇ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಲು ತಕ್ಷಣ ಅಗತ್ಯ ಕ್ರಮವಹಿಸುವುದು.

samachara.com

## ಶಿಫಾರಸು–೩

**ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರನ್ನು ಪ್ರಧಾನವಾಗಿ ಕಲಿಕೆಗೆ ಮಾತ್ರ ತೊಡಗಿಸಿಕೊಂಡು ಎಲ್ಲಾ ರೀತಿಯ ಕಲಿಕೇತರ ಕೆಲಸಗಳಿಂದ ಅವರನ್ನು ಮುಕ್ತಗೊಳಿಸಬೇಕು.**

samachara.com

# ವಿವರಣೆ

ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ ೨೦೦೯ ಪ್ರಕರಣ ೨೭ರ ಅನ್ವಯ ದಶವಾರ್ಷಿಕ ಜನಗಣತಿ, ವಿಪತ್ತು ಪರಿಹಾರ ಕಾರ್ಯಗಳು ಅಥವಾ ಸಂದರ್ಭಾನುಸಾರ, ಸ್ಥಳೀಯ ಪ್ರಾಧಿಕಾರ ಅಥವಾ ರಾಜ್ಯ ವಿಧಾನ ಮಂಡಲ ಅಥವಾ ಸಂಸತ್ತು ಚುನಾವಣೆಗಳಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಹೊರತುಪಡಿಸಿ, ಉಳಿದ ಯಾವುದೇ ಶಿಕ್ಷಣೇತರ ಉದ್ದೇಶಗಳಿಗಾಗಿ ಶಿಕ್ಷಕರನ್ನು ನಿಯೋಜಿಸಬಾರದು ಎಂದು ಹೇಳುತ್ತದೆ.

ಆದರೆ, ವಾಸ್ತವದಲ್ಲಿ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕಾರ್ಯಭಾರ ಬೇರೆ ರೀತಿಯೇ ಇದೆ. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಒಂದರಿಂದ ಐದನೇ ತರಗತಿಯವರೆಗೆ ಬೋಧಿಸಲು ಇಬ್ಬರು ಶಿಕ್ಷಕರಿರುತ್ತಾರೆ. ಅದರಲ್ಲಿ ಒಬ್ಬರು ನಲಿ-ಕಲಿ ಅಂದರೆ ಒಂದರಿಂದ ಮೂರನೇ ತರಗತಿಯನ್ನು ದಿನವಿಡೀ ನಿರ್ವಹಿಸುತ್ತಾರೆ. ಮತ್ತೊಬ್ಬರು ನಾಲ್ಕು ಮತ್ತು ಐದನೇ ತರಗತಿಗೆ ಮೂರು ಭಾಷೆಗಳು, ಮೂರು ಐಚ್ಛಿಕ ವಿಷಯಗಳು ಹಾಗೂ ದೈಹಿಕ ಶಿಕ್ಷಣ ಸೇರಿ ಒಟ್ಟು ಹನ್ನೆರಡು ವಿಷಯಗಳನ್ನು ಒಂದು ಕರ್ತವ್ಯದ ದಿನದಲ್ಲಿ ನಿರ್ವಹಿಸಬೇಕಾಗುತ್ತದೆ. ಬೋಧಿಸುವ ಜೊತೆಗೆ ಮುಖ್ಯ ಶಿಕ್ಷಕರ ಕಾರ್ಯಭಾರವನ್ನು ನಿರ್ವಹಿಸುವ ಅನಿವಾರ್ಯತೆ ಇದೆ. ಅದೇ ರೀತಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಒಂದರಿಂದ ಏಳನೇ ತರಗತಿ ಬೋಧಿಸಲು ಮೂರು ಅಥವಾ ನಾಲ್ಕು ಜನ ಶಿಕ್ಷಕರಿರುತ್ತಾರೆ. ಅದರಲ್ಲಿ ಒಬ್ಬರು ನಲಿ-ಕಲಿ ತರಗತಿ ನಿರ್ವಹಣೆ ಮಾಡುತ್ತಾರೆ. ಉಳಿದ ಎರಡು ಅಥವಾ ಮೂರು ಜನರು ನಾಲ್ಕರಿಂದ ಏಳನೇ ತರಗತಿವರೆಗೆ ಆರು ವಿಷಯಗಳನ್ನು ಹಂಚಿಕೊಂಡರೆ (ಮೂರು ಭಾಷೆ +ಮೂರು ಐಚ್ಛಿಕ ವಿಷಯ+ಒಂದು ದೈಹಿಕ ಶಿಕ್ಷಣ * ನಾಲ್ಕು ತರಗತಿ=ಇಪ್ಪತೆಂಟು ವಿಷಯಗಳು) ಒಬ್ಬೊಬ್ಬರು ಕನಿಷ್ಠ ಒಂಭತ್ತು ವಿಷಯಗಳನ್ನು ದಿನದಲ್ಲಿ ಬೋಧಿಸಬೇಕು. ಅದರಲ್ಲಿ ಒಬ್ಬರಿಗೆ ಮುಖ್ಯ ಶಿಕ್ಷಕರ ಜವಾಬ್ದಾರಿ ನಿರ್ವಹಣೆಯ ಅನಿವಾರ್ಯತೆಯಿದೆ. ಹಾಗೂ



samachara.com

೬–೭ನೇ ತರಗತಿಗಳಿಗೆ ಆಂಗ್ಲ ಮಾಧ್ಯಮ ತೆರೆದಿರುವ ಶಾಲೆಗಳಲ್ಲಿ ಇದೇ ಶಿಕ್ಷಕರು ಆಂಗ್ಲ ಮಾಧ್ಯಮದಲ್ಲಿಯೂ ಬೋಧಿಸಬೇಕಾಗಿದೆ. ಪ್ರತಿ ಶಾಲೆಯಲ್ಲಿನ ಶಿಕ್ಷಕರಿಗೆ ಬೋಧನೇತರವಾಗಿರುವ ಹೆಚ್ಚುವರಿ ಕಾರ್ಯಭಾರದ ಉದಾಹರಣೆಗಳು ಈ ಕೆಳಕಂಡಂತಿದೆ :

೧. ಅಕ್ಷರ ದಾಸೋಹ ಕಾರ್ಯಕ್ರಮ ಹಾಗು ದಾಖಲೆ ನಿರ್ವಹಣೆ

೨. ಕ್ಷೀರಭಾಗ್ಯ ಕಾರ್ಯಕ್ರಮ ಹಾಗು ದಾಖಲೆ ನಿರ್ವಹಣೆ

೩. ಆಧಾರ್ ನೋಂದಣಿ ಕಾರ್ಯಕ್ರಮ ಹಾಗು ದಾಖಲೆ ನಿರ್ವಹಣೆ

೪. ಮಾತ್ರೆ ವಿತರಣೆ ಕಾರ್ಯಕ್ರಮ ಹಾಗು ದಾಖಲೆ ನಿರ್ವಹಣೆ

೫. ಶೂ, ಬೈಸಿಕಲ್, ಸಮವಸ್ತ್ರ, ಪಠ್ಯಪುಸ್ತಕ ವಿತರಣೆ, ವಿದ್ಯಾರ್ಥಿ ವೇತನ ಹಾಗು ದಾಖಲೆ ನಿರ್ವಹಣೆ

೬. ಬೋಧಕೇತರ ಸಿಬ್ಬಂದಿ ಇಲ್ಲದಿರುವುದರಿಂದ ಎಲ್ಲಾ ಶಾಲಾ ದಾಖಲೆಗಳ ನಿರ್ವಹಣೆ

೭. ವಿವಿಧ ಅನುದಾನಗಳ ಸಮರ್ಪಕ ವೆಚ್ಚ ಹಾಗು ದಾಖಲೆ ನಿರ್ವಹಣೆ

೮. ವೆಚ್ಚವಾದ ಅನುದಾನಗಳ ಲೆಕ್ಕಪತ್ರ ಹಾಗು ದಾಖಲೆ ನಿರ್ವಹಣೆ

೯. ಬ್ಯಾಂಕ್ ನೊಂದಿಗೆ ಶಾಲೆಯ ವ್ಯವಹಾರ ಖಾತೆಯ ನಿರ್ವಹಣೆ

೧೦. ಬಿಎಲ್ಓ ಕಾರ್ಯಭಾರ (ಭೂತ್ ಲೆಟರ್ ಆಫಿಸರ್)

೧೧. ಸಮಾಜ ಕಲ್ಯಾಣ ಇಲಾಖೆ ಹಿಂದುಳಿದ ವರ್ಗಗಳ ಇಲಾಖೆಯೊಂದಿಗಿನ ವ್ಯವಹಾರ

೧೨. ಶೌಚಾಲಯ ಮತ್ತು ಕುಡಿಯುವ ನೀರಿನ ನಿರ್ವಹಣೆ, ಸ್ವಚ್ಛತೆ ಕಾಪಾಡುವುದು

೧೩. ಇತರೆ ಅನಿರೀಕ್ಷಿತ ಕಾರ್ಯಕ್ರಮಗಳು

೧೪. ಚುನಾವಣಾ ಕರ್ತವ್ಯ

೧೫. ಜನಗಣತಿ

೧೬. ಜಾತಿಗಣತಿ

samachara.com

೧೭. ಮಕ್ಕಳ ಗಣತಿ

೧೮. ಶಾಲಾ ಅವಧಿಯಲ್ಲಿ ಅನಗತ್ಯ ತರಬೇತಿಗಳು

೧೯. ಇಲಾಖೆ ಮತ್ತು ಸಿಆರ್‌ಪಿ ಗಳಿಗೆ ಮೇಲಿಂದ ಮೇಲೆ ಮಾಹಿತಿ ಒದಗಿಸುವುದು

೨೦. ಏಕೋಪಾಧ್ಯಾಯ ಶಾಲೆಗೆ ನಿಯೋಜನೆ

ಇಷ್ಟೆಲ್ಲಾ ಕಾರ್ಯಭಾರಗಳು ಕಲಿಕೆಗೆ ಅಡ್ಡಿಯುಂಟು ಮಾಡುತ್ತಿರುವುದರಿಂದ ಕಲಿಕಾ ಸಮಯ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದ್ದು ಮಕ್ಕಳ ಪಾಲಕರಿಗೆ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಕುಸಿಯುತ್ತಿದೆ ಎಂಬ ಭಾವನೆ ಬೆಳೆಯುತ್ತಿದ್ದು ಅನಿವಾರ್ಯವಾಗಿ ಖಾಸಗಿ ಶಾಲೆಗಳತ್ತ ಮುಖ ಮಾಡುವಂತಾಗಿದೆ. ವಾಸ್ತವದಲ್ಲಿ ಇದು ಸತ್ಯವೂ ಹೌದು.

ಈ ಎಲ್ಲ ಕಾರಣಗಳಿಂದ ಸರ್ಕಾರ ಈ ಬಗ್ಗೆ ಗಂಭೀರವಾಗಿ ಗಮನಹರಿಸಿ ಶಿಕ್ಷಕರಿಗೆ ಕಲಿಕೇತರ ಅನ್ಯಕಾರ್ಯಭಾರವನ್ನು ಕಡಿಮೆ ಮಾಡಿ ಶಿಕ್ಷಕರು ಪೂರ್ಣವಾಗಿ ಕಲಿಕೆಯಲ್ಲಿ ತೊಡಗಿಸಿಕೊಳ್ಳಲು ಅನುವಾಗುವಂತೆ ಕ್ರಮವಹಿಸಬೇಕಿದೆ.

samachara.com

## ಶಿಫಾರಸು–೪

ಸರ್ಕಾರಿ ಶಾಲೆಗಳ ಗುಣಮಟ್ಟ ಸುಧಾರಿಸಲು ಪ್ರತಿ ಶಾಲೆಗೂ ಕನಿಷ್ಠ ತರಗತಿಗೊಬ್ಬ ಶಿಕ್ಷಕ, ವಿಷಯಕ್ಕೊಬ್ಬ ಶಿಕ್ಷಕರ ನೇಮಕಾತಿಯ ಅಗತ್ಯವಿದೆ. ಮಕ್ಕಳ–ಶಿಕ್ಷಕರ ಆದರ್ಶ ಅನುಪಾತ ಮುಟ್ಟುವವರೆಗೆ ಕನಿಷ್ಠ ವಿಷಯವಾರು ಬೋಧನೆಯ ಪ್ರಮಾಣದ ಅನುಪಾತವನ್ನೂ ಗಮನಿಸಿ ಶಿಕ್ಷಕರನ್ನು ಒದಗಿಸಬೇಕು.

samachara.com

# ವಿವರಣೆ

ಸರ್ಕಾರಿ ಶಾಲೆಗಳಲ್ಲಿ ಒಬ್ಬನೇ ಶಿಕ್ಷಕ ಒಂದೇ ತರಗತಿಯಲ್ಲಿ ದಿನಪೂರ್ತಿ ಕಾರ್ಯನಿರ್ವಹಿಸುತ್ತಾನೆ. ಶೈಕ್ಷಣಿಕ ಮನೋವಿಜ್ಞಾನದ ಪ್ರಕಾರ ಒಬ್ಬ ಶ್ರೇಷ್ಠ ಶಿಕ್ಷಕ ಒಂದು ವಿಷಯದ ಕಡೆಗೆ ಒಂದು ಬಾರಿಗೆ ಗರಿಷ್ಠ ೩೦–೪೦ ನಿಮಿಷಗಳ ಕಾಲ ಮಕ್ಕಳ ಅವಧಾನವನ್ನು ಕೇಂದ್ರೀಕರಿಸಬಲ್ಲರು. ಮಕ್ಕಳು ಕೂಡ ಹೆಚ್ಚು ಕಾಲ ಒಂದೇ ವಿಷಯದ ಕಡೆಗೆ ಗಮನವನ್ನು ಕೇಂದ್ರೀಕರಿಸಲಾಗುವುದಿಲ್ಲ. ಆದರೆ ಸರ್ಕಾರಿ ಶಾಲೆಗಳಲ್ಲಿ ಒಬ್ಬನೇ ಶಿಕ್ಷಕ ಹಲವು ವಿಷಯಗಳನ್ನು ಒಂದೇ ತರಗತಿಗೆ ದಿನಪೂರ್ತಿ ಬೋಧಿಸುತ್ತಾನೆ. ನಲಿ–ಕಲಿ ಹಾಗೂ ಕಲಿ–ನಲಿ ಹೆಸರಿನಲ್ಲಿ ಬಹುವರ್ಗ ಬೋಧನೆಯನ್ನು ಕಾನೂನುಬದ್ಧಗೊಳಿಸುವ ಕೆಲಸವನ್ನು ಇಲಾಖೆ ಮಾಡುತ್ತಿದೆ. ಇದರಿಂದ ಕಲಿಕೆ ಪರಿಣಾಮಕಾರಿಯಾಗುವುದಿಲ್ಲ. ಶಿಕ್ಷಕನಿಗೂ ಮಕ್ಕಳಿಗೂ ಏಕತಾನತೆ ಕಾಡುತ್ತದೆ. ಇದು ಮಕ್ಕಳ ಕಲಿಕೆಯ ವೇಗವನ್ನು ಕಡಿಮೆ ಮಾಡುತ್ತದೆ. ಹಾಗೂ ಶಿಕ್ಷಕನ ಕಲಿಸುವ ಉತ್ಸಾಹವನ್ನು ಕುಗ್ಗಿಸುತ್ತದೆ. ಸರ್ಕಾರಿ ಶಾಲೆಗಳ ಬಲವರ್ಧನೆಯ ದೃಷ್ಟಿಯಿಂದ ನಲಿಕಲಿ–ಕಲಿನಲಿ ಪದ್ಧತಿಯನ್ನು ರದ್ದುಗೊಳಿಸಿ ಬಹುವರ್ಗ ಬೋಧನೆಯನ್ನು ಕೈಬಿಟ್ಟು ತರಗತಿವಾರು ಬೋಧನೆಗೆ ಕ್ರಮವಹಿಸಬೇಕು.

samachara.com

ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಒಬ್ಬ ಶಿಕ್ಷಕ ೧ ರಿಂದ ೫ ನೇ ತರಗತಿಗಳಿಗೆ ಒಂದು ದಿನದಲ್ಲಿ ಎಲ್ಲಾ ವಿಷಯಗಳನ್ನು ಬೋಧಿಸುವ ಅನಿವಾರ್ಯತೆಯಿದೆ. ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ೩–೪ ವಿಷಯಗಳನ್ನು ಒಬ್ಬನೇ ಶಿಕ್ಷಕ ಬೋಧಿಸುತ್ತಾನೆ. ಬೋಧನಾ ಶಾಸ್ತ್ರದ ಪ್ರಕಾರ ಒಬ್ಬ ಶಿಕ್ಷಕ ಒಂದೆರಡು ವಿಷಯಗಳ ಬೋಧನಾ ತತ್ವಗಳನ್ನು ಸಮರ್ಥವಾಗಿ ಕಲಿತು ಅಳವಡಿಸಬಹುದು. ಆದರೆ ಒಬ್ಬನೇ ಶಿಕ್ಷಕ ಎಲ್ಲಾ ವಿಷಯಗಳನ್ನು ಬೋಧಿಸುತ್ತಾನೆ ಎಂದರೆ ಕಲಿಕೆಯ ಗುಣಮಟ್ಟ ಅಪೇಕ್ಷಿತ ಮಟ್ಟದಲ್ಲಿರುವುದು ಸಾಧ್ಯವಿಲ್ಲ. ಒಟ್ಟಾರೆ, ಸರ್ಕಾರಿ ಶಾಲೆಗಳಲ್ಲಿ ಇಂದು ಶಿಕ್ಷಕರು ಅನಗತ್ಯ ಒತ್ತಡ, ಆತಂಕ ಹಾಗು ಉದ್ವೇಗಗಳಿಗೆ ಒಳಗಾಗಿದ್ದಾರೆ. ಇದರ

ಪರಿಣಾಮ ನೇರವಾಗಿ ಕಲಿಕೆಯ ಮೇಲಾಗುತ್ತದೆ. ಇವೆಲ್ಲದರ ನಿರ್ವಹಣೆಯಲ್ಲಿ ಮುಳುಗಿದ ಶಿಕ್ಷಕ ತನ್ನ ಮುಖ್ಯಕಾರ್ಯವಾದ ಅಧ್ಯಾಪನದಿಂದ ವಿಮುಖನಾಗಿದ್ದಾನೆ. ಇದು ನಮ್ಮ ಬಹುಪಾಲು ಸರ್ಕಾರಿ ಶಾಲೆಗಳ ಸ್ಥಿತಿಯಾಗಿದೆ.

ಆದಷ್ಟು ಶೀಘ್ರವಾಗಿ ಕನಿಷ್ಠ ವಿಷಯಕೊಬ್ಬ ಮತ್ತು ತರಗತಿಗೊಬ್ಬ ಶಿಕ್ಷಕನನ್ನು ಒದಗಿಸದಿದ್ದಲ್ಲಿ ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಗಗನ ಕುಸುಮವಾಗಿಯೇ ಉಳಿಯಲಿದೆ. ಶಿಕ್ಷಣ ಮಗುವಿನ ಸರ್ವತೋಮುಖ ಅಭಿವೃದ್ಧಿಗೆ ಒತ್ತು ನೀಡಬೇಕೆಂಬುದು ಶಿಕ್ಷಣ ಹಕ್ಕು ಕಾಯ್ದೆಯ ಆಶಯವಾಗಿದೆ. ಆದರೆ ಇಂದಿನ ಶಾಲಾ ಶಿಕ್ಷಣದ ವಿವಿಧ ಹಂತಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅದು ಸಾಧ್ಯವಾಗುತ್ತಿಲ್ಲ ಎಂಬ ಸತ್ಯ ಸಂಗತಿ ಕಂಡು ಬರುತ್ತದೆ. ಮಗುವಿನ ಸರ್ವತೋಮುಖ ಬೆಳವಣಿಗೆಗೆ ಸಹಾಯಕವಾಗುವಂತಹ ಕಲಿಕಾ ವ್ಯವಸ್ಥೆಯನ್ನು ಕಟ್ಟಿಕೊಳ್ಳುವುದು ಇಂದಿನ ತುರ್ತು ಅಗತ್ಯವಾಗಿದೆ.

samachara.com

samachara.com

## ಶಿಫಾರಸು–೫

ಶಿಕ್ಷಕರು ಸಕ್ರಿಯವಾಗಿ ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡು ತಮ್ಮ ವೃತ್ತಿ ನೈಪುಣ್ಯತೆಯನ್ನು ಉನ್ನತೀಕರಿಸಿಕೊಳ್ಳಲು ಕಾಲಕಾಲಕ್ಕೆ ಸೂಕ್ತ ಮಾರ್ಗದರ್ಶನ, ತರಬೇತಿ ಮತ್ತು ಅನುಪಾಲನೆಗೆ ಪೂರಕವಾದ ಬೆಂಬಲ ವ್ಯವಸ್ಥೆಗಳನ್ನು ಬಲವರ್ಧನೆಗೊಳಿಸುವುದು.

samachara.com

# ವಿವರಣೆ

ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ ೨೦೦೯ ಪ್ರಕರಣ ೨೪ರ ಅನ್ವಯ ಶಿಕ್ಷಕ/ಶಿಕ್ಷಕಿ ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸಬೇಕಾಗುತ್ತದೆ.

- ಶಾಲೆಯಲ್ಲಿ ಸೇವೆ ಸಲ್ಲಿಸುವಾಗ ಕ್ರಮಬದ್ಧತೆ ಮತ್ತು ಸಮಯ ಪಾಲನೆ;
- ಕಾಯ್ದೆಯ ೨೯ನೇ ಪ್ರಕರಣದ (೨)ನೇ ಉಪ–ಪ್ರಕರಣದ ಉಪಬಂಧಗಳಿಗನುಸಾರವಾಗಿ ಪಠ್ಯ ವಿಷಯವನ್ನು ಬೋಧಿಸುವುದು ಮತ್ತು ಪಠ್ಯ ವಿಷಯದ ಬೋಧನೆಯನ್ನು ಪೂರ್ಣಗೊಳಿಸುವುದು;
- ಗೊತ್ತುಪಡಿಸಿದ ವೇಳೆಯೊಳಗೆ ಸಮಗ್ರ ಪಠ್ಯ ವಿಷಯದ ಬೋಧನೆಯನ್ನು ಪೂರ್ಣಗೊಳಿಸುವುದು;
- ಪ್ರತಿಯೊಂದು ಮಗುವಿನ ಕಲಿಕಾ ಸಾಮರ್ಥ್ಯವನ್ನು ನಿರ್ಧರಿಸಿ ಅದಕ್ಕನುಸಾರವಾಗಿ, ಹೆಚ್ಚುವರಿ ಬೋಧನೆಯೇನಾದರೂ ಅಗತ್ಯವಿದ್ದರೆ ಅದನ್ನೂ ಸೇರಿಸುವುದು.
- ತಂದೆ–ತಾಯಿಗಳೊಂದಿಗೆ ಮತ್ತು ಪಾಲಕರೊಂದಿಗೆ ನಿಯತವಾಗಿ ಸಭೆಗಳನ್ನು ನಡೆಸುವ ಮೂಲಕ ಮಕ್ಕಳು ಕ್ರಮಬದ್ಧವಾಗಿ ಶಾಲೆಗೆ ಬರುತ್ತಿರುವ ಬಗ್ಗೆ, ಅವರ ಕಲಿಕಾ ಸಾಮರ್ಥ್ಯದ ಬಗ್ಗೆ, ಕಲಿಕೆಯಲ್ಲಿ ಸಾಧಿಸಿದ ಪ್ರಗತಿಯ ಬಗ್ಗೆ ಮತ್ತು ಯಾವುದೇ ಇತರ ಸಂಬಂಧಪಟ್ಟ ಮಾಹಿತಿಯ ಬಗ್ಗೆ ಅವರಿಗೆ ತಿಳಿಯಪಡಿಸುವುದು.
- ನಿಯಮಿಸಬಹುದಾದಂಥ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

ಶಿಕ್ಷಣ ಹಕ್ಕು ಕಾಯಿದೆಯಲ್ಲಿ ಶಿಕ್ಷಕರು ಕಡ್ಡಾಯವಾಗಿ ನಿರ್ವಹಿಸಲೇಬೇಕಾದ ಕರ್ತವ್ಯಗಳನ್ನು ಸ್ಪಷ್ಟವಾಗಿ ನಮೂದಿಸಿದ್ದರೂ ಆ ಕರ್ತವ್ಯಗಳನ್ನು ಶಿಸ್ತುಬದ್ಧವಾಗಿ

samachara.com

ಮತ್ತು ವೃತ್ತಿ ನೈಪುಣ್ಯತೆ ಅಥವಾ ಕಸುಬುದಾರಿಕೆಯಿಂದ ಕೆಲಸ ನಿರ್ವಹಿಸಲು ಸಾಧ್ಯವಾಗದ ರೀತಿಯಲ್ಲಿ ಕಲಿಕಾ ವ್ಯವಸ್ಥೆಯನ್ನು ಸಂಘಟಿಸಲಾಗಿದೆ. ಒಂದೆಡೆ, ಶಿಫಾರಸು ೩ರಲ್ಲಿ ಪ್ರಸ್ತಾಪಿಸಿದ ಕಲಿಕೇತರ ಚಟುವಟಿಕೆಗಳಿಂದ ಶಿಕ್ಷಕರು ಕೆಲಸ ನಿರ್ವಹಿಸಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದ್ದರೆ, ಮತ್ತೊಂದೆಡೆ ಶಿಕ್ಷಕರ ಕಾರ್ಯವೈಖರಿ, ಉತ್ತರದಾಯಿತ್ವ ಹಾಗು ಕ್ರಿಯಾಶೀಲತೆಯನ್ನು ನಿರಂತರವಾಗಿ ಮತ್ತು ಕ್ರಮಬದ್ಧವಾಗಿ ಮೇಲ್ವಿಚಾರಣೆ ಹಾಗು ಅನುಪಾಲನೆಯ ಮೂಲಕ ಪುನಶ್ಚೇತನಗೊಳಿಸಿ ಬಲಿಷ್ಠ ಕಲಿಕಾ ವ್ಯವಸ್ಥೆಯನ್ನು ಕಟ್ಟಿಕೊಡಬೇಕಾದ ಎಲ್ಲಾ ಶೈಕ್ಷಣಿಕ ಬೆಂಬಲಿತ ವ್ಯವಸ್ಥೆಗಳು ನಿಷ್ಕ್ರಿಯವಾಗಿವೆ.

ಕಲಿಕೆಯನ್ನು ಉತ್ಕೃಷ್ಟಗೊಳಿಸಲು ಕೆಲಸ ನಿರ್ವಹಿಸಬೇಕಾದ ಶೈಕ್ಷಣಿಕ ಸಂರಚನೆಗಳಾದ ಗುಚ್ಛಸಂಪನ್ಮೂಲ ಕೇಂದ್ರ, (ಕ್ಲಸ್ಟರ್) ಬ್ಲಾಕ್ ಸಂಪನ್ಮೂಲ ಕೇಂದ್ರ, ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ (ಡಯಟ್), ಶಿಕ್ಷಕರ ಶಿಕ್ಷಣ ಕೇಂದ್ರ (ಸಿಟಿಇ), ಇನ್‌ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ ಎಡ್ಯುಕೇಷನ್ ಸ್ಟಡೀಸ್, ರಾಜ್ಯ ಶಾಲಾ ನಾಯಕತ್ವ ಹಾಗು ಶೈಕ್ಷಣಿಕ ಯೋಜನೆ ಸಂಸ್ಥೆ (ಸಿಸ್ಲೆಪ್) ಮತ್ತು ರಾಜ್ಯ ಶಿಕ್ಷಣ, ಸಂಶೋಧನೆ ಮತ್ತು ತರಬೇತಿ ಸಂಸ್ಥೆ (ಡಿಎಸ್ ಇಆರ್‌ಟಿ) ಸಂಸ್ಥೆಗಳು ಪೂರ್ಣ ನಿಷ್ಕ್ರಿಯವಾಗಿವೆ.

samachara.com

ವಾಸ್ತವವಾಗಿ ಸರ್ಕಾರಿ ಶಾಲೆಗೆ ನೇಮಕಗೊಳ್ಳುವ ಶಿಕ್ಷಕರು ರಾಜ್ಯಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಆಯ್ಕೆಯಾದ ಪ್ರತಿಭಾವಂತ, ಮೇಧಾವಿ ಶಿಕ್ಷಕರೇ ಆಗಿರುತ್ತಾರೆ. ಅವರ ಹಣಕಾಸಿನ ಹಾಗು ಸೇವಾಭದ್ರತೆ ಸೌಲಭ್ಯಗಳು ಉತ್ತಮ ವಾಗಿರುತ್ತವೆ. ಹೀಗಿದ್ದರೂ, ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಶೈಕ್ಷಣಿಕ ಪ್ರಗತಿ ಕುಸಿಯುತ್ತಿದೆ ಎಂಬುದು ಅಪ್ರಿಯವಾದ ಸತ್ಯ. ಸರಳ ಓದು, ಬರಹ ಹಾಗು ಸರಳ ಗಣಿತದಂತಹ ವಿಷಯಗಳಲ್ಲಿ ಸಾಮರ್ಥ್ಯಗಳಿಸಿರುವ ಮಕ್ಕಳ ಸಂಖ್ಯೆ ಸಾಮಾನ್ಯವಾಗಿ ಶೇಕಡ ೪೦ನ್ನು ಮೀರುವುದಿಲ್ಲ. ಅನೇಕ ಸಂದರ್ಭದಲ್ಲಿ ಐಚ್ಛಿಕ ವಿಷಯಗಳಿರಲಿ, ಕನ್ನಡ ಭಾಷೆಯನ್ನೂ ಸಹ ಸ್ಪಷ್ಟವಾಗಿ ಮತ್ತು ನಿರರ್ಗಳವಾಗಿ ಮಾತನಾಡಲು ಬಾರದ ಮಕ್ಕಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.

ಇದಕ್ಕೆ ಕಾರಣ ಒಮ್ಮೆ ಆಯ್ಕೆಯಾದ ಶಿಕ್ಷಕ ಕಾಲಕಾಲಕ್ಕೆ ತನ್ನ ವೃತ್ತಿ ನೈಪುಣ್ಯತೆಯನ್ನು ಉನ್ನತೀಕರಿಸಿಕೊಳ್ಳುವ ಪ್ರಕ್ರಿಯೆಗೆ ಒಳಗಾಗುತ್ತಿಲ್ಲ. ತಂತ್ರಾಂಶ ಬಳಕೆಯ ತರಬೇತಿಯಿಂದ ಮೊದಲ್ಗೊಂಡು ಪ್ರಭುತ್ವದ ಮಟ್ಟಕ್ಕೆ ಇಂಗ್ಲಿಷ್ ಬೋಧನೆ, ಹೊಸ ಪಠ್ಯ ಬೋಧನೆ ಇವುಗಳಿಗೆ ಸಂಬಂಧಿಸಿದಂತೆ ನವೀಕರಣ, ಪುನಶ್ಚೇತನ ಶಿಬಿರಗಳಿಗೆ ಅವರನ್ನು ಒಳಗು ಮಾಡುತ್ತಿಲ್ಲ. ಜೊತೆಗೆ ಇಲಾಖೆಯ ತರಬೇತಿಗಳು

ಅಗತ್ಯಾಧಾರಿತ ತರಬೇತಿಗಳಾಗದೆ ಕೇವಲ ಕಾಟಾಚಾರದ ಬಳಕೆ ಪ್ರಮಾಣ ಪತ್ರ ಸಲ್ಲಿಸುವ ತರಾತುರಿಯ ತರಭೇತಿಗಳಾಗಿವೆ. ಎಲ್ಲಕ್ಕಿಂತ ಮಿಗಿಲಾಗಿ ಶೈಕ್ಷಣಿಕ ಮೇಲುಸ್ತುವಾರಿ ವ್ಯವಸ್ಥೆ ಸಂಪೂರ್ಣ ಕುಸಿದಿದೆ. ಒಂದು ರೀತಿಯಲ್ಲಿ ಹಳಿತಪ್ಪಿದೆ. ಹೀಗಾಗಿ, ಶಾಲಾ ಹಂತದಲ್ಲಿ, ಕಲಿಕೆ, ಕಲಿಕಾ ಕ್ರಮ, ಕಲಿಕಾ ವಿಧಾನಗಳ ಬಗ್ಗೆ ನಿರಂತರ ಪರಿವೀಕ್ಷಣೆ ಕಾಲಕಾಲಕ್ಕೆ ನಡೆಯುತ್ತಿಲ್ಲ. ಕಲಿಕಾ ವ್ಯವಸ್ಥೆ ಸುಧಾರಿಸದ ಹೊರತು ಶಿಕ್ಷಣ ಕ್ಷೇತ್ರದಲ್ಲಿ ಕಲಿಕಾ ಗುಣಮಟ್ಟವನ್ನು ಸುಧಾರಿಸುವುದು ಸಾಧ್ಯವಾಗುವುದಿಲ್ಲ.

ಸರ್ಕಾರಿ ಶಾಲೆಗಳಿಗೆ ನೇಮಕಗೊಂಡ ಶಿಕ್ಷಕರು ಗುಣಮಟ್ಟದಲ್ಲಿ ಅತ್ಯುತ್ತಮ ಸಾಮರ್ಥ್ಯವುಳ್ಳವರಿದ್ದೂ ಕೆಲಸಕ್ಕೆ ಸೇರಿದ ನಂತರ ಕೆಲ ವರ್ಷಗಳಲ್ಲೇ ಜಡಗಟ್ಟಿ ನಿಲ್ಲುತ್ತಾರೆ. ಈ ಕಾರಣದಿಂದ ಅವರ ಮೇಲೆ ಕಾಲಕಾಲಕ್ಕೆ ಪರಿಶೀಲನೆ ಅಗತ್ಯವಿದೆ. ಸರ್ಕಾರಿ ಶಾಲೆಗಳಲ್ಲಿನ ಶಿಕ್ಷಕರ ಗುಣಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ನಿಯಮಿತವಾಗಿ ಪರಿಶೀಲಕರು ಪರಿಶೀಲನೆ ನಡೆಸಬೇಕು. ಪೋಷಕರ ಕಡೆಯಿಂದ ಹಿಮ್ಮಾಹಿತಿ ಪಡೆದು ಅರ್ಹರಲ್ಲದ ಶಿಕ್ಷಕರಿಗೆ ಅಗತ್ಯವಿದ್ದಲ್ಲಿ ತರಬೇತಿ ನೀಡುವುದು. ಆದಾಗ್ಯೂ ತಿದ್ದಿಕೊಳ್ಳದ ಶಿಕ್ಷಕರಿಗೆ ವೇತನ ಬಡ್ತಿ (ಇನ್‌ಕ್ರಿಮೆಂಟ್) ತಡೆ ಹಿಡಿಯುವುದು, ಪದೋನ್ನತಿ (ಪ್ರಮೋಷನ್) ತಡೆಹಿಡಿಯುವುರ ಮೂಲಕ ಉತ್ತರದಾಯಿತ್ವವನ್ನು ತರುವುದು ಅತ್ಯಂತ ಜರೂರಾಗಿ ಆಗಬೇಕಾದ ಕೆಲಸವಾಗಿದೆ.

ಉತ್ತರದಾಯಿತ್ವವನ್ನು ಕೇವಲ ಶಿಕ್ಷಕರಿಗೆ ಮಾತ್ರ ಸೀಮಿತಗೊಳಿಸದೆ, ಕಲಿಕೆಯನ್ನು ಉತ್ಕೃಷ್ಟಗೊಳಿಸಲು ಕೆಲಸ ನಿರ್ವಹಿಸಬೇಕಾದ ಶೈಕ್ಷಣಿಕ ಸಂರಚನೆಗಳಾದ ಗುಚ್ಛ (ಕ್ಲಸ್ಟರ್) ಸಂಪನ್ಮೂಲ ಕೇಂದ್ರ, ಬ್ಲಾಕ್ ಸಂಪನ್ಮೂಲ ಕೇಂದ್ರ, ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ (ಡಯಟ್), ಶಿಕ್ಷಕರ ಶಿಕ್ಷಣ ಕೇಂದ್ರ (ಸಿಟಿಇ), ಇನ್‌ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ ಎಡ್ಯುಕೇಷನ್ ಸ್ಟಡೀಸ್, ರಾಜ್ಯ ಶಾಲಾ ನಾಯಕತ್ವ ಹಾಗು ಶೈಕ್ಷಣಿಕ ಯೋಜನೆ ಸಂಸ್ಥೆ (ಸಿಸ್ಲೆಪ್) ಮತ್ತು ರಾಜ್ಯ ಶಿಕ್ಷಣ, ಸಂಶೋಧನೆ ಮತ್ತು ತರಬೇತಿ ಸಂಸ್ಥೆ (ಡಿಎಸ್ ಇಆರ್‌ಟಿ) ಸಂಸ್ಥೆಗಳ ಸಿಬ್ಬಂದಿಯನ್ನು ಆಯಾ ಹಂತದ ಕಲಿಕಾ ನ್ಯೂನತೆ ಮತ್ತು ಶೈಕ್ಷಣಿಕ ಹಿನ್ನೆಡೆಗೆ ಜವಾಬ್ದಾರರನ್ನಾಗಿ ಮಾಡಿ ಕಠಿಣ ಶಿಸ್ತು ಕ್ರಮಗಳನ್ನು ಕೈಗೊಳ್ಳುವುದರ ಮೂಲಕ ಶಿಕ್ಷಣ ಇಲಾಖೆಯಲ್ಲಿ ಕಳೆದು ಹೋಗಿರುವ ಉತ್ತರದಾಯಿತ್ವವನ್ನು ಮರುಸ್ಥಾಪಿಸಬೇಕಿದೆ. ಈ ಮೂಲಕ ಸರ್ಕಾರಿ ಶಾಲೆಗಳ ಬಗ್ಗೆ ಸಾರ್ವಜನಿಕರಲ್ಲಿ ಮತ್ತೊಮ್ಮೆ ಭರವಸೆ ಮೂಡಿಸುವಂತಹ ರಚನಾತ್ಮಕ ಕೆಲಸಗಳನ್ನು ಸರ್ಕಾರ ಯುದ್ಧೋಪಾದಿ ರೀತಿಯಲ್ಲಿ ಕೈಗೊಳ್ಳಬೇಕಿದೆ.

samachara.com

## ಶಿಫಾರಸು–೬

ಶಿಕ್ಷಣದಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನ (ಐಸಿಟಿ) ಭಾಗವಾಗಿ ಸರ್ಕಾರಿ ಶಾಲೆಗಳಲ್ಲಿ ಹೊಸ ತಂತ್ರಜ್ಞಾನಗಳನ್ನು, ಇ–ಲೈಬ್ರರಿ, ಇ–ಬುಕ್ ಇತ್ಯಾದಿ ಕಾಲೋಚಿತ ತಂತ್ರಜ್ಞಾನ ಅಳವಡಿಕೆ ಮತ್ತು ತಾಂತ್ರಿಕ ವಿಧಾನಗಳನ್ನು ಅಳವಡಿಸಿ ಕೊಳ್ಳುವುದು.

samachara.com

# ವಿವರಣೆ

ತಂತ್ರಜ್ಞಾನದ ಈ ಯುಗದಲ್ಲಿ ತಂತ್ರಜ್ಞಾನವನ್ನು ನಿರೀಕ್ಷಿತ ಮಟ್ಟದಲ್ಲಿ ಕಲಿಕಾ ಪ್ರಕ್ರಿಯೆಗೆ ಬಳಸದಿರುವುದು ಕೂಡ ಸರ್ಕಾರಿ ಶಾಲೆಗಳಲ್ಲಿ ನಿರೀಕ್ಷಿತ ಗುಣಮಟ್ಟನ್ನು ಸಾಧಿಸಲು ಸಾಧ್ಯವಾಗದಿರುವುದಕ್ಕೆ ಒಂದು ಕಾರಣ ಎಂದರೆ ತಪ್ಪಾಗಲಾರದು. ಶಿಕ್ಷಣ ಇಲಾಖೆ ಐಸಿಟಿ ಹಂತ ೧, ೨, ೩ ಇತ್ಯಾದಿಯೆಂದು ಹೆಸರಿಸಿ ಜಾರಿಗೊಳಿಸಿದ್ದರೂ ಅದರಿಂದ ಹೆಚ್ಚು ಪ್ರಯೋಜನವಾದ ಬಗ್ಗೆ  ಮಾಹಿತಿ ಇಲ್ಲ. ಶಿಕ್ಷಣದಲ್ಲಿ ತಂತ್ರಜ್ಞಾನ ಬಳಕೆಯಿಂದ ಗುಣಾತ್ಮಕತೆ ಸುಧಾರಿಸುತ್ತದೆ ಎನ್ನುವುದಕ್ಕೆ ಹಲವು ಸಂಶೋಧನೆಗಳ ಬೆಂಬಲವಿದೆ.ಶಿಕ್ಷಣದಲ್ಲಿ ತಂತ್ರಜ್ಞಾನವನ್ನು ಹಲವು ಬಗೆಯಲ್ಲಿ ಬಳಸಬಹುದಾಗಿದೆ.

೧. ವಿವಿಧ ವಿಷಯಗಳ ಕಲಿಕೆಯಲ್ಲಿ ಕನ್ನಡ ತಂತ್ರಾಂಶಗಳ ಬಳಕೆ

೨. ಬಹುಮುಖಿ ಕಲಿಕೆ

೩. ಶೈಕ್ಷಣಿಕ ರೇಡಿಯೋ ಮತ್ತು ದೂರದರ್ಶನ

೪. ಜಾಲಬಂಧ ಆಧಾರಿತ ಕಲಿಕೆ

೫. ಕಲಿಕಾ ಪ್ರಕ್ರಿಯೆಗೆ ತಂತ್ರಜ್ಞಾನದ ಬಳಕೆ

೬. ಶಿಕ್ಷಕರು ಕಲಿಕಾ ಪ್ರಕ್ರಿಯೆಗೆ ಸಿದ್ಧರಾಗುವ ಭಾಗವಾಗಿ ತಂತ್ರಜ್ಞಾನದ ಬಳಕೆ

೭. ಬೋಧನಾ–ಕಲಿಕಾ ಸಾಮಗ್ರಿಗಳು

೮. ಡೆಸ್ಕ್ ಸಂಶೋಧನೆ ಭಾಗವಾಗಿ ತಂತ್ರಜ್ಞಾನದ ಬಳಕೆ

೯. ಶ್ರವಣ, ದೃಶ್ಯ ಮಾಧ್ಯಮಗಳ ಗರಿಷ್ಠ ಬಳಕೆ

೧೦. ಶೈಕ್ಷಣಿಕ ಅಂತರಜಾಲಗಳು

೧೧. ಮಾಧ್ಯಮಗಳು

ಇಂದಿನ ಪರಿಸ್ಥಿತಿಯಲ್ಲಿ ತಂತ್ರಜ್ಞಾನವನ್ನು ಹೇಗೆ ಬಳಸಿಕೊಳ್ಳಬಹುದು ಎಂದು ತಿಳಿಸಿ ಉತ್ತೇಜಿಸುವುದರ ಜೊತೆಗೆ, ಮುಂದೆ ಬರಬಹುದಾದ ಸವಾಲು ಹಾಗು ಬೆಳವಣಿಗೆಗಳ ಬಗ್ಗೆ ಸಮಗ್ರ ಮಾಹಿತಿ ನೀಡಿ ಸಹಾಯ ಮಾಡುವುದು

samachara.com

## ಶಿಫಾರಸು–೭

**ಇಂಗ್ಲಿಷ್ ತರಬೇತಿ ಪಡೆದ ಶಿಕ್ಷಕರಿಂದ ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷನ್ನು ಒಂದು ಭಾಷೆಯಾಗಿ ಪರಿಣಾಮಕಾರಿಯಾಗಿ ಕಲಿಸಬೇಕು.**

samachara.com

# ವಿವರಣೆ

ಖಾಸಗಿ ಮತ್ತು ಸರ್ಕಾರಿ ಶಾಲೆಗಳಲ್ಲಿನ ಮೇಲು ಕೀಳಿನ ವ್ಯತ್ಯಾಸಕ್ಕೆ ಖಾಸಗಿ ಶಾಲೆಗಳಲ್ಲಿ ಹೆಚ್ಚು ಬಳಕೆಯಾಗುತ್ತಿರುವ ಇಂಗ್ಲಿಷ್ ಮಾಧ್ಯಮವೇ ಕಾರಣ. ಸರ್ಕಾರಿ ಶಾಲೆಗಳಲ್ಲಿ ಓದುವ ಮಕ್ಕಳು ಇಂಗ್ಲಿಷ್ ಅನ್ನು ೫ನೇ ತರಗತಿಯಿಂದ ಒಂದು ಭಾಷೆಯಾಗಿ ಕಲಿಯುತ್ತಾರೆ.ಆದರೆ ಖಾಸಗಿ ಶಾಲೆಗಳಲ್ಲಿ ಇಂಗ್ಲಿಷ್ ಭಾಷೆಯೇ ಪ್ರಧಾನ ಮಾಧ್ಯಮ ಭಾಷೆಯಾಗಿ ಪೂರ್ವಪ್ರಾಥಮಿಕ ಶಾಲೆಯಿಂದಲೇ ಬಳಕೆಯಲ್ಲಿ ರುವುದರಿಂದ ಸಾರ್ವಜನಿಕರಲ್ಲಿ ಇಂಗ್ಲಿಷ್ ಅನ್ನದ ಭಾಷೆ ಎಂಬ ಭ್ರಮೆ ಬೆಳೆದಿದೆ. ಹೀಗಾಗಿ ಇತ್ತೀಚಿನ ದಿನಗಳಲ್ಲಿ ಎಲ್ಲಾ ವರ್ಗದವರೂ ತಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮದ ಖಾಸಗಿ ಕಾನ್ವೆಂಟ್ ಶಾಲೆಗಳಿಗೆ ಕಳುಹಿಸುವ ಉತ್ಸಾಹವನ್ನು ತೋರುತ್ತಿದ್ದಾರೆ.

ಸರ್ಕಾರಿ ಶಾಲೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಪಾಲಕರು ಮತ್ತು ಪೋಷಕರು ತಮ್ಮ ಮಕ್ಕಳೂ ಸಹ ಆಂಗ್ಲ ಭಾಷೆಯನ್ನು ಒಂದು ಭಾಷೆಯನ್ನಾಗಿ ಪ್ರಭುತ್ವದ ಮಟ್ಟಕ್ಕೆ ಕಲಿಯಬೇಕೆಂಬ ಆಶಯವನ್ನು ಸರ್ಕಾರ ಗೌರವಿಸಬೇಕಿದೆ. ಈ ನಿಟ್ಟಿನಲ್ಲಿ, ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಆಂಗ್ಲ ಭಾಷೆಯನ್ನು ಒಂದು ಭಾಷೆಯನ್ನಾಗಿ ಕಲಿಸಲು ಅನುಕೂಲವಾಗುವ ರೀತಿಯಲ್ಲಿ ಭಾಷಾ ಶಿಕ್ಷಕರನ್ನು ನೇಮಿಸಬೇಕಿದೆ.

ಸರ್ಕಾರಿ ಶಾಲೆಗಳಲ್ಲಿ ೧ನೇ ತರಗತಿಯಿಂದಲೇ ಇಂಗ್ಲಿಷ್ ಅನ್ನು ಒಂದು ಭಾಷೆಯಾಗಿ ಗುಣಮಟ್ಟದ ಬೋಧನೆಯನ್ನು ನೀಡಿದರೆ ಮಕ್ಕಳನ್ನು ಸರ್ಕಾರಿ ಶಾಲೆಗಳೆಡೆಗೆ ಆಕರ್ಷಿಸಲು ಸಾಧ್ಯವಾಗುತ್ತದೆ. ಜೊತೆಗೆ ಕನ್ನಡ ಶಾಲೆಗಳು ಒಳಗೊಳ್ಳುವ ಗುಣದಿಂದ ಹೆಚ್ಚು ಸಬಲೀಕರಣವನ್ನು ಪಡೆದುಕೊಳ್ಳಬಹುದು. ಇಂಗ್ಲಿಷ್ ಕಲಿಸುವ ಶಿಕ್ಷಕರು ವಿಶೇಷವಾದ ತರಬೇತಿ ಪಡೆದವರಾಗಿರಬೇಕು. ಅದಕ್ಕಾಗಿ ಸರ್ಕಾರ ತರಬೇತಿ ಕಾರ್ಯಾಗಾರಗಳನ್ನು ನಿಯತವಾಗಿ ಆಯೋಜಿಸಬೇಕು.

ಪ್ರಾರಂಭಿಕವಾಗಿ, ಬೆಂಗಳೂರಿನಲ್ಲಿರುವ ದಕ್ಷಿಣ ಪ್ರಾಂತೀಯ ಆಂಗ್ಲಭಾಷಾ ಸಂಸ್ಥೆಯ ನೆರವಿನೊಂದಿಗೆ ಶಿಕ್ಷಕರಿಗೆ ಆಂಗ್ಲ ಭಾಷೆಯನ್ನು ಸಮರ್ಥವಾಗಿ ಕಲಿಸುವ ನೈಪುಣ್ಯತೆಯ ಬಗ್ಗೆ ಸೂಕ್ತ ತರಬೇತಿಗಳನ್ನು ಒದಗಿಸಬೇಕಿದೆ. ದಕ್ಷಿಣ ಭಾರತದ ರಾಜ್ಯಗಳಿಗೆ ಆಂಗ್ಲಭಾಷಾ ಕಲಿಕೆಯಲ್ಲಿ ಸಾಮಾರ್ಥ್ಯಾಭಿವೃದ್ಧಿ ಒದಗಿಸುವ ಉದ್ದೇಶದಿಂದ ಸ್ಥಾಪಿಸಲ್ಪಟ್ಟಿರುವ ಈ ಸಂಸ್ಥೆ ಕರ್ನಾಟಕದಲ್ಲಿದ್ದರೂ, ಅದರ ಗರಿಷ್ಠ ಲಾಭವನ್ನು ಶಿಕ್ಷಣ ಇಲಾಖೆ ಪಡೆದುಕೊಳ್ಳದಿರುವುದು ವಿಷಾದನೀಯ. ಈ ನಿಟ್ಟಿನಲ್ಲಿ ಶಿಕ್ಷಣ ಇಲಾಖೆ ಪ್ರಾಂತೀಯ ಆಂಗ್ಲಭಾಷಾ ಸಂಸ್ಥೆಯ ನೆರವಿನೊಂದಿಗೆ ಶಿಕ್ಷಕರಿಗೆ ಆಂಗ್ಲಭಾಷಾ ಕಲಿಕೆಯಲ್ಲಿ ಸಾಮರ್ಥ್ಯಾಭಿವೃದ್ಧಿಗೆ ಮುಂದಾಗಬೇಕು.



samachara.com

# ಶಿಫಾರಸು–೮

ಸರ್ಕಾರಿ ಶಾಲೆಗಳಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ಬಲಪಡಿಸಿ ಸರ್ಕಾರಿ ಹಾಗು ಸರ್ಕಾರಿ ಅನುದಾನಿತ ಶಾಲೆಗಳನ್ನು ನೆರೆಹೊರೆಯ ಸಮಾನ ಶಾಲೆಗಳನ್ನಾಗಿ ಪರಿವರ್ತಿಸಲು ತುರ್ತುಕ್ರಮ ವಹಿಸುವುದು. ಬ್ಲಾಕ್, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಅತ್ಯುತ್ತಮವಾಗಿ ಕೆಲಸ ನಿರ್ವಹಿಸುತ್ತಿರುವ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ಗುರುತಿಸಿ ಪ್ರಶಸ್ತಿ ನೀಡುವ ಕೆಲಸವನ್ನು ಸರ್ಕಾರ ಮಾಡಬೇಕು.

samachara.com

# ವಿವರಣೆ

ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ ೨೦೦೯ ಪ್ರಕರಣ ೨೧ ಹಾಗು ೨೨ರ ಅನ್ವಯ ಖಾಸಗಿ ಅನುದಾನ ರಹಿತ ಶಾಲೆಗಳನ್ನು ಹೊರತುಪಡಿಸಿ ಉಳಿದೆಲ್ಲ ಶಾಲೆಗಳಲ್ಲಿ ಸ್ಥಳೀಯ ಪ್ರಾಧಿಕಾರದ ಚುನಾಯಿತ ಪ್ರತಿನಿಧಿಗಳು, ಶಾಲೆಯಲ್ಲಿ ಪ್ರವೇಶ ಪಡೆದ ಮಕ್ಕಳ ತಂದೆ–ತಾಯಿ ಅಥವಾ ಪೋಷಕರು ಮತ್ತು ಶಿಕ್ಷಕರನ್ನು ಒಳಗೊಂಡಿರುವ ಶಾಲಾ ಅಭಿವೃದ್ಧಿ ಸಮಿತಿಯೊಂದನ್ನು ರಚಿಸಿಸುವುದು ಹಾಗು ಶಾಲಾಭಿವೃದ್ಧಿ ಯೋಜನೆಯನ್ನು ತಯಾರಿಸುವುದು ಕಡ್ಡಾಯವಾಗಿದೆ. ಈ ಸಮಿತಿಯ ಸದಸ್ಯರಲ್ಲಿ ಕನಿಷ್ಠ ಮುಕ್ಕಾಲು ಮಂದಿ ಸದಸ್ಯರು ತಂದೆ–ತಾಯಿ ಅಥವಾ ಪೋಷಕರಾಗಿರಬೇಕು, ಅನುಕೂಲಸ್ಥರಲ್ಲದ ಗುಂಪು ಹಾಗೂ ದುರ್ಬಲ ವರ್ಗಕ್ಕೆ ಸೇರಿದ ಮಕ್ಕಳ ಪೋಷಕರು ಅಥವಾ ಪಾಲಕರಿಗೆ ಪ್ರಮಾಣಾನುಸಾರ ಪ್ರಾತಿನಿಧ್ಯ ವಿರಬೇಕು ಮತ್ತು ಸಮಿತಿಯ ಸದಸ್ಯರ ಪೈಕಿ ಶೇಕಡಾ ಐವತ್ತರಷ್ಟು ಸದಸ್ಯರು ಮಹಿಳೆಯರಾಗಿರಬೇಕಾಗುತ್ತದೆ. ಈ ರೀತಿ ರಚನೆಯಾದ ಶಾಲಾ ವ್ಯವಸ್ಥಾಪನಾ ಸಮಿತಿಯು ಶಾಲೆಯ ಕೆಲಸ ಕಾರ್ಯಗಳ ಮೇಲ್ವಿಚಾರಣೆ ಮಾಡುವುದು; ಶಾಲಾ ಅಭಿವೃದ್ಧಿ ಯೋಜನೆ ಸಿದ್ಧಪಡಿಸುವುದು ಮತ್ತು ಶಿಫಾರಸು ಮಾಡುವುದು;

- ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಯಾವುದೇ ಇತರ ಮೂಲದಿಂದ ಸ್ವೀಕರಿಸಿದ ಅನುದಾನಗಳ ಬಳಕೆಯ ಮೇಲ್ವಿಚಾರಣೆ ಮಾಡುವುದು; ಮತ್ತು

- ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸ ಬೇಕಾಗುತ್ತದೆ.

ಶಾಲಾ ಹಂತದಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ಬಲಪಡಿಸುವ ಕೆಲಸವನ್ನು ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ

samachara.com

ಯೂನಿವರ್ಸಿಟಿಯ ಮಗು ಮತ್ತು ಕಾನೂನು ಕೇಂದ್ರವು ಸಮಿತಿಗಳು ಪ್ರಾರಂಭಗೊಂಡ ೨೦೦೧ರಿಂದಲೂ ನಿರ್ವಹಿಸುತ್ತಾ ಬಂದಿದೆ. ಕಳೆದ ಒಂದು ದಶಕದಿಂದ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸದಸ್ಯರನ್ನು ಪಂಚಾಯತಿ, ಬ್ಲಾಕ್, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ವೇದಿಕೆ ಮೂಲಕ ಒಟ್ಟಿಗೆ ತರುವ ಕೆಲಸವನ್ನು ಮಗು ಮತ್ತು ಕಾನೂನು ಕೇಂದ್ರವು ಪರಿಣಾಮಕಾರಿಯಾಗಿ ನಿರ್ವಹಿಸುತ್ತದೆ.

ಈ ಎಲ್ಲಾ, ಅಂಶಗಳ ಹಿನ್ನೆಲೆಯಲ್ಲಿ, ಶಾಲಾ ಹಂತದಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ಬಲಪಡಿಸಿ ಸರ್ಕಾರಿ ಹಾಗು ಸರ್ಕಾರಿ ಅನುದಾನಿತ ಶಾಲೆಗಳನ್ನು ನೈಜ ನೆರೆಹೊರೆಯ ಸಮಾನ ಶಾಲೆಗಳನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಸರ್ಕಾರ ತುರ್ತು ಕ್ರಮವಹಿಸಬೇಕು. ಬ್ಲಾಕ್, ಜಿಲ್ಲೆ ಮತ್ತು ರಾಜ್ಯಮಟ್ಟದಲ್ಲಿ ಅತ್ಯುತ್ತಮವಾಗಿ ಕೆಲಸ ನಿರ್ವಹಿಸುತ್ತಿರುವ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ಗುರುತಿಸಿ ಪ್ರಶಸ್ತಿ ನೀಡುವ ಕೆಲಸವನ್ನು ಸರ್ಕಾರ ಮಾಡಬೇಕು.

samachara.com

samachara.com

# ಶಿಫಾರಸು–೯

ಸರ್ಕಾರಿ ಹಾಗು ಸರ್ಕಾರಿ ಅನುದಾನಿತ ಶಾಲೆಗಳನ್ನು ನೆರೆಹೊರೆಯ ಸಮಾನ ಶಾಲೆಗಳನ್ನಾಗಿ ಪರಿವರ್ತಿಸಲು ಆ ವ್ಯಾಪ್ತಿಯ ಎಲ್ಲಾ ಜನ ಪ್ರತಿನಿಧಿಗಳು ಮತ್ತು ಸರ್ಕಾರಿ ನೌಕರರು ಕಡ್ಡಾಯವಾಗಿ ಅವರ ಮಕ್ಕಳನ್ನು ಸರ್ಕಾರಿ ಹಾಗು ಸರ್ಕಾರಿ ಅನುದಾನಿತ ಶಾಲೆಗಳಿಗೆ ಸೇರಿಸುವಂತೆ ಕೂಡಲೇ ಸುಗ್ರೀವಾಜ್ಞೆಯನ್ನು ಹೊರಡಿಸುವುದು.

samachara.com

# ವಿವರಣೆ

೨೦೧೫ರಲ್ಲಿ ಉತ್ತರ ಪ್ರದೇಶದ ಅಲಹಬಾದ್ ಉಚ್ಚ ನ್ಯಾಯಾಲಯವು ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದ ಪ್ರಕರಣಗಳನ್ನು ಇತ್ಯರ್ಥ ಗೊಳಿಸುವ ಸಂದರ್ಭದಲ್ಲಿ ಪ್ರಾಥಮಿಕ ಶಿಕ್ಷಣದ ಶೋಚನೀಯ ಸ್ಥಿತಿ–ಗತಿಯ ಬಗ್ಗೆ ಪ್ರಸ್ತಾಪಿಸಿ, ಈ ಸ್ಥಿತಿಗೆ ಇಲಾಖೆ ಮತ್ತು ಇಲಾಖೆಯ ಅಧಿಕಾರಿಗಳು ಕಾರಣವಾಗಿದ್ದು ಹಲವು ಪ್ರಕರಣಗಳು ನ್ಯಾಯಾಲಯಕ್ಕೆ ಬರುವಂತಾಗಿದೆ ಎಂದು ಅಭಿಪ್ರಾಯಪಟ್ಟಿತು. ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಅವ್ಯವಸ್ಥೆಯಿಂದಾಗಿ ಸಾವಿರಾರು ಶಿಕ್ಷಕರ ನೇಮಾಕಾತಿ ನೆನೆಗುದಿಗೆ ಬಿದ್ದಂತಾಗಿದೆ. ಇದರಿಂದ ಸರ್ಕಾರಿ ಶಿಕ್ಷಣ ವ್ಯವಸ್ಥೆಯ ಸ್ಥಿತಿ ಮತ್ತಷ್ಟು ಬಿಗಡಾಯಿಸಿದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿತ್ತು.

ನ್ಯಾಯಾಲಯವು, ಸರ್ಕಾರಿ ಶಾಲೆಗಳನ್ನು ಮೂರು ವಿಧಗಳನ್ನಾಗಿ ವಿಂಗಡಿಸಿತ್ತು. ಶ್ರೀಮಂತರಿಗೆ ಮತ್ತು ವಿಶೇಷ ಸವಲತ್ತುಗಳುಳ್ಳ ಮೇಲ್ವರ್ಗದ ಜನರಿಗಿರುವ ಕೆಲವೇ ಕೆಲವು ಪ್ರತಿಷ್ಠಿತ ಪಬ್ಲಿಕ್ ಶಾಲೆಗಳು ಮೇಲ್ವರ್ಗ, ಅಧಿಕಾರಶಾಹಿ, ಸಚಿವರು, ಜನ ಪ್ರತಿನಿಧಿಗಳಾದ ಲೋಕಸಭಾ ಹಾಗೂ ವಿಧಾನಸಭಾ ಸದಸ್ಯರು ಮತ್ತು ಮೇಲ್ಮಧ್ಯ ವರ್ಗಗಳ ಅವಶ್ಯಕತೆಯನ್ನು ಪೂರೈಸುತ್ತಿವೆ. ಈ ವರ್ಗದ ಮಕ್ಕಳು ಅಂತಹ ಶಾಲೆಗಳಲ್ಲಿ ಶಿಕ್ಷಣ ಪಡೆಯಬಹುದಾಗಿದೆ. ಅಲ್ಲಿ ಪ್ರವೇಶ ಪಡೆಯುವುದು ಅತ್ಯಂತ ಕಷ್ಟಕರವಾಗಿದ್ದು ಹೆಚ್ಚಿನ ಆರ್ಥಿಕ ಸಂಪನ್ಮೂಲವುಳ್ಳ ವ್ಯಕ್ತಿಗಳಿಗೆ ಪ್ರವೇಶ ಸಿಗುತ್ತದೆ. ಬಹುತೇಕ ಜನರಿಗೆ ಅಲ್ಲಿನ ಶುಲ್ಕವನ್ನು ಭರಿಸಲಾಗುವುದಿಲ್ಲ. ಈ ಶಾಲೆಗಳಲ್ಲಿ ಉತ್ತಮ ಮೂಲಭೂತ ಸೌಕರ್ಯ, ಬೋಧಕ ಸಿಬ್ಬಂಧಿ ಮತ್ತು ಉಳಿದ ಸೌಲಭ್ಯಗಳಿರುತ್ತವೆ. ಇವುಗಳನ್ನು ಗಣ್ಯರ/ಶ್ರೀಮಂತರ ಶಾಲೆಗಳೆನ್ನಬಹುದು. ಎರಡನೇ ವರ್ಗದಲ್ಲಿ, ವ್ಯಕ್ತಿ ಅಥವಾ ಖಾಸಗಿ ಸಂಸ್ಥೆಗಳು ನಡೆಸುವ ಶಾಲೆಗಳು ಕೆಳಮಧ್ಯಮ ವರ್ಗದ ಮಕ್ಕಳ ಶಿಕ್ಷಣವನ್ನು ಪೂರೈಸುತ್ತವೆ. ಈ ಶಾಲೆಗಳ ಮೂಲ ಸೌಕರ್ಯ ಮತ್ತು ಆಧುನಿಕತೆ ಶ್ರೀಮಂತರ ಶಾಲೆಗಳಿಗೆ ಹೋಲಿಸುವಷ್ಟು ಇಲ್ಲದಿದ್ದರೂ ಸಾಧಾರಣವಾಗಿ ಚೆನ್ನಾಗಿದ್ದು



samachara.com

ಬೋಧಕ ಸಿಬ್ಬಂದಿ ಕೂಡ ಚೆನ್ನಾಗಿರುತ್ತಾರೆ. ಇವುಗಳನ್ನು ಅರೆ ಗಣ್ಯರ/ಶ್ರೀಮಂತರ ಶಾಲೆಗಳೆನ್ನಬಹುದು. ಮೂರನೇ ವರ್ಗವು ರಾಜ್ಯಾಡಳಿತವು ನಡೆಸುವ ಮತ್ತು ನಿರ್ವಹಿಸುವ ಪ್ರಾಥಮಿಕ ಶಾಲೆಗಳಾಗಿವೆ. ಇವುಗಳನ್ನು ಸಾಮಾನ್ಯ ಜನರ ಶಾಲೆ ಎಂದು ಕರೆಯಬಹುದಾಗಿದೆ. ಈ ಶಾಲೆಗಳು ಗ್ರಾಮೀಣ, ನಗರ ಮತ್ತು ಯಾರಿಗೆ ಮೇಲಿನ ಎರಡು ವರ್ಗದ ಶಾಲೆಗಳಲ್ಲಿ ಓದಿಸುವುದು ಕಷ್ಟಸಾಧ್ಯವೋ ಅಂತಹ ಮಕ್ಕಳಿಗೆ ಶಿಕ್ಷಣ ಒದಗಿಸುತ್ತವೆ. ಈ ಶಾಲೆಗಳು ಶೇಕಡಾ ೯೦ರಷ್ಟು ಮಕ್ಕಳಿಗೆ ಶಿಕ್ಷಣ ಒದಗಿಸುವ ಶಾಲೆಗಳಾಗಿವೆ. ನಿಜವಾದ ಸಮಸ್ಯೆ ಇರುವುದು ಇಲ್ಲಿ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ನಮ್ಮ ಸಂವಿಧಾನವು ಪ್ರಾಥಮಿಕ ಶಿಕ್ಷಣವನ್ನು ಅಂದರೆ ೮ನೇ ತರಗತಿಯವರೆಗಿನ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಗುರುತಿಸಿದೆ. ಸ್ವಾತಂತ್ರ್ಯ ಬಂದು ೬೫ ವರ್ಷಗಳು ಕಳೆದರೂ, ಈ ಶಾಲೆಗಳಲ್ಲಿ ಇಂದಿಗೂ ಮೂಲಭೂತ ಸೌಕರ್ಯಗಳು ಇಲ್ಲದಂತಾಗಿವೆ. ಮಕ್ಕಳು ಕುಡಿಯುವ ನೀರಿಗೆ ಮತ್ತು ಶೌಚಾಲಯಗಳಿಗೆ ಪರದಾಡುವಂತಾಗಿದೆ. ತರಗತಿ ಕೊಠಡಿಗಳು ಅತ್ಯಂತ ಶೋಚನೀಯ ಹಾಗು ಕೆಟ್ಟ ಸ್ಥಿತಿಯಲ್ಲಿವೆ. ಹಲವು ಸ್ಥಳಗಳಲ್ಲಿ ತರಗತಿಗಳನ್ನು ತೆರೆದ ಜಾಗದಲ್ಲಿ ನಡೆಸಲಾಗುತ್ತಿದೆ. ಕಟ್ಟಡಗಳಿದ್ದರೂ, ಯಾವಾಗ ಬೀಳುತ್ತವೋ ಎಂಬ ಸ್ಥಿತಿಯಲ್ಲಿವೆ. ಕಲ್ಯಾಣದ ಹೆಸರಿನಲ್ಲಿ ಸಾಕಷ್ಟು ದೊಡ್ಡ ಮೊತ್ತದ ಹಣವನ್ನು ಶಿಕ್ಷಣಕ್ಕೆ ಹೂಡಿದರೂ ಬಡ ಜನರ ಮಕ್ಕಳ ಮೂಲ ಶಿಕ್ಷಣದ ಪರಿಸ್ಥಿತಿ ಏನೂ ಸುಧಾರಿಸಿಲ್ಲ.

ಈ ಶಾಲೆಗಳ ಪರಿಸ್ಥಿತಿ ಏಕೆ ಸುಧಾರಿಸಿಲ್ಲವೆಂಬುದನ್ನು ತಿಳಿಯುವುದು ಕಷ್ಟಸಾಧ್ಯ ವೇನಲ್ಲ. ರಾಜ್ಯ ಸರ್ಕಾರವು ನೋಡಲು ಸಾಧ್ಯವಾಗದಿದ್ದರೂ ಕಾರಣ ಮಾತ್ರ ಬಹಳ ಸ್ಪಷ್ಟವಾಗಿದೆ ಮತ್ತು ಸರಳವಾಗಿದೆ. ಆಡಳಿತ ವ್ಯವಸ್ಥೆಯು ಈ ಶಾಲೆಗಳ ಜೊತೆ ನಿಜವಾಗಿಯು ತೊಡಗಿಸಿಕೊಂಡಿಲ್ಲ. ಯಾರು ಆರ್ಥಿಕವಾಗಿ ಸಬಲವಾಗಿದ್ದಾರೆ ಅವರು ತಮ್ಮ ಮಕ್ಕಳನ್ನು ಗಣ್ಯರ/ಶ್ರೀಮಂತರ ಅಥವಾ ಅರೆಗಣ್ಯರ/ಶ್ರೀಮಂತರ ಶಾಲೆಗಳಿಗೆ ಕಳುಹಿಸುತ್ತಾರೆ. ಅವರು ರಾಜ್ಯ ಮಂಡಳಿ ನಡೆಸುವ ಮತ್ತು ನಿರ್ವಹಿಸುವ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸುವ ಬಗ್ಗೆ ಆಲೋಚಿಸುವುದೂ ಇಲ್ಲ.

ಅದು ಜಿಲ್ಲಾಧಿಕಾರಿಯಾಗಲಿ, ಪೊಲೀಸ್ ಮುಖ್ಯಸ್ಥರೇ ಆಗಲಿ ಅಥವಾ ಯಾರೇ ಸರ್ಕಾರಿ ನೌಕರರಾಗಲಿ ಅವರು ತಮ್ಮ ಮಕ್ಕಳನ್ನು ಉತ್ತಮ ಸೌಲಭ್ಯವಿರುವ ಮತ್ತು ಸಾಮಾನ್ಯವಾಗಿ ಮೊದಲನೇ ಅಥವಾ ಎರಡನೇ ವರ್ಗದ ಶಾಲೆಗಳಲ್ಲಿ ಶಿಕ್ಷಣ ಪಡೆಯುವಂತೆ ನೋಡಿಕೊಳ್ಳುತ್ತಾರೆ. ಅವರು ಜನಸಾಮಾನ್ಯರ ಅಥವಾ ಮೂರನೇ

samachara.com

ವರ್ಗದ ಶಾಲೆಗಳನ್ನು ಪೂರ್ಣವಾಗಿ ಹೊರಗಿಡುತ್ತಾರೆ. ಹೀಗಾಗಿ, ಸಾರ್ವಜನಿಕ ಆಡಳಿತವು ಈ ಶಾಲೆಗಳ ಕಾರ್ಯನಿರ್ವಹಣೆ ಮತ್ತು ಅಗತ್ಯತೆಗಳ ಬಗ್ಗೆ ಯಾವುದೇ ವಾಸ್ತವಿಕ ಕಾಳಜಿ ಹೊಂದಿರುವುದಿಲ್ಲ. ಈ ಶಾಲೆಗಳು ರಾಜಕೀಯ ಲಾಭವನ್ನು ಪಡೆಯುವ ಸಾಧನಗಳಾಗಿವೆಯೇ ಹೊರತು ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳ ಲಾಗಿಲ್ಲ. ಸಾಮಾನ್ಯ ಜನರ ಶಾಲೆಗಳು ಕೇವಲ ಯಾರು ಅತ್ಯಂತ ಕಡು ಬಡವರೋ ಅಂಥವರ ಮಕ್ಕಳ ಪ್ರಾಥಮಿಕ ಶಿಕ್ಷಣವನ್ನು ಪೂರೈಸುತ್ತಿವೆ.

ಹೀಗಾಗಿ, ಯಾರು ಯಾರು ರಾಜ್ಯ ಸಾರ್ವಜನಿಕ ಖಜಾನೆಯಿಂದ ಸಂಬಳ, ಭತ್ಯೆ ಮತ್ತು ಇತರೆ ಸೌಲಭ್ಯಗಳನ್ನು ಪಡೆಯುತ್ತಿದ್ದಾರೋ ಅವರು ತಮ್ಮ ಮಕ್ಕಳನ್ನು ಕಡ್ಡಾಯವಾಗಿ ರಾಜ್ಯ ಸರ್ಕಾರದ ಪ್ರಾಥಮಿಕ ಶಾಲೆಗಳಿಗೆ, ಅಂದರೆ ನಾವು ಹೇಳಿದಂತೆ ಜನಸಾಮಾನ್ಯರ ಶಾಲೆಗೆ ಕಳುಹಿಸಬೇಕೇ ಹೊರತು ಖಾಸಗಿಯವರು ನಡೆಸುವ ಗಣ್ಯರ/ಶ್ರೀಮಂತರ ಅಥವಾ ಅರೆಗಣ್ಯರ/ಶ್ರೀಮಂತರ ಶಾಲೆಗಳಿಗಲ್ಲ. ಯಾರಾದರು ಈ ನಿಯಮವನ್ನು ಉಲ್ಲಂಘಿಸಿದರೆ ಅಂಥವರನ್ನು ಶಿಕ್ಷೆಗೆ ಗುರಿಪಡಿಸಲು ಅವಕಾಶ ಕಲ್ಪಿಸಬೇಕು. ಯಾರು ಸರ್ಕಾರಿ ಶಾಲೆಗಳ ನಿರ್ವಹಣೆಯ ಜವಾಬ್ದಾರಿ ಹೊತ್ತಿದ್ದಾರೋ ಅವರು ಅವರ ಮಕ್ಕಳನ್ನು ಆ ಶಾಲೆಗೆ ಕಳುಹಿಸಿದಾಗ ಮಾತ್ರ ಈ ಶಾಲೆಗಳು ಅಭಿವೃದ್ಧಿಯಾಗಲು ಸಾಧ್ಯ. ಈ ರೀತಿಯ ಅವಕಾಶವು ಸಾಮಾನ್ಯ ಜನರ ಮಕ್ಕಳು ಸಮಾಜದ ಉನ್ನತ ಅಥವಾ ಅರೆಉನ್ನತ ವರ್ಗದ ಮಕ್ಕಳ ಜೊತೆ ಬೆರೆತು–ಕಲೆತು ಮಾತನಾಡಲು ಭಿನ್ನವಾದ ವಾತಾವರಣ, ಆತ್ಮಸ್ಥೈರ್ಯ ಮತ್ತು ಇತರೆ ಅವಕಾಶ ಗಳನ್ನು ಕಲ್ಪಿಸುತ್ತದೆ. ಇದು ಕೆಳಹಂತದಿಂದ ಸಮಾಜವನ್ನು ಬದಲಾಯಿಸಿ ಕ್ರಾಂತಿಕಾರಕ ಬದಲಾವಣೆಯನ್ನು ತರಲು ಸಹಾಯವಾಗುತ್ತದೆ. ಪ್ರಾರಂಭದಲ್ಲಿಯೇ ಮಕ್ಕಳು ಬೆರೆಯುವುದರಿಂದ ಅದು ವಿಭಿನ್ನ ಮೌಲ್ಯಗಳಿಗೆ ನಾಂದಿಯಾಗುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ, ಅಧಿಕಾರಿಗಳು ಮತ್ತು ಸರ್ಕಾರಿ ನೌಕರರು/ಸೇವಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಬೇಕಾದಾಗ, ಅವರು ಆ ಶಾಲೆಗಳ ಬಗ್ಗೆ ಗಂಭೀರವಾಗಿ ಚಿಂತಿಸಿ ಅಲ್ಲಿ ಅಗತ್ಯವಿರುವ ಎಲ್ಲ ಅವಶ್ಯಕತೆಗಳನ್ನು ಪೂರೈಸುವ ಮೂಲಕ ಆ ಶಾಲೆಗಳು ಅತ್ಯುತ್ತಮವಾಗಿ ಮತ್ತು ಉನ್ನತ ದರ್ಜೆಗೆ ಏರುವಂತೆ ನೋಡಿಕೊಳ್ಳುತ್ತಾರೆ. ಇಲ್ಲದಿದ್ದರೆ ಅವರ ಮಕ್ಕಳ ಶಿಕ್ಷಣವೇ ಕುಂಠಿತವಾಗುತ್ತದೆ.

ಅಲಹಬಾದಿನ ಗೌರವಾನ್ವಿತ ಉಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಪ್ರಸ್ತಾಪಿಸಿರುವ ಎಲ್ಲಾ ಅಂಶಗಳು ನಮ್ಮ ರಾಜ್ಯಕ್ಕೆ ಅಕ್ಷರಶಃ ಅನ್ವಯಿಸುತ್ತವೆ. ಈ ಎಲ್ಲಾ ಕಾರಣಗಳಿಂದ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಪಾಲಕರ–ಪೋಷಕರ ಜೊತೆಗೆ

samachara.com

ನಿರ್ದಿಷ್ಟ ನೆರೆಹೊರೆಯ ಮಿತಿಯಲ್ಲಿ ವಾಸಿಸುವ ಎಲ್ಲಾ ಸರ್ಕಾರಿ ನೌಕರರು,ಅರೆ-ಸರ್ಕಾರಿ ನೌಕರರು, ಸ್ಥಳೀಯ ಸರ್ಕಾರದ ನೌಕರರು, ಜನಪ್ರತಿನಿಧಿಗಳು ಮತ್ತು ಯಾವ ವ್ಯಕ್ತಿಗಳು ಸಂಬಳ, ಭತ್ಯೆ, ಸೌಲಭ್ಯ ಇತ್ಯಾದಿಗಳನ್ನು ಸರ್ಕಾರಿ ಖಜಾನೆ ಅಥವ ಸಾರ್ವಜನಿಕ ಹಣದಿಂದ ಪಡೆಯುತ್ತಾರೊ ಅವರೆಲ್ಲರೂ ಪ್ರಾಥಮಿಕ ಶಿಕ್ಷಣ ಪಡೆಯುವ ವಯಸ್ಸಿನ ತಮ್ಮ ತಮ್ಮ ಮಕ್ಕಳನ್ನು ಕಡ್ಡಾಯವಾಗಿ ರಾಜ್ಯ ಸರ್ಕಾರ ನಡೆಸುವ ಸರ್ಕಾರಿ ಹಾಗು ಸರ್ಕಾರಿ ಅನುದಾನಿತ ಶಾಲೆಗಳಿಗೆ ಸೇರಿಸುವ ಮೂಲಕ ಆ ಶಾಲೆಗಳನ್ನು ನೈಜ ನೆರೆಹೊರೆಯ ಸಮಾನ ಶಾಲೆಗಳನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಸರ್ಕಾರ ಸುಗ್ರೀವಾಜ್ಞೆಯನ್ನು ಹೊರಡಿಸಬೇಕು.

samachara.com

samachara.com

# ಶಿಫಾರಸು–೧೦

ಕೇಂದ್ರ ಸರ್ಕಾರ ದೇಶದ ಒಟ್ಟು ನಿವ್ವಳ ಉತ್ಪನ್ನದಲ್ಲಿ ಕನಿಷ್ಟ ಶೇಕಡಾ ೧೦ ರಷ್ಟನ್ನು ಮತ್ತು ರಾಜ್ಯ ಸರ್ಕಾರ ತನ್ನ ಆಯವ್ಯಯದಲ್ಲಿ ಕನಿಷ್ಟ ಶೇಕಡ ೨೫ರಷ್ಟನ್ನು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಉಳಿಸಿ ಬೆಳೆಸಿ ನೆರೆ ಹೊರೆಯ ಸಮಾನ ಶಾಲೆಯ ತತ್ವದ ಮೇಲೆ ಬಲವರ್ಧನೆಗೊಳಿಸಲು ಮೀಸಲಿರಿಸಬೇಕು.

samachara.com

# ವಿವರಣೆ

**ಅವಶ್ಯಕ ಸಂಖ್ಯೆಯಲ್ಲಿ ಶಿಕ್ಷಕರಿಲ್ಲ! ಶುದ್ಧ ಕುಡಿಯುವ ನೀರಿಲ್ಲ! ಆಟವಾಡಲು ಆಟದ ಮೈದಾನವಿಲ್ಲ! ಅಗತ್ಯ ಕ್ರೀಡಾ ಸಾಮಗ್ರಿಯಿಲ್ಲ! ಶೌಚಾಲಯವಿದ್ದರೂ ನೀರಿನ ವ್ಯವಸ್ಥೆಯಿಲ್ಲ! ಗುಣಾತ್ಮಕ ಶಿಕ್ಷಣಕ್ಕೆ ಪೂರಕವಾದ ಕಲಿಕಾ ವಾತಾವರಣವಿಲ್ಲ! ಕಲಿಕೋಪಕರಣಗಳಿಲ್ಲ! ಪೀಠೋಪಕರಣವಿಲ್ಲ! ಉತ್ತಮ ಕಲಿಕಾ ಕೊಠಡಿಗಳಿಲ್ಲ! ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಅವಶ್ಯಕವಾಗಿ ಬೇಕಾದ ಸೌಲಭ್ಯಗಳು ಶಾಲೆಯಲ್ಲಿಲ್ಲ! ಇತ್ಯಾದಿ ಇತ್ಯಾದಿ!**

ಮೇಲಿನ ಸಮಸ್ಯೆಗಳ ಪಟ್ಟಿಯನ್ನು ಸರ್ಕಾರಿ ಶಾಲೆಗಳಲ್ಲಿ ಸಾಮಾನ್ಯವಾಗಿ ಕೇಳಿಬರುವ ಮತ್ತು ವಾಸ್ತವವಾಗಿ ಕಾಣುವ ಸತ್ಯ. ಎಲ್ಲ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ಒದಗಿಸುವ ಆಶಯದೊಂದಿಗೆ ಜಾರಿಯಾದ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ ೨೦೦೯ (ಆರ್‌ಟಿಇ ಕಾಯಿದೆ) ಜಾರಿಯಾಗಿ ಏಪ್ರಿಲ್ ೧,೨೦೧೭ ಕ್ಕೆ ಏಳು ವರ್ಷಗಳು ಕಳೆದಿವೆ. ಆದರೆ ಆರ್‌ಟಿಇ ಕಾಯಿದೆ ಅನ್ವಯ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಶಾಲೆಗಳ ಸಂಖ್ಯೆ ನಿಜಕ್ಕೂ ಕಡಿಮೆ. ಸಮಸ್ಯೆ ಹೀಗಿರುವಾಗ ಸ್ವಾಭಾವಿಕವಾಗಿ ಸರ್ಕಾರಗಳು ಆರ್‌ಟಿಇ ಕಾಯಿದೆ ಅನುಷ್ಠಾನಕ್ಕೆ ತಮ್ಮ ಅಯವ್ಯಯದಲ್ಲಿ ಹೆಚ್ಚಿನ ಹಣವನ್ನು ಮೀಸಲಿಡಬೇಕೆಂದು ನಿರೀಕ್ಷಿಸುವುದು ತಪ್ಪಲ್ಲ. ಆದರೆ ಸರ್ಕಾರಗಳು ಇದಕ್ಕೆ ಅಪವಾದ. ಇದು ಹೊಸದೇನಲ್ಲ. ೧೯೬೪–೬೬ ರಲ್ಲಿ ಶಿಕ್ಷಣಕ್ಕೆ ರಾಷ್ಟ್ರೀಯ ಒಟ್ಟು ಉತ್ಪನ್ನದಲ್ಲಿ ಶೇಕಡ ೬ರಷ್ಟನ್ನು ಮೀಸಲಿಡಬೇಕೆಂದು ಶಿಕ್ಷಣ ಅಯೋಗವು ಶಿಫಾರಸು ಮಾಡಿತ್ತು. ಈವರೆಗೆ ಯಾವ ಸರ್ಕಾರವು ಆಯೋಗದ ಈ ಶಿಫಾರಸನ್ನು ಜಾರಿಗೊಳಿಸಲಿಲ್ಲ. ಅದು ಹಾಗಿರಲಿ, ತಾವೇ ಸಂಸತ್ತಿನಲ್ಲಿ ರೂಪಿಸಿರುವ ಸಾಮಾಜಿಕ ಕಾಯಿದೆಯೊಂದನ್ನು ಕನಿಷ್ಠ ಮಟ್ಟಿಗಾದರು ಜಾರಿಗೊಳಿಸಲು ಅಗತ್ಯವಾದ ಹಣಕಾಸನ್ನು ಮೀಸಲಿರಿಸಲು ಸರ್ಕಾರಗಳು ಸೋತಿವೆ.

samachara.com

ಒಂದೆಡೆ ಯಾವುದೇ ಅಂಕುಶವಿಲ್ಲದೆ ಬೆಳೆಯುತ್ತಿರುವ ಶಿಕ್ಷಣದ ಖಾಸಗೀಕರಣ ಮತ್ತು ವ್ಯಾಪಾರೀಕರಣ. ಮತ್ತೊಂದೆಡೆ, ಶಿಕ್ಷಣವನ್ನು ಸಾಮಾಜಿಕ ಒಳಿತೆಂದು ಪರಿಗಣಿಸಿ ಎಲ್ಲ ಮಕ್ಕಳಿಗೆ ನೆರೆಹೊರೆಯ ತತ್ವದ ಆಧಾರದ ಮೇಲೆ ಸಮಾನ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೊಳಿಸಲು ವಿಫಲವಾಗಿರುವ ಸರ್ಕಾರಗಳು. ಇದರಿಂದಾಗಿ ದೇಶಾದ್ಯಂತ ಲಕ್ಷಾಂತರ ಸರ್ಕಾರಿ ಶಾಲೆಗಳು ಮುಚ್ಚುವ ಸ್ಥಿತಿ ತಲುಪಿವೆ. ಪರಿಸ್ಥಿತಿ ಹೀಗಿರುವಾಗ ಸರ್ಕಾರಿ ಶಾಲೆಗಳನ್ನು ಉಳಿಸಿ–ಬೆಳೆಸುವ ಮೂಲಕ ಒಂದು ಹಂತದವರೆಗಾದರು ಗುಣಾತ್ಮಕ ಉಚಿತ ಕಡ್ಡಾಯ ಶಿಕ್ಷಣವನ್ನು ಒದಗಿಸಲು ಅವಶ್ಯಕವಾಗಿ ಬೇಕಾದ ಕನಿಷ್ಠ ಹಣವನ್ನೂ ಸರ್ಕಾರಗಳು ನೀಡಲೇಬೇಕಿದೆ. ಕಿರಿಯ–ಹಿರಿಯ ಪ್ರಾಥಮಿಕ ಶಾಲೆಗಳಿಗೆ ನೀಡುತ್ತಿರುವ ಶಾಲಾ ಅನುದಾನ ಮತ್ತು ನಿರ್ವಹಣಾ ಅನುದಾನವನ್ನು ಕ್ರಮವಾಗಿ ಒಂದುಲಕ್ಷ ಮತ್ತು ಒಂದೂವರೆ ಲಕ್ಷಕ್ಕೆ ಹೆಚ್ಚಿಸಬೇಕು.

ಈ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರ ದೇಶದ ಒಟ್ಟು ನಿವ್ವಳ ಉತ್ಪನ್ನದಲ್ಲಿ ಕನಿಷ್ಟ ಶೇಕಡಾ ೧೦ರಷ್ಟನ್ನು ಮತ್ತು ರಾಜ್ಯ ಸರ್ಕಾರ ತನ್ನ ಆಯವ್ಯಯದಲ್ಲಿ ಕನಿಷ್ಟ ಶೇಕಡ ೨೫ರಷ್ಟನ್ನು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಉಳಿಸಿ ಬೆಳೆಸಿ ನೆರೆ ಹೊರೆಯ ಸಮಾನ ಶಾಲೆಯ ತತ್ವದ ಮೇಲೆ ಬಲವರ್ಧನೆಗೊಳಿಸಲು ಮೀಸಲಿರಸಬೇಕು.

samachara.com

samachara.com

## ಶಿಫಾರಸು–೧೧

ಪಠ್ಯ ಪುಸ್ತಕ ರಚನೆಯು ಸಂವಿಧಾನದ ತಾತ್ವಿಕ ಬುನಾದಿ ಮೌಲ್ಯಗಳಾದ ಸಮಾನತೆ, ಸ್ವಾತಂತ್ರ್ಯ, ನ್ಯಾಯ, ಭ್ರಾತೃತ್ವ, ಜಾತ್ಯತೀತತೆ, ಘನತೆ, ಬಹುತ್ವ ಮತ್ತು ಶೋಷಣೆ ಮುಕ್ತ ಸಮ–ಸಮಾಜವನ್ನು ನೆಲೆಗೊಳಿಸುವ ಮೂಲ ಆಶಯಗಳನ್ನು ಎತ್ತಿ ಹಿಡಿಯಬೇಕು. ಪಠ್ಯ ಪುಸ್ತಕಗಳು ಶೈಕ್ಷಣಿಕ ವರ್ಷ ಪ್ರಾರಂಭಗೊಳ್ಳುವ ಕನಿಷ್ಠ ಹದಿನೈದು ದಿನಗಳ ಮುಂಚೆ ಆಯಾ ಶಾಲೆಗಳನ್ನು ತಲುಪಿರಬೇಕು

samachara.com

# ವಿವರಣೆ

ಪಠ್ಯಕ್ರಮ, ಪಠ್ಯವಸ್ತು ಮತ್ತು ಪಠ್ಯಕ್ರಮವನ್ನು ರಚಿಸುವಾಗ ಕೇಸರೀಕರಣ, ಕಾಂಗ್ರೇಸೀಕರಣ, ಇಸ್ಲಾಮೀಕರಣ ಇತ್ಯಾದಿಗಳಿಗಿಂತ 'ಸಂವಿಧಾನೀಕರಣ' ಬಹಳ ಮುಖ್ಯವಾದದ್ದು. ಶಿಕ್ಷಣದ ಪ್ರಕ್ರಿಯೆ ಇದಕ್ಕೆ ಹೊರತಲ್ಲ. ಪಠ್ಯಪುಸ್ತಕಗಳನ್ನು ಪರಿಷ್ಕರಿಸಲು ಹೊರಟಿರುವ ಈ ಸಂದರ್ಭದಲ್ಲಿ ಕೆಲವು ಮೂಲಭೂತ ಪ್ರಶ್ನೆಗಳನ್ನು ನಾವು ಎತ್ತಬೇಕಾಗುತ್ತದೆ. ಶಿಕ್ಷಣದ ಗೊತ್ತುಗುರಿಗಳೇನು; ಆ ಗುರಿಗಳನ್ನು ಸಾಧಿಸಲು ಯಾವ ರೀತಿಯ ಜ್ಞಾನದ ಮತ್ತು ಅನುಭವಗಳ ಅವಶ್ಯಕತೆಯಿದೆ; ಅಂಥಹ ಜ್ಞಾನ ಮತ್ತು ಅನುಭವಗಳನ್ನು ಕಟ್ಟಿಕೊಳ್ಳುವ ಬಗೆ ಹೇಗೆ; ಅದಕ್ಕೆ ಅಗತ್ಯವಾದ ಪರಿಕರಗಳೇನು; ನಾವೇ ಗುರುತಿಸಿಕೊಂಡಿರುವ ಗೊತ್ತುಗುರಿಗಳ ಈಡೇರಿಕೆಯನ್ನು ಖಚಿತಪಡಿಸಿಕೊಳ್ಳುವ ವಿಧಿವಿಧಾನಗಳೇನು ಎಂಬ ಹಲವು ಪ್ರಶ್ನೆಗಳನ್ನು ನಾವು ಪ್ರಾರಂಭಿಸಬೇಕಾದ ಪ್ರಕ್ರಿಯೆಗೆ ಮುನ್ನ ನಮಗೆ ನಾವೇ ಕೇಳಿಕೊಳ್ಳಬೇಕಿದೆ.

ಇದೇ ಸಂದರ್ಭದಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಹೊರೆರಹಿತ, ಭಯರಹಿತ ಮತ್ತು ಮಕ್ಕಳ ಸ್ನೇಹಿ ರಚನಾವಾದಿ ಕಲಿಕೆ. ಪ್ರೊ. ಯಶಪಾಲ್ ಸಮಿತಿ ಹೇಳಿದಂತೆ 'ಮಾಹಿತಿಯನ್ನು ಜ್ಞಾನವೆಂದು ಪರಿಗಣಿಸಿರುವುದೇ' ಈಗಿನ ಶಿಕ್ಷಣ ವ್ಯವಸ್ಥೆಯ ಮೂಲ ಸಮಸ್ಯೆ. ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳ ರಚನೆಗೆ ಸಂಬಂಧಿಸಿದಂತೆ ಈ ಸಮಿತಿಯು ಮುಖ್ಯವಾದ ಶಿಫಾರಸೊಂದನ್ನು ಮಾಡಿದೆ. ಅದೆಂದರೆ, 'ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳ ತಯಾರಿಕೆಯ ಪ್ರಕ್ರಿಯೆಗೆ ಸಂಬಂಧಿಸಿದಂತೆ ವಿಕೇಂದ್ರೀಕರಣಕ್ಕೆ ಒತ್ತು ನೀಡಿ ಶಿಕ್ಷಕರ ಒಳಗೊಳ್ಳುವಿಕೆಯನ್ನು ಹೆಚ್ಚಿಸಿಕೊಳ್ಳಬೇಕು. ವಿಕೇಂದ್ರೀಕರಣವೆಂದರೆ, ರಾಜ್ಯದಿಂದ ಜಿಲ್ಲೆಯವರೆಗೆ ಅಥವಾ ಉಳಿದ ಸೂಕ್ತ ಪ್ರಾಧಿಕಾರದ ಹಂತಗಳಲ್ಲಿ ಹಾಗು ಶಾಲೆಯ ಮುಖ್ಯಸ್ಥರು ಮತ್ತು ತರಗತಿಯ ಶಿಕ್ಷಕರಿಗೆ ಸ್ಥಳೀಯ ಪರಿಸರಕ್ಕೆ ಮತ್ತು ಅಗತ್ಯಗಳಿಗೆ ಸೂಕ್ತ ಹೊಂದಾಣಿಕೆ ಯಾಗುವ ಪಠ್ಯಕ್ರಮದ ವಸ್ತುವನ್ನು ಅವರೇ ಸ್ವತಃ ರೂಪಿಸಿಕೊಳ್ಳುವ ಸ್ವಾಯತ್ತತೆ. ಎಲ್ಲ

samachara.com

ಶಾಲೆಗಳು ಪಠ್ಯಪುಸ್ತಕ ಮತ್ತು ಇತರೆ ಕಲಿಕಾ ಸಾಮಗ್ರಿಗಳನ್ನೊಳಗೊಂಡಂತೆ ಪಠ್ಯಕ್ರಮದ ವಿವಿಧ ಆಯಾಮಗಳಿಗೆ ಸಂಬಂಧಿಸಿದ ಪರಿಕರಗಳನ್ನು ತಾವೇ ಅನ್ವೇಷಿಸಲು ಎಲ್ಲ ರೀತಿಯ ಪ್ರೋತ್ಸಾಹವನ್ನು ನೀಡಬೇಕು". ಹೀಗಾಗಿ, ನಾವು ಪಠ್ಯ ಪುಸ್ತಕಗಳನ್ನು ಪರಿಷ್ಕರಿಸಿ ಪನರ್ರಚಿಸಿಕೊಳ್ಳುವಾಗ ಮಾಹಿತಿಗಿಂತ ಜ್ಞಾನ ಮತ್ತು ಅನುಭವದ ಕಲಿಕೆಗೆ ಹೆಚ್ಚು ಒತ್ತು ನೀಡುವುದು ಮೊದಲ ಆದ್ಯತೆಯಾಗಬೇಕು.

ಸಾಮಾನ್ಯವಾಗಿ ಪಠ್ಯ ಪುಸ್ತಕಗಳ ರಚನೆಯ ಸಂದರ್ಭದಲ್ಲಿ ಸೈದ್ಧಾಂತಿಕ ಭಿನ್ನಾಭಿಪ್ರಾಯ, ಸಂಘರ್ಷ ಮತ್ತು ಜಿಜ್ಞಾಸೆ ಮೂಡುವುದು ಹೆಚ್ಚು ಸಮಾಜ ವಿಜ್ಞಾನದ ವಿಷಯಗಳಲ್ಲಿ. ಈ ವಿಷಯಗಳಿಗೆ ಸಂಬಂಧಿಸಿದಂತೆ ಪಠ್ಯ ಪುಸ್ತಕಗಳನ್ನು ರಚಿಸುವಾಗ ಸ್ವಾತಂತ್ರ್ಯ, ನಂಬಿಕೆ, ಪರಸ್ಪರ ಗೌರವ ಮತ್ತು ಬಹುತ್ವವನ್ನು ಗೌರವಿಸುವುದು ಮತ್ತು ಮಾನವೀಯ ಮೌಲ್ಯಗಳನ್ನು ಜನರ ಮನಸ್ಸಿನಲ್ಲಿ ಮೂಡಿಸುವ ಗುರುತರ ಜವಾಬ್ದಾರಿ ಸಮಾಜ ವಿಜ್ಞಾನದ ಮೇಲಿದೆ. ಈ ಮೌಲ್ಯಗಳನ್ನು ನಾಶಪಡಿಸುವ ಶಕ್ತಿಗಳ ಬಗ್ಗೆ ಎಚ್ಚರವಹಿಸಲು ಸಹಾಯಕವಾಗುವಂತೆ ನೈತಿಕ ಮತ್ತು ಮಾನಸಿಕ ಶಕ್ತಿಯನ್ನು ಸಮಾಜ ವಿಜ್ಞಾನ ವಿದ್ಯಾರ್ಥಿಗಳಲ್ಲಿ ತುಂಬಬೇಕಾಗುತ್ತದೆ.

ನಮಗೆಲ್ಲ ತಿಳಿದಿರುವಂತೆ ಈಗ ಭಾರತದಲ್ಲಿ ಪ್ರಜಾಪ್ರಭುತ್ವ ಪ್ರಬುದ್ಧಮಾನಕ್ಕೆ ಬಂದಿದ್ದು, ಪ್ರಜಾಪಭುತ್ವವನ್ನು ಗಟ್ಟಿಗೊಳಿಸುವ ಬಲಿಷ್ಠ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕಿದೆ. ಅದರಲ್ಲೂ ವಿಶೇಷವಾಗಿ ಸಮಾನತೆ ಮತ್ತು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಸಮಾಜವನ್ನು ವಿಶ್ಲೇಷಿಸಲು ಅಗತ್ಯವಾದ ಜ್ಞಾನವನ್ನು ಮಕ್ಕಳಿಗೆ ಕಟ್ಟಿಕೊಡಬೇಕಿದೆ.

ಸಮಕಾಲೀನ ಕಾಳಜಿಯ ಭಾಗವಾಗಿ ಲಿಂಗ ಕಾಳಜಿಗಳನ್ನು ಚರ್ಚಿಸುವಾಗ ಯಾವದೇ ಐತಿಹಾಸಿಕ ಘಟನೆ ಅಥವಾ ಸಮಕಾಲೀನ ಕಾಳಜಿಗಳನ್ನು ಮಹಿಳಾ ದೃಷ್ಟಿಕೋನದ ಅವಿಭಾಜ್ಯ ಅಂಗವಾಗಿ ನೋಡಬೇಕಾಗುತ್ತದೆ. ಇದಕ್ಕಾಗಿ ಈಗಿನ ಸಮಾಜ ವಿಜ್ಞಾನದಲ್ಲಿನ ಪಿತೃ ಪ್ರಧಾನ ವ್ಯವಸ್ಥೆಯ ಪೂರ್ವಾಗ್ರಹಪೀಡಿತ ಜ್ಞಾನ ಮೀಮಾಂಸೆಯ ಚೌಕಟ್ಟಿನಿಂದ ಪೂರ್ಣ ಹೊರನಿಂತು ನೋಡುವ ಅವಶ್ಯಕತೆಯಿದೆ. ಮಾನವ ಹಕ್ಕುಗಳ ಪರಿಕಲ್ಪನೆಗೆ ಒಂದು ಸಾರ್ವತ್ರಿಕ ಪರಾಮರ್ಶೆಯ ಚೌಕಟ್ಟಿದೆ. ಮಕ್ಕಳು ಚಿಕ್ಕವರಿರುವಾಗಲೇ ಅವರಿಗೆ ಈ ಸಾರ್ವತ್ರಿಕ ಮೌಲ್ಯಗಳನ್ನು ಅವರ ವಯಸ್ಸಿಗೆ ಅನುಗುಣವಾದ ಪರಿಭಾಷೆಯಲ್ಲಿ ಪರಿಚಯಿಸುವುದು ಅಗತ್ಯವಿದೆಯೆಂದು ಈ ಚೌಕಟ್ಟು ಅಭಿಪ್ರಾಯಪಡುತ್ತದೆ.

ಪ್ರೌಢಶಾಲಾ ಹಂತದಲ್ಲಿ ಸಮಾಜ ವಿಜ್ಞಾನದಲ್ಲಿ ಚರಿತ್ರೆ, ಭೂಗೋಳ ಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರಗಳ ವಿಶಿಷ್ಟ ಅಂಶಗಳನ್ನು ಸೇರಿಸಬೇಕು. ಸಮಕಾಲೀನ ಭಾರತವನ್ನು ಕೇಂದ್ರವಾಗಿಟ್ಟುಕೊಂಡು ವಿದ್ಯಾರ್ಥಿಗೆ ದೇಶ ಎದುರಿಸುತ್ತಿರುವ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗು ಸಾಂಸ್ಕೃತಿಕ ಸವಾಲುಗಳನ್ನು ವಿಶ್ಲೇಷಿಸಿ ತೀರ್ಮಾನಿಸುವ ಆಳವಾದ ಜ್ಞಾನವನ್ನು ಒದಗಿಸಬೇಕು. ಜ್ಞಾನ ಗ್ರಹಿಕೆಯ ಪಲ್ಲಟವನ್ನು ಗಮನದಲ್ಲಿಟ್ಟಿಕೊಂಡು ವರ್ತಮಾನ ಭಾರತವನ್ನು ಆದಿವಾಸಿ ದಲಿತ ಮತ್ತು ಇನ್ನಿತರ ಅಂಚಿನಲ್ಲಿರುವ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಚರ್ಚಿಸುವಂತಾಗಬೇಕು. ಮಗುವಿನ ದಿನ ನಿತ್ಯದ ಜೀವನದ ಜೊತೆ ವಸ್ತುವನ್ನು ಸಮೀಕರಿಸುವ ಪ್ರಯತ್ನ ಆಗಬೇಕು. ಭಾರತದ ಸ್ವಾತಂತ್ರ್ಯ ಚಳುವಳಿ ಮತ್ತು ಆಧುನಿಕ ಚರಿತ್ರೆಯ ಸಂಗತಿಗಳನ್ನು ಹಾಗು ಜಾಗತಿಕ ಮಟ್ಟದಲ್ಲಿನ ಮಹತ್ವದ ಬೆಳವಣಿಗೆಗಳನ್ನು ಚರಿತ್ರೆಯಲ್ಲಿ ಅಳವಡಿಸಿಕೊಳ್ಳಬೇಕು. ಮಕ್ಕಳಿಗೆ ತಾವು ಬದುಕುತ್ತಿರುವ ವಿಶ್ವದ ಬಗ್ಗೆ ಹೆಚ್ಚು ಹೆಚ್ಚು ತಿಳಿದುಕೊಳ್ಳಲು ಮತ್ತು ಸಮೃದ್ಧವೂ ವೈವಿಧ್ಯಮಯವೂ ಆದ ಭೂತಕಾಲದ ಸಂಗತಿಗಳ ಪ್ರಭಾವದಿಂದ ತಮ್ಮ ವ್ಯಕ್ತಿತ್ವ ಬೆಳೆದು ಬಂದ ಬಗೆ ಈ ಅಂಶಗಳನ್ನು ತಿಳಿಸುವುದು ಚರಿತ್ರೆಯ ಮೂಲ ಉದ್ದೇಶವಾಗಬೇಕು. ಈಗ ತಮ್ಮ ಪ್ರಪಂಚದಲ್ಲಿ ಬದಲಾವಣೆ ಮತ್ತು ನಿರಂತರತೆಯ ಪ್ರಕ್ರಿಯೆಗಳನ್ನು ಅನ್ವೇಷಿಸಲು ಮತ್ತು ಅಧಿಕಾರ ಮತ್ತು ಹತೋಟಿ ಇವುಗಳನ್ನು ಅಂದು ಹಾಗೂ ಇಂದು ಯಾವ ಬಗೆಯಲ್ಲಿ ಬಳಸಲಾಗಿದೆ ಎಂಬುವುದನ್ನು ತುಲನಾತ್ಮಕವಾಗಿ ನೋಡುವುದನ್ನು ಚರಿತ್ರೆಯ ಮುಖಾಂತರ ತಿಳಿಸಿಕೊಡಬೇಕು. ಅಭಿವೃದ್ಧಿಯ ಜೊತೆ ಜೊತೆಗೆ ಪರಿಸರವನ್ನು ಸಂರಕ್ಷಿಸುವ ಕುರಿತು ಮೆಚ್ಚುಗೆ ಮತ್ತು ಕಳಕಳಿ ಇವುಗಳನ್ನು ಮಕ್ಕಳಲ್ಲಿ ಬೆಳೆಸುವ ನಿಟ್ಟಿನಲ್ಲಿ ಭೂಗೋಳಶಾಸ್ತ್ರದ ಬೋಧನೆ ಆಗಬೇಕು.

ಎಲ್ಲಕ್ಕಿಂತ ಮಿಗಿಲಾಗಿ, ಭಾರತೀಯ ಸಂವಿಧಾನದ ತಾತ್ವಿಕ ಬುನಾದಿ ಮತ್ತು ಅದರಲ್ಲಿ ಪ್ರಸ್ತಾಪವಾಗಿರುವ ವಿಶಿಷ್ಟ ಮೌಲ್ಯಗಳಾದ ಸಮಾನತೆ, ಸ್ವಾತಂತ್ರ್ಯ, ನ್ಯಾಯ, ಭ್ರಾತೃತ್ವ, ಜಾತ್ಯತೀತತೆ, ಘನತೆ, ಬಹುತ್ವ ಮತ್ತು ಶೋಷಣೆ ಮುಕ್ತಿ ಸಮ–ಸಮಾಜದ ಬಗ್ಗೆ ಆಳವಾದ ಚರ್ಚೆ ರಾಜಕೀಯಶಾಸ್ತ್ರದ ಕೇಂದ್ರಬಿಂದುವಾಗಿರಬೇಕು. ಈ ಹಂತದಲ್ಲಿ ಮಕ್ಕಳಿಗೆ ಅರ್ಥಶಾಸ್ತ್ರವನ್ನು ಪರಿಚಯಿಸುವಾಗ ಜನರ ದೃಷ್ಟಿಯನ್ನು ಇಟ್ಟುಕೊಂಡು ವಿಷಯಗಳನ್ನು ಆಯ್ಕೆ ಮಾಡಬೇಕು.

ಒಟ್ಟಾರೆ, ಪಠ್ಯ ಪುಸ್ತಕ ಪರಿಷ್ಕರಣೆ ಈಗ ನಾವು ಮಕ್ಕಳಿಗೆ ಜ್ಞಾನ ಕಟ್ಟಿಕೊಡಲು ಅನುಸರಿಸುತ್ತಿರುವ ವಿಧಿ–ವಿಧಾನಗಳ ಜೊತೆಗೆ ನಾವು ಬಳಸುತ್ತಿರುವ ವಿಷಯ,

samachara.com

ವಿಶ್ಲೇಷಣಾ ವಿಧಾನ, ಪ್ರಾಪಂಚಿಕ ದೃಷ್ಟಿಕೋನ ಮತ್ತು ಆಲೋಚನಾ ಕ್ರಮದ ಮೂಲ ಸ್ವರೂಪವನ್ನೇ ಸಮಗ್ರವಾಗಿ ಬದಲಾಯಿಸುವಂತಾಗಬೇಕು. ಈ ಎಲ್ಲ ಬದಲಾವಣೆಗಳು ಸಾಕಾರಗೊಳ್ಳಬೇಕಾದರೆ ಸಮಾನಾಂತರವಾಗಿ ತರಗತಿ ಕೋಣೆಯ ಕಲಿಕಾ ಪ್ರಕ್ರಿಯೆ ಮತ್ತು ಶಿಕ್ಷಕರ ಶಿಕ್ಷಣದಲ್ಲಿ ಆಮೂಲಾಗ್ರ ಬದಲಾವಣೆಯಾಬೇಕು. ಇದನ್ನು ಹೊರತು ಪಡಿಸಿ ನಾಮಾಕಾವಸ್ತೆಗೆ ಪಠ್ಯ ಪುಸ್ತಕ ಪರಿಷ್ಕರಣೆಯಾದರೆ ಅದರಿಂದ ಶಿಕ್ಷಣ ವ್ಯವಸ್ಥೆಯ ಸಮಗ್ರ ಸುಧಾರಣೆಯಾಗಲಾರದು.

samachara.com

samachara.com

## ಶಿಫಾರಸು–೧೨

ಖಾಸಗಿ ಅನುದಾನ ರಹಿತ ಶಾಲೆಗಳಲ್ಲಿ ಕ್ಯಾಪಿಟೇಷನ್/ವಂತಿಗೆ ಶುಲ್ಕ ಸಂಗ್ರಹಿಸುವುದು ಮತ್ತು ಮಕ್ಕಳಿಗೆ ಪ್ರವೇಶ ನೀಡುವಾಗ ಮಕ್ಕಳಿಗಾಗಲೀ ಅವರ ಪಾಲಕ ಪೋಷಕರಿಗಾಗಲಿ ಪ್ರವೇಶ ಪರೀಕ್ಷೆ ನಡೆಸುವುದನ್ನು ತಕ್ಷಣ ನಿಲ್ಲಿಸಬೇಕು. ಇದರ ಪರಿವೀಕ್ಷಣೆ ಹಾಗೂ ಮೇಲ್ವಿಚಾರಣೆಗೆ ರಾಜ್ಯಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಉಸ್ತುವಾರಿ ಸಮಿತಿಗಳ ರಚನೆ ಮಾಡಬೇಕು.

samachara.com

# ವಿವರಣೆ

(ಅ) ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ ೨೦೦೯ ಪ್ರಕರಣ ೧೩ (೧)ರ ಅನ್ವಯ ಯಾವುದೇ ಶಾಲೆ ಮಗುವಿಗೆ ಪ್ರವೇಶ ನೀಡುವಾಗ, ಯಾವುದೇ ರೀತಿಯ ಕ್ಯಾಪಿಟೇಷನ್ ಶುಲ್ಕವನ್ನು ವಸೂಲು ಮಾಡತಕ್ಕದ್ದಲ್ಲ. ಜೊತೆಗೆ ಮಗುವನ್ನು ಅಥವಾ ಅವನ ಅಥವಾ ಅವಳ ತಂದೆ–ತಾಯಿ ಅಥವಾ ಪೋಷಕರನ್ನು ಪರಿಶೋಧನೆಗೆ ಒಳಪಡಿಸತಕ್ಕದ್ದಲ್ಲ. ಇದನ್ನು ಉಲ್ಲಂಘಿಸಿದಲ್ಲಿ ಕಾಯಿದೆಯ ಪ್ರಕರಣ ೧೩(೨) (ಬಿ) ಅನ್ವಯ ಯಾವುದೇ ಶಾಲೆ ಅಥವಾ ವ್ಯಕ್ತಿಯು ಕ್ಯಾಪಿಟೇಷನ್ ಶುಲ್ಕವನ್ನು ಸ್ವೀಕರಿಸಿದರೆ, ವಿಧಿಸಿದ ಕ್ಯಾಪಿಟೇಷನ್ ಶುಲ್ಕದ ಹತ್ತುಪಟ್ಟಿನವರೆಗೆ ವಿಸ್ತರಿಸಬಹು ದಾಗಿರುವ ಜುಲ್ಮಾನೆಯಿಂದ ದಂಡನೀಯನಾಗಬಹುದು. ಮಗುವನ್ನು ಪರಿಶೋಧನೆಗೆ ಒಳಪಡಿಸಿದರೆ, ಮೊದಲ ಉಲ್ಲಂಘನೆಗಾಗಿ ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ಮತ್ತು ತರುವಾಯದ ಪ್ರತಿಯೊಂದು ಉಲ್ಲಂಘನೆಗಾಗಿ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯ ನಾಗಬಹುದು.

ಆರ್‌ಟಿಇ ಕಾಯಿದೆ ಪ್ರಕರಣ ೧೨ (೧)(ಸಿ) ಅನ್ವಯ ನಿರ್ದಿಷ್ಟ ಪ್ರವರ್ಗ ಹಾಗು ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ಶೇಕಡಾ ೨೫ರಷ್ಟು ಅವಕಾಶವಂಚಿತ ಹಾಗು ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಪ್ರವೇಶ ದೊರಕಿಸುವ ಪ್ರಕ್ರಿಯೆಯಲ್ಲಿರುವ ಸಂಕೀರ್ಣ ಸಾಧಕ–ಬಾಧಕಗಳ ಜೊತೆಗೆ ಆರ್‌ಟಿಇ ಕಾಯಿದೆಯಿಂದ ಹೊರತಾದ ಉಳಿದ ಶೇಕಡಾ ೭೫ರಷ್ಟು ಮಕ್ಕಳ ಪ್ರವೇಶವೂ ಕೂಡ ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ಅಷ್ಟೇ ಕಗ್ಗಂಟಿನಿಂದ ಕೂಡಿದೆ. ಖಾಸಗಿ ಶಾಲೆಗಳು ಆರ್‌ಟಿಇ ಕಾಯಿದೆಯನ್ನು ಪರಿಪೂರ್ಣವಾಗಿ ಅನುಷ್ಠಾನ ಮಾಡದಿರುವುದರಿಂದ, ಆರ್‌ಟಿಇ ಕಾಯಿದೆ ಅಡಿ ಪ್ರವೇಶ ಪಡೆಯುವ ಮಕ್ಕಳಲ್ಲದೆ ಉಳಿದ ಶೇಕಡ ೭೫ ರಷ್ಟು ಮಕ್ಕಳಿಗೂ ತುಂಬಾ ತೊಂದರೆಯಾಗುತ್ತಿದೆ. ಹೀಗಾಗಿ, ಉಳಿದ ಶೇಕಡಾ ೭೫ರಷ್ಟು

samachara.com

ಮಕ್ಕಳ ಪ್ರವೇಶ ಕುರಿತಂತೆಯೂ ಸರ್ಕಾರ ಗಮನ ಹರಿಸಬೇಕಿದೆ. ಉದಾಹರಣೆಗೆ, ಆರ್‌ಟಿಇ ಕಾಯಿದೆ ಪ್ರಕರಣ ೨(ಬಿ) ಅನ್ವಯ ಪ್ರತಿಯೊಂದು ಶಾಲೆ ಆಯಾ ಶೈಕ್ಷಣಿಕ ವರ್ಷದಲ್ಲಿ ತೆಗೆದುಕೊಳ್ಳಬೇಕಾದ ಶುಲ್ಕವನ್ನು ಶಾಲೆಯ ಸೂಚನಾ ಫಲಕದಲ್ಲಿ ಅಧಿಕೃತವಾಗಿ ಪ್ರಕಟಿಸಬೇಕಾಗುತ್ತದೆ. ಪ್ರಕಟಿಸಿದ ಶುಲ್ಕವನ್ನು ಹೊರತುಪಡಿಸಿ ತೆಗೆದುಕೊಳ್ಳುವ ಯಾವುದೇ ರೀತಿಯ ದೇಣಿಗೆ ಅಥವಾ ಕಾಣಿಕೆ ಅಥವಾ ಹಣಪಾವತಿ 'ಕ್ಯಾಪಿಟೇಷನ್ ಶುಲ್ಕ'ವೆನಿಸಿಕೊಳ್ಳುತ್ತದೆ. ಆರ್‌ಟಿಇ ಕಾಯಿದೆಯ ಪ್ರಕರಣ ೧೩(೧)ರ ಅನ್ವಯ ಶಾಲೆಗಳು ಕ್ಯಾಪಿಟೇಷನ್ ಶುಲ್ಕ ವಸೂಲು ಮಾಡುವುದನ್ನು ನಿಷೇಧಿಸಲಾಗಿದೆ. ಪ್ರಕರಣ ೧೩(೧)ನ್ನು ಉಲ್ಲಂಘಿಸಿದರೆ ಪ್ರಕರಣ ೧೩(೨)ರ ಅನ್ವಯ ಕ್ಯಾಪಿಟೇಷನ್ ಶುಲ್ಕವನ್ನು ಸ್ವೀಕರಿಸಿದ ಯಾವುದೇ ಶಾಲೆ ಅಥವಾ ವ್ಯಕ್ತಿಯನ್ನು ವಿಧಿಸಿದ ಕ್ಯಾಪಿಟೇಷನ್ ಶುಲ್ಕದ ಹತ್ತುಪಟ್ಟಿನವರೆಗೆ ವಿಸ್ತರಿಸಬಹುದಾಗಿರುವ ಜುಲ್ಮಾನೆಯಿಂದ ದಂಡಿಸಬಹುದಾಗಿದೆ.

ಜೊತೆಗೆ, ಆರ್‌ಟಿಇ ಕಾಯಿದೆ ಮತ್ತು ಹೊರತಾದ ಮಕ್ಕಳು ಪ್ರವೇಶ ಪಡೆದ ನಂತರ ಈ ಶಾಲೆಗಳಲ್ಲಿ ಹಲುವು ರೀತಿಯ ತಾರತಮ್ಯ, ಶೋಷಣೆ ಮತ್ತು ದಬ್ಬಾಳಿಕೆಗೆ ಒಳಗಾದ ಪ್ರಕರಣಗಳು ಮಾಧ್ಯಮದಲ್ಲಿ ನಿತ್ಯ ವರದಿಯಾಗುತ್ತಿವೆ. ಪ್ರಕರಣಗಳ ಬಗ್ಗೆ ವರದಿ ಮಾಡಿದರೆ ತಮ್ಮ ಮಕ್ಕಳ ಭವಿಷ್ಯಕ್ಕೆ ಧಕ್ಕೆಯಾಗಬಹುದೆಂದು ಹೆದರುವ ಬಹುತೇಕ ಪಾಲಕರು ನಿತ್ಯ ಆತಂಕ ಮತ್ತು ಒತ್ತಡದ ಪರಿಸ್ಥಿತಿಯಲ್ಲಿ ಬದುಕುವಂತಾಗಿದೆ. ಕಾಯಿದೆ ಜಾರಿಯಾಗಿ ೭ ವರ್ಷಗಳು ಕಳೆದರೂ ಕಾಯಿದೆಯ ಸಮಗ್ರ ಆಶಯ ಜಾರಿಯಾಗದಿರುವುದು ವಿಷಾದನೀಯ. ಈ ಎಲ್ಲ ಕಾರಣಗಳಿಂದ ಆರ್‌ಟಿಇ ಕಾಯಿದೆಯನ್ನು ಕೇವಲ ಪ್ರಕರಣ ೧೨ (೧)(ಸಿ)ಯನ್ನು ಜಾರಿಗೊಳಿಸಲು ಸೀಮಿತಗೊಳಿಸದೆ, ಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಮಗ್ರ ನೀಲಿನಕಾಶೆಯನ್ನು ಸಿದ್ಧಗೊಳಿಸಿ ಮುಂದಿನ ಶೈಕ್ಷಣಿಕ ವರ್ಷದಿಂದ ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಈ ಕಾಯ್ದೆಗಳ ಅನುಷ್ಠಾನದ ಮೇಲ್ವಿಚಾರಣೆಗೆ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಶಿಕ್ಷಣ ತಜ್ಞರು, ಕಾನೂನು ತಜ್ಞರನ್ನು ಒಳಗೊಂಡ ಸಮಿತಿ ರಚಿಸಬೇಕು. ಹಾಗೆಯೇ ರಾಜ್ಯಮಟ್ಟದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನೊಳಗೊಂಡಂತೆ ಸಾಹಿತಿಗಳು, ಶಿಕ್ಷಣ ತಜ್ಞರು, ಕಾನೂನು ತಜ್ಞರ ಸಮಿತಿ ರಚಿಸಬೇಕು.

samachara.com

samachara.com

## ಶಿಫಾರಸು–೧೩

**ಸರ್ಕಾರಿ ಶಾಲೆಗಳ ಸಬಲೀಕರಣ ದೃಷ್ಟಿಯಿಂದ :**

(ಅ) ಆರ್.ಟಿ.ಇ ಅಡಿಯಲ್ಲಿ ಶೇ.೨೫ರಷ್ಟು ಮಕ್ಕಳನ್ನು ಖಾಸಗಿ ಶಾಲೆಗೆ ಕಳುಹಿಸಿ ಅವರ ಶುಲ್ಕವನ್ನು ಸರ್ಕಾರ ಭರಿಸುತ್ತಿರುವುದನ್ನು ನಿಲ್ಲಿಸಬೇಕು. ಅದೇ ಹಣವನ್ನು ಸರ್ಕಾರಿ ಶಾಲೆಗಳ ಸಬಲೀಕರಣಕ್ಕೆ ಬಳಸಬೇಕು.

(ಆ) ಆರ್.ಟಿ.ಇ ಅಡಿಯಲ್ಲಿ ಖಾಸಗಿ ಶಾಲೆಗಳಿಗೆ ಪ್ರವೇಶ ಪಡೆದ ಮಕ್ಕಳಿಗೆ ಉಚಿತ ಶಿಕ್ಷಣ ನೀಡುವುದು ಆಯಾ ಖಾಸಗಿ ಶಾಲೆಗಳ ಸಾಮಾಜಿಕ ಜವಾಬ್ದಾರಿಯಾಗಬೇಕು.

samachara.com

# ವಿವರಣೆ

(ಅ) ಶಿಕ್ಷಣ ಹಕ್ಕು ಕಾಯ್ದೆಯಡಿಯಲ್ಲಿ ಶೇ.೨೫ರಷ್ಟು ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳುಹಿಸಿ ಕರ್ನಾಟಕ ಸರ್ಕಾರವು ಆ ಮಕ್ಕಳಿಗೆ ಇಲ್ಲಿಯವರೆಗೆ ಸಾವಿರಾರು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುತ್ತಿದೆ. ಅದು ಪ್ರತಿ ವರ್ಷ ಹೆಚ್ಚುತ್ತಾ ಹೋಗುತ್ತದೆ. ಇದು ಒಂದು ದೊಡ್ಡ ಮೊತ್ತವಾಗಿದ್ದು ತಕ್ಷಣ ಇದನ್ನು ಸ್ಥಗಿತಗೊಳಿಸಿ ಖಾಸಗಿ ಶಾಲೆಗಳು ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಅಡಿಯಲ್ಲಿ ಭರಿಸುವಂತೆ ಆದೇಶಿಸಬೇಕು.

ಆರ್‌ಟಿಇ ಕಾಯಿದೆಯನ್ನು ಸಮಗ್ರವಾಗಿ ಜಾರಿಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು. ಶಿಕ್ಷಣವನ್ನು ಸಾಮಾಜಿಕ ಒಳಿತು ಮತ್ತು ಸಾಮಾಜಿಕ ಸೇವೆಯೆಂಬ ಹೆಸರಿನಲ್ಲಿ ಸಂಸ್ಥೆಗಳನ್ನು ಪ್ರಾರಂಭಿಸುವ ಖಾಸಗಿ ಸಂಸ್ಥೆಗಳು ಸರ್ಕಾರದಿಂದ ಭೂಮಿ, ಕಟ್ಟಡ, ವಿದ್ಯುಚ್ಛಕ್ತಿ, ನೀರು, ರಸ್ತೆ, ಮೂಲಭೂತ ಸೌಕರ್ಯ ಇತ್ಯಾದಿಗಳನ್ನು ಉಚಿತವಾಗಿ ಅಥವಾ ರಿಯಾಯಿತಿ ದರದಲ್ಲಿ ಪಡೆದಿರುತ್ತವೆ. ಈ ಶಾಲೆಗಳು ಸರ್ಕಾರದಿಂದ ಪಡೆದಿರುವ ಎಲ್ಲಾ ಸೌಲಭ್ಯಗಳ ಪೂರ್ಣ ಮಾಹಿತಿಯನ್ನು ಸರ್ಕಾರ ಸಂಗ್ರಹಿಸಬೇಕು. ಹೀಗಾಗಿ, ಈ ಸಂಸ್ಥೆಗಳು ಶಾಲೆಯ ನೆರೆಹೊರೆಯ ಮಕ್ಕಳಿಗೆ ಕನಿಷ್ಟ ಶೇಕಡಾ ೨೫ ರಷ್ಟು ಸೀಟುಗಳನ್ನು ಉಚಿತವಾಗಿ ನೀಡುವುದು ಸಾಮಾಜಿಕ ಹೊಣೆಯಾಗುತ್ತದೆ. ಆದ್ದರಿಂದ, ಈ ಶಾಲೆಗಳಿಗೆ ನೀಡುತ್ತಿರುವ ಶುಲ್ಕ ಮರುಪಾವತಿಯನ್ನು ಈ ಶೈಕ್ಷಣಿಕ ವರ್ಷದಿಂದಲೇ ತಕ್ಷಣ ಜಾರಿಗೆ ಬರುವಂತೆ ನಿಲ್ಲಿಸಿ ಆ ಹಣವನ್ನು ಸರ್ಕಾರಿ ಶಾಲೆಗಳ ಸಬಲೀಕರಣಕ್ಕೆ ಬಳಸಬೇಕು. ಸರ್ವೋಚ್ಚ ನ್ಯಾಯಾಲಯದ ಹಲವು ತೀರ್ಪಿನಂತೆ, ಖಾಸಗಿ ಸಂಸ್ಥೆಗಳು ಮಕ್ಕಳಿಗೆ ಶಿಕ್ಷಣ ಒದಗಿಸುವ ಕೆಲಸ ಲಾಭರಹಿತ ಸೇವೆಯಾಗಿರಬೇಕೇ ಹೊರತು ಲಾಭಗಳಿಸುವ ವ್ಯಾಪಾರದ ಉದ್ಯಮವಾಗದಂತೆ ಎಚ್ಚರಿಕೆ ವಹಿಸಲು ಸರ್ಕಾರ ಅಗತ್ಯ ಕಾನೂನನ್ನು ರೂಪಿಸಬೇಕು.

(ಆ) ಶಿಕ್ಷಣ ಹಕ್ಕು ಕಾಯಿದೆಯಲ್ಲಿ ಒಟ್ಟು ೩೮ ಸೆಕ್ಷನ್‌ಗಳಿದ್ದು ಒಂದು ಅನುಸೂಚಿಯಿದೆ. ಈ ೩೮ ಸೆಕ್ಷನ್‌ಗಳಲ್ಲಿ ಸಾಮಾನ್ಯ ಮಕ್ಕಳೂ ಸೇರಿದಂತೆ ವಿಶೇಷ

samachara.com

ಅಗತ್ಯವುಳ್ಳ ಹಾಗು ಶಾಲೆಯಿಂದ ಹೊರಗುಳಿದ ಮಕ್ಕಳಿಗಿರುವ ಶಿಕ್ಷಣದ ಮೂಲಭೂತ ಹಕ್ಕನ್ನು ಪ್ರಸ್ತಾವಿಸಲಾಗಿದೆ. ಕೇಂದ್ರ, ರಾಜ್ಯ ಹಾಗು ಸ್ಥಳೀಯ ಪ್ರಾಧಿಕಾರ ನಿರ್ವಹಿಸಬೇಕಾದ ಜವಾಬ್ದಾರಿ ಇತ್ಯಾದಿಗಳ ಬಗ್ಗೆ ಸವಿವರವಾಗಿ ತಿಳಿಸಲಾಗಿದೆ. ಶಿಕ್ಷಣ ಹಕ್ಕು ಕಾಯಿದೆಯ ಒಂದು ವಿಶೇಷವೆಂದರೆ, ಇದೊಂದು ಕಾನೂನಾಗಿದ್ದರೂ ಕಾಯಿದೆಯ ಪರಿಭಾಷೆ ಮಾತ್ರ ಅತ್ಯಂತ ಸರಳವಾಗಿದ್ದು ಎಲ್ಲರೂ ಸುಲಭವಾಗಿ ಅದರಲ್ಲೂ ವಿಶೇಷವಾಗಿ ಜಾರಿಗೊಳಿಸುವ ಜವಾಬ್ದಾರಿ ಹೊತ್ತಿರುವ ವಿವಿಧ ಹಂತದ ಸರ್ಕಾರಿ ಅಧಿಕಾರಿಗಳು ಸರಳವಾಗಿ ಅರ್ಥ ಮಾಡಿಕೊಳ್ಳುವ ರೀತಿಯಲ್ಲಿ ಕಾನೂನನ್ನು ಬರೆಯಲಾಗಿದೆ.

ಇಡೀ ಶಿಕ್ಷಣ ಇಲಾಖೆ ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ಅವಕಾಶ ವಂಚಿತ ಮತ್ತು ಆರ್ಥಿಕವಾಗಿ ದುರ್ಬಲ ವರ್ಗಕ್ಕೆ ಸೇರಿದ ಮಕ್ಕಳಿಗೆ ಕಾಯಿದೆಯ ಸೆಕ್ಷನ್ ೧೨(೧) (ಸಿ) ಅನ್ವಯ ಶೇಕಡ ೨೫ರಷ್ಟು ಪ್ರವೇಶ ಕಲ್ಪಿಸಿ ಕೊಡುವುದರಲ್ಲಿ ಹೆಚ್ಚಿನ ಆಸಕ್ತಿ ವಹಿಸಿದೆ. ಕಾಯಿದೆಯ ಉಳಿದ ೩೮ ಸೆಕ್ಷನ್‌ಗಳನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ.

ಆರ್‌ಟಿಇ ಕಾಯಿದೆ ನೆರೆಹೊರೆಯ ಶಾಲೆಯಲ್ಲಿ ಮಕ್ಕಳಿಗೆ ಮೂಲಭೂತ ಹಕ್ಕು ಎಂದು ಸಾರಿ ಸಾರಿ ಹೇಳಿದರೂ ಮಕ್ಕಳ ಪಾಲಿಗೆ ಅದು ಇನ್ನು ಗಗನ ಕುಸುಮವಾಗಿಯೇ ಉಳಿದಿದೆ. ಶಾಲೆ ಪ್ರಾರಂಭವಾಗುವುದಕ್ಕಿಂತ ೬–೭ ತಿಂಗಳು ಮುಂಚೆಯೇ ತಮ್ಮ ವ್ಯಾಪಾರ ವಹಿವಾಟನ್ನು ಪ್ರಾರಂಭಿಸುವ ಖಾಸಗಿ ಅನುದಾನ ರಹಿತ ಶಾಲೆಗಳು ಇಂದಿಗೂ ಲಂಗು–ಲಗಾಮಿಲ್ಲದೆ ಶಿಕ್ಷಣದ ವ್ಯಾಪಾರವನ್ನು ಮುಂದುವರಿಸಿವೆ. ಶಿಕ್ಷಣದ ಖಾಸಗೀಕರಣ ಅವ್ಯಾಹತವಾಗಿ ಸಾಗಿದೆ. ಉದಾಹರಣೆಗೆ, ಮಕ್ಕಳಿಗೆ ನೆರೆಹೊರೆಯ ಶಾಲೆಯಲ್ಲಿ ಶಿಕ್ಷಣದ ಹಕ್ಕು ಇದ್ದಾಗ್ಯೂ, ಇಂದಿಗೂ ಬೆಂಗಳೂರು ಮತ್ತು ಇತರೆ ನಗರಗಳಲ್ಲಿ ಮಕ್ಕಳು ತಮ್ಮ ನೆರೆಹೊರೆಯಿಂದ ಕನಿಷ್ಠ ೧೦ ರಿಂದ ೨೫ ಕಿಮೀ ವರೆಗೆ ಖಾಸಗಿ ಶಾಲಾ ವಾಹನಗಳಲ್ಲಿ ಪ್ರಯಾಣಿಸುವುದು ಸರ್ವೇ ಸಾಮಾನ್ಯವಾಗಿದೆ. ಹೀಗಾಗಿ, ಮಕ್ಕಳಿಗೆ ಶಿಕ್ಷಣದ ಮೂಲಭೂತ ಹಕ್ಕು ನೆರೆಹೊರೆಯ ಶಾಲೆಯಲ್ಲಿ ಕಲಿಯಲು ಅವಕಾಶ ಇರಬೇಕೆಂದು ಕಾನೂನು ಹೇಳಿದರೂ ಅದು ಜಾರಿಗೆ ಬಂದಿಲ್ಲ. ಶಿಕ್ಷಣ ಇಲಾಖೆ ಚಾಲ್ತಿಯಲ್ಲಿರುವ ಕಾನೂನನ್ನು ಅನುಷ್ಠಾನಗೊಳಿಸುವಲ್ಲಿ ಸೋತಿದೆ.

samachara.com

samachara.com

## ಶಿಫಾರಸು–೧೪

(ಅ) ಎಲ್ಲಾ ಆಂಗ್ಲ ಮಾಧ್ಯಮದ ಖಾಸಗಿ ಶಾಲೆಗಳು ಮಾನ್ಯತಾ ಪ್ರಮಾಣ ಪತ್ರವನ್ನು ರಾಜ್ಯ ಸರ್ಕಾರದಿಂದ ಪಡೆಯುವುದು ಕಡ್ಡಾಯ. ಇದನ್ನು ಪ್ರತಿ ವರ್ಷವೂ ನವೀಕರಣಕ್ಕೆ ಒಳಗುಮಾಡಬೇಕು. ತಪ್ಪಿತಸ್ಥ ಸಂಸ್ಥೆಗಳ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಬೇಕು.

(ಆ) ಆರ್‌ಟಿಇ ಕಾಯ್ದೆಯ ಅಡಿಯಲ್ಲಿ ೩೯ ಅಂಶಗಳಿದ್ದು ಅವುಗಳಲ್ಲಿ ಶಿಕ್ಷಣ ಇಲಾಖೆ ಆರ್‌ಟಿಇ ಶುಲ್ಕವನ್ನು ಭರಿಸುವ ಏಕಮಾತ್ರ ಅಂಶವನ್ನು ಗಮನಿಸುತ್ತಿದ್ದು ಉಳಿದ ೩೮ ಅಂಶಗಳನ್ನು ಗಮನಕ್ಕೇ ತೆಗೆದುಕೊಂಡಿಲ್ಲ. ಇದರಿಂದಾಗಿ ಖಾಸಗಿ ಶಾಲೆಗಳ ವ್ಯಾಪಾರಿಕರಣ ನಿಯಂತ್ರಣವಿಲ್ಲದೆ ಸಾಗಿದೆ. ಹೀಗಾಗಿ ಆರ್‌ಟಿಇ ಕಾಯ್ದೆಯ ೩೯ ಅಂಶಗಳನ್ನು ಕಡ್ಡಾಯವಾಗಿ ಅನುಷ್ಠಾನ ಗೊಳಿಸಬೇಕು.

samachara.com

# ವಿವರಣೆ

ಆರ್‌ಟಿಇ ಕಾಯಿದೆ ಜಾರಿಯಾದ ತರುವಾಯ ಸಮುಚಿತ ಸರ್ಕಾರ ನಿಯಮಗಳ ಅಡಿಯಲ್ಲಿ ನಿಯಮಿಸಲಾದಂಥ ನಮೂನೆ ಮತ್ತು ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸುವ ಮೂಲಕ ಪ್ರತಿಯೊಂದು ಶಾಲೆಯು ಮಾನ್ಯತಾ ಪ್ರಮಾಣ ಪತ್ರವನ್ನು ಪಡೆಯದೆ ಯಾವ ಶಾಲೆಯನ್ನೂ ಸ್ಥಾಪಿಸುವಂತಿಲ್ಲ ಅಥವಾ ಯಾವ ಶಾಲೆಯು ಕಾರ್ಯ ನಿರ್ವಹಿಸುವಂತಿಲ್ಲ. ಆದರೆ, ಆರ್‌ಟಿಇ ಕಾಯಿದೆ ಜಾರಿಯಾಗಿ ಐದು ವರ್ಷ ಕಳೆದರೂ ಬಹುತೇಕ ಶಾಲೆಗಳು ಸರ್ಕಾರದಿಂದ ಈ ಮಾನ್ಯತಾ ಪತ್ರವನ್ನು ಪಡೆದಿಲ್ಲ.

ಪ್ರಕರಣ ೧೮(೫) ಅನ್ವಯ ಮಾನ್ಯತಾ ಪ್ರಮಾಣ ಪತ್ರವನ್ನು ಪಡೆಯದೆ ಶಾಲೆಯನ್ನು ಸ್ಥಾಪಿಸುವ ಅಥವಾ ನಡೆಸುವ ಅಥವಾ ಮಾನ್ಯತೆಯನ್ನು ಹಿಂತೆಗೆದುಕೊಂಡ ನಂತರವೂ ಶಾಲೆ ನಡೆಸುವುದನ್ನು ಮುಂದುವರಿಸುವ ಯಾವುದೇ ವ್ಯಕ್ತಿಯು ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೆ ಒಳಗಾಗುತ್ತಾನೆ. ಉಲ್ಲಂಘನೆಯನ್ನು ಮುಂದುವರಿಸಿದರೆ ಪ್ರತಿ ದಿನ ಹತ್ತು ಸಾವಿರ ರೂಪಾಯಿಗಳ ದಂಡ ವಿಧಿಸಬಹುದಾಗಿದೆ. ಸರ್ಕಾರದ ಇತ್ತೀಚಿನ ಅಂಕಿ-ಅಂಶಗಳ ಪ್ರಕಾರ ಸುಮಾರು ೧೨೦೦ ಶಾಲೆಗಳು ಸರ್ಕಾರದ ಮಾನ್ಯತೆಯಿಲ್ಲದೆ ನಡೆಯುತ್ತಿವೆ. ಈ ಎಲ್ಲ ಶಾಲೆಗಳ ಮೇಲೆ ಸರ್ಕಾರ ಪ್ರಕರಣ ೧೮(೫)ರ ಅನ್ವಯ ಕ್ರಮ ಜರುಗಿಸಬೇಕಾಗಿದೆ. ತಕ್ಷಣ ಕ್ರಮ ಜರುಗಿಸದಿದ್ದಲ್ಲಿ ಈ ಶಾಲೆಗಳು ಮತ್ತೆ ಮಕ್ಕಳಿಗೆ ಪ್ರವೇಶ ನೀಡಿ ಕಾನೂನು ಬಾಹಿರವಾಗಿ ಶಿಕ್ಷಣದ ವ್ಯಾಪಾರವನ್ನು ಮುಂದುವರಿಸುವ ಎಲ್ಲಾ ಸಾಧ್ಯತೆಗಳಿವೆ.

ಮತ್ತೊಂದು ಮಹತ್ವದ ವಿಷಯವೆಂದರೆ ಆರ್‌ಟಿಇ ಕಾಯಿದೆ ಕಾಲಮಿತಿ ಅನ್ವಯ ೨೦೧೫ ಮಾರ್ಚ್ ೩೧ರ ವೇಳೆಗೆ ಎಲ್ಲಾ ಖಾಸಗಿ ಶಾಲೆಗಳಲ್ಲಿಯೂ ತರಬೇತಿ ಹೊಂದಿದ ಶಿಕ್ಷಕರುಗಳನ್ನು ನೇಮಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಿತ್ತು. ಆದರೆ

samachara.com

ಸರ್ಕಾರ ಈ ವಿಷಯದಲ್ಲಿ ಖಾಸಗಿ ಶಾಲೆಗಳಲ್ಲಿ ಅದರಲ್ಲೂ ವಿಶೇಷವಾಗಿ ಅನುದಾನರಹಿತ ಶಾಲೆಗಳಲ್ಲಿ ತರಬೇತಿ ಹೊಂದಿದ ಶಿಕ್ಷಕರ ಸಂಖ್ಯೆ ಎಷ್ಟು, ತರಬೇತಿ ಪಡಯಬೇಕಾದ ತರಬೇತಿಯಿಲ್ಲದ ಶಿಕ್ಷಕರ ಸಂಖ್ಯೆ ಎಷ್ಟು, ಅವರೆಲ್ಲರೂ ಕಾಯಿದೆಯ ಕಾಲಮಿತಿ ಮಾರ್ಚ ೩೧,೨೦೧೫ರ ಒಳಗೆ ತರಬೇತಿ ಪಡೆಯಲು ಏನು ಮಾಡಬೇಕು ಎಂದು ಚಿಂತಿಸುವ ಗೋಜಿಗೆ ಹೋಗದಿರುವುದು ಆಶ್ಚರ್ಯಕರ ಸಂಗತಿ. ಅರ್ಹರಲ್ಲದ ತರಬೇತಿ ಹೊಂದಿದ ಶಿಕ್ಷಕರು ಹಾಗು ಕಾಯಿದೆಯ ಸೆಕ್ಷನ್ ೧೯ ಅನ್ವಯ ಕಾಯಿದೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಪ್ರಮಾಣಕಗಳು ಮತ್ತು ಮಾನಕ ಗುಣಮಟ್ಟಗಳನ್ನು ಪೂರೈಸದಿದ್ದರೆ ಶಾಲೆಗಳಿಗೆ ಅನುಮತಿ ನೀಡಬಾರದು ಮತ್ತು ಕಾಯಿದೆಗೆ ಮುನ್ನ ಅನುಮತಿ ಪಡೆದು ಕಾಯಿದೆಯ ಸೆಕ್ಷನ್ ೧೯ರ ಅನ್ವಯ ಮಾನದಂಡಗಳನ್ನು ಹೊಂದಿರದ ಶಿಕ್ಷಣ ಸಂಸ್ಥೆಗಳ ಮಾನ್ಯತೆಯನ್ನು ಸಹ ರದ್ದುಗೊಳಿಸಬೇಕಿತ್ತು. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರ ಶಿಕ್ಷಣ ಹಕ್ಕು ಕಾಯಿದೆಯ ಎಲ್ಲಾ ಅಂಶಗಳನ್ನು ಪರಿಣಾಮಕಾರಿಯಾಗಿ ಮತ್ತು ಸಮಗ್ರವಾಗಿ ಜಾರಿಗೆ ತರಲು ತಕ್ಷಣ ಕ್ರಮವಹಿಸಬೇಕು. ಈ ಸಂಬಂಧ, ಕೂಡಲೇ ಕಾಯಿದೆಯ ಪರಿಣಾಮಕಾರಿ ಜಾರಿಗೆ ಸಮಗ್ರ ನಕಾಶೆಯನ್ನು ತಯಾರಿಸಿ ಜಾರಿಗೊಳಿಸಬೇಕು.

samachara.com

samachara.com

## ಶಿಫಾರಸು–೧೫

ಭಾಷಾ ಕಲಿಕಾ ಅಧಿನಿಯಮ–೨೦೧೫ನ್ನು ಕಡ್ಡಾಯವಾಗಿ ಜಾರಿ ಗೊಳಿಸುವುದು. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರದ ಕನ್ನಡ ಕಲಿಕೆ ಕಾಯಿದೆ ಮತ್ತು ನಿಯಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವ ಬಗ್ಗೆ ಮೇಲುಸ್ತುವಾರಿ ನಡೆಸಲು ಒಂದು ಉನ್ನತ ಮೇಲುಸ್ತುವಾರಿ ಸಮಿತಿಯನ್ನು ರಚಿಸಬೇಕು.

samachara.com

# ವಿವರಣೆ

ಶಿಕ್ಷಣವು ಖಾಸಗೀಕರಣಕ್ಕೆ ಒಳಗಾಗಿದ್ದು ಖಾಸಗಿ ಸಂಸ್ಥೆಗಳ ಮೇಲೆ ಯಾವುದೇ ನಿಯಂತ್ರಣವನ್ನು ಇಟ್ಟುಕೊಳ್ಳದಂತೆ ಇರುವ ಈಗಿನ ವಾತಾವರಣದಲ್ಲಿ ಬಹುತೇಕ ಶಿಕ್ಷಣ ಸಂಸ್ಥೆಗಳು ಕನ್ನಡವನ್ನು ಒಂದು ಭಾಷೆಯನ್ನಾಗಿಯೂ ಕಲಿಸುತ್ತಿಲ್ಲ. ಸಂಸ್ಕೃತ, ಹಿಂದಿ, ಇಂಗ್ಲಿಷ್ ಇವುಗಳ ಪ್ರಾಬಲ್ಯದಲ್ಲಿ ಕನ್ನಡ ಕಡೆಗಣನೆಯಾಗಿದೆ. ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಕನ್ನಡವನ್ನು ಬಿಟ್ಟು ಶಿಕ್ಷಣ ನೀಡುವುದೆಂದರೆ ಅದು ನೆಲದ ಬದುಕಿಗೆ ಬಗೆಯುವ ದ್ರೋಹ. ಪ್ರತಿಯೊಂದು ಶಿಕ್ಷಣ ಸಂಸ್ಥೆಯು ಸರ್ಕಾರದ ಆದೇಶದ ಅನುಸಾರ ಕನ್ನಡವನ್ನು ಒಂದು ಭಾಷೆಯಾಗಿ [ಪ್ರಥಮ ಅಥವಾ ದ್ವಿತೀಯ] ಒಂದರಿಂದ ಹತ್ತನೇ ತರಗತಿವರೆಗೆ ಕಲಿಸಿದಾಗ ಮಾತ್ರ ಕರ್ನಾಟಕದಲ್ಲಿ ಕನ್ನಡ ಉಳಿಯಲು ಸಾಧ್ಯವಾಗುತ್ತದೆ. ಕನ್ನಡ ಕಳೆದು ಹೋಗುವ ಅಪಾಯಕಾರಿ ಸ್ಥಿತಿಯಿಂದ ಕನ್ನಡವನ್ನು ಕರ್ನಾಟಕವನ್ನು ಪಾರುಮಾಡಬೇಕೆಂದರೆ ಈ ಭಾಷಾ ಕಲಿಕಾ ಅಧಿನಿಯಮ–೨೦೧೫ ಕಡ್ಡಾಯವಾಗಿ ಅನುಷ್ಠಾನಗೊಳ್ಳಬೇಕು.

ನೆರೆಯ ರಾಜ್ಯ ತಮಿಳುನಾಡಿನಲ್ಲಿ ಈ ಭಾಷಾ ಕಲಿಕಾ ಅಧಿನಿಯಮದನ್ವಯ ಪ್ರಥಮ ಭಾಷೆಯಾಗಿ ಕಲಿಸುವ ನಿಟ್ಟಿನಲ್ಲಿ ೧೦ ವರ್ಷಗಳ ಹಿಂದೆಯೇ ಜಾರಿಗೆ ತಂದಿರುತ್ತದೆ. ೨೦೧೫ರ ನಮ್ಮ ಭಾಷಾ ಅಧಿನಿಯಮವನ್ನು ನೋಡಿ ಕೇರಳ ರಾಜ್ಯವು ಇದೇ ರೀತಿಯ ಅಧಿನಿಯಮವನ್ನು ಜಾರಿಗೆ ತಂದು ಮೂರು ತಿಂಗಳಲ್ಲಿಯೇ ಅನುಷ್ಠಾನ ಗೊಳಿಸಿದೆ. ಕರ್ನಾಟಕದಲ್ಲಿ ೨೦೧೫ರಲ್ಲಿಯೇ ಅಧಿನಿಯಮ ಹೊರಡಿಸಲಾಗಿದ್ದರೂ ಈವರೆವಿಗೂ ಜಾರಿಗೆ ಬಾರದೇ ಇರುವುದು ವಿಷಾದದ ಸಂಗತಿ.

ಈಗಾಗಲೇ ಅನುಷ್ಠಾನದಲ್ಲಿರುವ ಆರ್‌ಟಿಇ ಶಿಕ್ಷಣ ಕಾಯ್ದೆಯ ಪರಿಪಾಲನೆಯನ್ನು ಯಶಸ್ವಿಗೊಳಿಸಲು ಸರ್ಕಾರದ ಅಧೀನಕ್ಕೆ ಒಳಪಟ್ಟ ಒಂದು ಪರಿವೀಕ್ಷಣಾ ಸಮಿತಿಗೆ ಈಗಾಗಲೇ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಅಧ್ಯಕ್ಷರಾಗಿರುತ್ತಾರೆ.

samachara.com

ಇದಕ್ಕೆ ಬೆಂಬಲವಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರದ ಕನ್ನಡ ಕಲಿಕೆ ಕಾಯಿದೆ ಮತ್ತು ನಿಯಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವ ಬಗ್ಗೆ ಮೇಲುಸ್ತುವಾರಿ ನಡೆಸಲು ಒಂದು ಉನ್ನತ ಮೇಲುಸ್ತುವಾರಿ ಸಮಿತಿಯನ್ನು ಜಿಲ್ಲಾ ಹಾಗು ತಾಲ್ಲೂಕು ಹಂತದಲ್ಲಿ ರಚಿಸಬೇಕು. ಈ ಸಮಿತಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರತಿನಿಧಿಗಳು, ಶಿಕ್ಷಣ ತಜ್ಞರು, ಸಾಮಾಜಿಕ ಕಾರ್ಯಕರ್ತರು, ಕಾನೂನು ತಜ್ಞರು ಇರಬೇಕು. ಇವರಲ್ಲಿ ಒಬ್ಬರು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಸಮಿತಿಯ ಸದಸ್ಯರಲ್ಲಿ ಇಬ್ಬರು ಕಡ್ಡಾಯವಾಗಿ ಮಹಿಳೆಯರು ಇರಬೇಕು. ಈ ಸಮಿತಿಯ ಕಾರ್ಯದರ್ಶಿ ಜಿಲ್ಲಾ ಹಂತದಲ್ಲಿ ಅಯಾ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಹಾಗು ತಾಲ್ಲೂಕು ಹಂತದಲ್ಲಿ ಅಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ರಾಜ್ಯ ಮಟ್ಟದಲ್ಲಿ ಈ ಜವಾಬ್ದಾರಿಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರವು ನಿರ್ವಹಿಸುತ್ತದೆ.

samachara.com

samachara.com

## ಶಿಫಾರಸು–೧೬

ಪ್ರಾಥಮಿಕ ಶಿಕ್ಷಣ ಮಾಧ್ಯಮ ಮಗುವಿನ ಪರಿಸರ ಭಾಷೆ ಅರ್ಥಾತ್ ರಾಜ್ಯ ಭಾಷೆಯಲ್ಲಿಯೇ ಇರತಕ್ಕದ್ದು. ಈ ನಿಟ್ಟಿನಲ್ಲಿ ಸಂವಿಧಾನಕ್ಕೆ ಸೂಕ್ತ ತಿದ್ದುಪಡಿ ತರುವ ಮೂಲಕ ಶಿಕ್ಷಣವನ್ನು ರಾಷ್ಟ್ರೀಕರಣಗೊಳಿಸಿ ಎಲ್ಲಾ ರಾಜ್ಯಗಳಿಗೆ ಅನ್ವಯಿಸುವ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಒತ್ತಾಯಿಸುವುದು.

samachara.com

# ವಿವರಣೆ

ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷೆಯನ್ನು ಜಾರಿಗೊಳಿಸಲು ಸಾಧ್ಯವಾಗ ಬಹುದಾದ ಕಾನೂನಿನ ಅವಕಾಶಗಳನ್ನು ಅವಲೋಕಿಸುವಾಗ ಕೇವಲ 'ಕಾನೂನಿನ ಮಸೂರ'ದಿಂದ ಮಾತ್ರ ತೀರ್ಮಾನಿಸಲಾಗದು. ಸಮಸ್ಯೆಯನ್ನು ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಆಯಾಮಗಳಿಂದಲೂ ಪರಿಶೀಲಿಸಬೇಕಾಗುತ್ತದೆ. ಜೊತೆಗೆ, ಭಾಷಾ ಕಲಿಕೆಗೆ ಸಂಬಂಧಿಸಿದ ಸಂಶೋಧನೆ ಮತ್ತು ಭಾಷಾ ಕಲಿಕೆಯ ಮನೋವಿಜ್ಞಾನದ ಆಯಾಮಗಳಿಂದಲೂ ವಿಮರ್ಶಿಸಬೇಕಿದೆ. ಈ ವಿಧಾನವನ್ನು ಬಹುಶಾಸ್ತ್ರೀಯ (Multidisciplinary approach) ವಿಧಾನವೆಂದು ಕರೆಯಲಾಗುತ್ತದೆ.

ಪ್ರಸ್ತುತ ಶಿಕ್ಷಣ ವ್ಯವಸ್ಥೆಯ ವಿಷಯದ ಸಂದರ್ಭದಲ್ಲಿ ಮಾತೃಭಾಷೆಯ ವ್ಯಾಖ್ಯೆಯನ್ನು ಮರು ನಿರ್ವಚನಕ್ಕೆ ಒಳಪಡಿಸುವ ಅಗತ್ಯವಿದೆ. ಭಾರತ ಒಕ್ಕೂಟ ವ್ಯವಸ್ಥೆಗೆ ಒಳಪಟ್ಟ ದೇಶ. ಬಹುಭಾಷೆಗಳ ದೇಶ. ನಮ್ಮ ಕರ್ನಾಟಕದಲ್ಲಿಯೇ ಮನೆಮಾತಾಗಿ ಆಡುವ ಭಾಷೆಗೂ ಪರಿಸರದಲ್ಲಿ ಪ್ರಭಾವಿಯಾಗಿ ಆಡುವ ಭಾಷೆಗೂ ಹಲವು ಭಾಗಗಳಲ್ಲಿ ವ್ಯತ್ಯಾಸಗಳಿವೆ. ಕೊಡವ, ತುಳು, ಕೊಂಕಣಿ, ಬ್ಯಾರಿ, ಅರೆಭಾಷೆ, ಲಂಬಾಣಿ ಇತ್ಯಾದಿ ಲಿಪಿ ಇಲ್ಲದ ಎಷ್ಟೋ ಭಾಷೆಗಳು ಕರ್ನಾಟಕದಲ್ಲಿವೆ. ಇವೆಲ್ಲ ಆಯಾ ಸಮುದಾಯಗಳ ಜನರು ಮನೆ ಮಾತಾಗಿ ಆಡುತ್ತಿರುವ ಭಾಷೆಗಳು. ಆಯಾ ಪ್ರದೇಶಗಳಲ್ಲಿ ಬಳಕೆಯಲ್ಲಿರುವ ಭಾಷೆಗಳು.ಆದರೆ ಈ ಎಲ್ಲ ಭಾಷೆಗಳ ಪ್ರದೇಶದಲ್ಲಿ ಸಾಮಾನ್ಯವಾಗಿ ಸಂವಹನದ ಸಮಾನ ಭಾಷೆಯಾಗಿ ಬಳಸುವ ಪರಿಸರ ಭಾಷೆ ಕನ್ನಡ. ಈ ಪರಿಸರ ಭಾಷೆ ರಾಜ್ಯಭಾಷೆ. ಇದಕ್ಕೆ ಲಿಪಿ ಇದೆ. ಎಲ್ಲರೂ ಆಡು ಮಾತಿನಲ್ಲಿ ಲಿಪಿರೂಪದ ವ್ಯವಹಾರದಲ್ಲಿ ಕನ್ನಡವನ್ನೇ ಬಳಸುತ್ತಿದ್ದಾರೆ. ಭಾಷಾವಾರು ಪ್ರಾಂತ ರಚನೆಯ ಉದ್ದೇಶದನ್ವಯ ಕನ್ನಡವನ್ನೇ ರಾಜ್ಯಭಾಷೆ ಎಂದು ಘೋಷಿಸಲಾಗಿದೆ. ಇದು ಸಂವಿಧಾನದಲ್ಲಿ ಅಂಗೀಕೃತಗೊಂಡ ಪ್ರಾದೇಶಿಕ ಭಾಷೆ. ಹೀಗಾಗಿ ಲಿಪಿ ಇರುವ ಈ ಭಾಷೆ ಕರ್ನಾಟಕದ ಪ್ರಾದೇಶಿಕ ಭಾಷೆ. ಕರ್ನಟಕದ ರಾಜ್ಯಭಾಷೆ. ಇದನ್ನೇ ಆ

samachara.com

ಪ್ರದೇಶದ ಪರಿಸರಭಾಷೆ, ಸಹಜ ಮಾತೃಭಾಷೆ ಎಂದು ನಿರ್ವಚಿಸಬೇಕಾದ ಅಗತ್ಯವಿದೆ. ರಾಜಕೀಯ ಪರಿಭಾಷೆಯಾಗಿ ಮಾತೃಭಾಷೆಯನ್ನು ಪುನರ್ ವ್ಯಾಖ್ಯಾನಿಸಬೇಕಾದ ಹಿನ್ನೆಲೆಯಲ್ಲಿ ಈ ನಿರ್ವಚನದ ವೈಜ್ಞಾನಿಕತೆಯನ್ನು ಪ್ರತಿಯೊಬ್ಬರೂ ಮನಗಾಣಬೇಕಾದ ಅಗತ್ಯವಿದೆ. ಭಾಷಾಶಾಸ್ತ್ರದ ಶಾಸ್ತ್ರಜಡ ವ್ಯಾಖ್ಯಾನದ ಮಿತಿ ಕಾಲದ ಬದಲಾದ ಹಿನ್ನೆಲೆಯಲ್ಲಿ ಮರುವ್ಯಾಖ್ಯೆಯನ್ನು ಬಯಸುತ್ತಿರುವುದು ಸಹಜವಿದೆ. ಆದ್ದರಿಂದ ಶಿಕ್ಷಣ ಮಾಧ್ಯಮದ ಪ್ರಶ್ನೆ ಬಂದಾಗ ಆಡಳಿತಭಾಷೆಯ ಪ್ರಶ್ನೆ ಬಂದಾಗ ಪರಿಸರಭಾಷೆ ಅರ್ಥಾತ್ ರಾಜ್ಯಭಾಷೆ ಆ ನೆಲದ ಮಾತೃಭಾಷೆ ಎಂಬ ವಸ್ತುನಿಷ್ಠ ವ್ಯಾಖ್ಯೆಗೆ ಒಳಪಡಬೇಕಾಗುತ್ತದೆ. ಒಕ್ಕೂಟ ವ್ಯವಸ್ಥೆಯಲ್ಲಿ ಭಾಷಾವಾರು ಪ್ರಾಂತ ರಚನೆಯ ಉದ್ದೇಶದ ಗುಣಗೌರವವನ್ನು ಮಾನ್ಯ ಮಾಡುವ ವ್ಯಾಖ್ಯಾನ ಇದಾಗುತ್ತದೆ. ಮನೆ ಮಾತು–ಮಾತೃಭಾಷೆ–ಕುಟುಂಬ ಭಾಷೆ ಸಮುದಾಯಭಾಷೆ ಪರಿಸರಭಾಷೆ ರಾಜ್ಯಭಾಷೆ ಈ ಎಲ್ಲಾ ವಿಂಗಡಣೆಗಳ ನೆಲೆಯಲ್ಲಿ ರಾಜ್ಯಭಾಷೆಯೊಂದನ್ನು ಆ ನೆಲದ ಮಾತೃಭಾಷೆ ಎಂದು ವ್ಯಾಖ್ಯಾನಿಸಿಕೊಳ್ಳುವುದು ಹೆಚ್ಚು ವೈಜ್ಞಾನಿಕವೂ ಒಕ್ಕೂಟ ವ್ಯವಸ್ಥೆಯ ಭಾಷಾವಾರು ನೀತಿಗೆ ಪೂರಕವೂ ಆದ ನಿರ್ವಚನವಾಗುತ್ತದೆ.

ಮನೆಯಲ್ಲಿ ಮತ್ತು ತನ್ನ ತಕ್ಷಣದ ಪರಿಸರದಲ್ಲಿ ಕನ್ನಡ ಭಾಷೆಯನ್ನು ಮಾತನಾಡುವ ಮಗುವಿನ ತಂದೆ–ತಾಯಿ ಅಥವಾ ಪೋಷಕರು ಮಗುವಿನ ಮಾತೃಭಾಷೆಯನ್ನು ಗೌರವಿಸಿ ಎತ್ತಿಹಿಡಿಯಬೇಕಾಗುತ್ತದೆ. ಬದಲಿಗೆ, ಮಗುವಿನ ಮಾತೃಭಾಷೆಯಲ್ಲದ ಬೇರೊಂದು ಭಾಷೆಯನ್ನು (ಈಗಿನ ಸಂದರ್ಭದಲ್ಲಿ 'ಇಂಗ್ಲಿಷ್') ಮಾತೃಭಾಷೆಯೆಂದು ಹೇಳಿ ಆ ಭಾಷೆಯಲ್ಲಿ ಶಿಕ್ಷಣ ಕೊಡಿಸಲು ಮುಂದಾದರೆ, ಅದು ಆತ್ಮವಂಚನೆ ಮಾತ್ರವಲ್ಲದೆ ಮಗುವಿನ ಸಹಜ ಮಾನವ ಹಕ್ಕಿನ ಉಲ್ಲಂಘನೆಯೂ ಆಗುತ್ತದೆ.

ಭಾಷಾ ಮಾಧ್ಯಮದ ವಿಷಯಕ್ಕೆ ಸಂಬಂಧಿಸಿದಂತೆ ೧೯೪೯ರಲ್ಲಿ ಪ್ರಾಂತೀಯ ಶಿಕ್ಷಣ ಸಚಿವರ ಸಮ್ಮೇಳನದಲ್ಲಿ ಚರ್ಚಿಸಿ 'ಜೂನಿಯರ್ ಬೇಸಿಕ್ ಹಂತದಲ್ಲಿ ಶಿಕ್ಷಣ ಮಾಧ್ಯಮ ಮತ್ತು ಪರೀಕ್ಷೆಗಳು ಮಗುವಿನ ಮಾತೃಭಾಷೆಯಲ್ಲಿಯೇ ಇರಬೇಕು. ಮಕ್ಕಳ ಮಾತೃ ಭಾಷೆ ಪ್ರಾಂತೀಯ ಅಥವಾ ರಾಜ್ಯ ಭಾಷೆಗಿಂತ ಭಿನ್ನವಿದ್ದು ಇಡೀ ಶಾಲೆಯಲ್ಲಿ ನಲವತ್ತು ಮತ್ತು ಅದಕ್ಕಿಂತ ಹೆಚ್ಚು ಮಕ್ಕಳು ಅಥವಾ ಒಂದು ತರಗತಿಯಲ್ಲಿ ೧೦ಕ್ಕಿಂತ ಹೆಚ್ಚು ಮಕ್ಕಳಿದ್ದರೆ ಕನಿಷ್ಠ ಒಬ್ಬ ಶಿಕ್ಷಕರನ್ನು ನೇಮಿಸಿ ಆ ಮಕ್ಕಳ ಮಾತೃಭಾಷೆಯಲ್ಲಿಯೇ ಶಿಕ್ಷಣ ನೀಡಲು ಕ್ರಮ ವಹಿಸಬೇಕೆಂದು' ತೀರ್ಮಾನಿಸಲಾಗಿತ್ತು. ಈ ಸಮ್ಮೇಳನದ ಮುಂದುವರಿದ ಭಾಗವಾಗಿ ಸಂವಿಧಾನದ ೭ನೇ ತಿದ್ದುಪಡಿ ಕಾಯಿದೆ ಅನ್ವಯ ೧೯೫೬ರಲ್ಲಿ ಸಂವಿಧಾನಕ್ಕೆ '೩೫೦ಎ'ಅನ್ನು

samachara.com

ಸೇರಿಸಲಾಯಿತು. ಸಂವಿಧಾನದಲ್ಲಿ ಮಾತೃಭಾಷೆ ಎನ್ನುವ ಪದವನ್ನು ಹೊಂದಿರುವ ಒಂದೇ ಪರಿಚ್ಛೇದವೆಂದರೆ ೩೫೦ಎ. ***(ಪರಿಚ್ಛೇಧ ೩೫೦ಎ ಅನ್ವಯ 'ಪ್ರತಿಯೊಂದು ರಾಜ್ಯ ಮತ್ತು ರಾಜ್ಯದೊಳಗಿನ ಪ್ರತಿಯೊಂದು ಸ್ಥಳೀಯ ಪ್ರಾಧಿಕಾರವು ಭಾಷಾ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿ ಅವರ ಮಾತೃ ಭಾಷೆಯಲ್ಲಿ ಶಿಕ್ಷಣ ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು; ಯಾವುದೇ ರಾಜ್ಯದಲ್ಲಿ ಅಗತ್ಯವೆನಿಸಿದಲ್ಲಿ ಅಂತಹ ಸೌಲಭ್ಯದ ಅವಕಾಶ ಕಲ್ಪಿಸಲು ರಾಷ್ಟ್ರಪತಿಯವರು ಅಗತ್ಯ ನಿರ್ದೇಶನ ನೀಡಬಹುದು')***

ಕರ್ನಾಟಕ ರಾಜ್ಯದಲ್ಲಿ ಖಂಡಿತವಾಗಿ ಬಹು ಸಂಖ್ಯಾತರ ಭಾಷೆ ಕನ್ನಡ ಮತ್ತು ಅದು ಬಹು ಸಂಖ್ಯಾತ ಜನಸಂಖ್ಯೆಯ ಮಾತೃಭಾಷೆಯೂ ಹೌದು. ಕನ್ನಡಿಗರಾದ ತಂದೆ–ತಾಯಿ ಜನ್ಮ ನೀಡಿದ ಮಗುವೊಂದು ಕರ್ನಾಕದಲ್ಲಿ ಬೆಳೆಯುತ್ತಿದ್ದರೆ ಆ ಮಗುವಿನ ಮಾತೃ ಭಾಷೆ/ಮೊದಲ ಭಾಷೆ ಸ್ವಾಭಾವಿಕವಾಗಿ ಕನ್ನಡವಾಗಿರುತ್ತದೆ. ಮಗು ದಿನನಿತ್ಯ ತನ್ನ ಮಾತೃ ಭಾಷೆಯಲ್ಲಿ ನಿರಾತಂಕವಾಗಿ ಮಾತನಾಡುವುದರ ಮೂಲಕ ನೆಮ್ಮದಿಯ ಬಾಲ್ಯವನ್ನು ಅನುಭವಿಸುತ್ತಾ ಸಾಮಾಜೀಕರಣಗೊಳ್ಳುತ್ತದೆ. ಮಗುವಿಗೆ ತನ್ನ ಶಿಕ್ಷಣ ಮಾಧ್ಯಮವನ್ನು ಆಯ್ಕೆಮಾಡಲು ಅವಕಾಶ ಕೊಟ್ಟರೆ, ನಿಸ್ಸಂದೇಹವಾಗಿ ಎಳ್ಳಷ್ಟೂ ಸಂಶಯವಿಲ್ಲದೆ ಕನ್ನಡವನ್ನು ತನ್ನ ಶಿಕ್ಷಣ ಮಾಧ್ಯಮವನ್ನಾಗಿ ಆಯ್ಕೆ ಮಾಡಿ ಕೊಳ್ಳುತ್ತದೆ. ಆದರೆ, ಈ ಕಟು ಸತ್ಯವನ್ನು ಮರೆಮಾಚಿ ಮಾತೃಭಾಷೆಯ ಆಯ್ಕೆಯ ವಿಚಾರವನ್ನು ಪೋಷಕರಿಗೆ ವರ್ಗಾಯಿಸುವುದು ಮಗುವಿನ ಹಿತಾಸಕ್ತಿಗೆ ಮಾರಕವಾದ ಮತ್ತು ಮಗುವಿನ ಮೂಲಭೂತ ಹಕ್ಕಾದ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಮೂಲಕ ಮಗುವಿನ ಹಕ್ಕನ್ನು ಕಸಿದುಕೊಳ್ಳುವ ಮಕ್ಕಳ ವಿರೋಧಿ ನಿಲುವಾಗುತ್ತದೆ. ಅಂತರಾಷ್ಟ್ರೀಯ ಭಾಷಾ ಹಕ್ಕುಗಳ ಘೋಷಣೆ ಮತ್ತು ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಮೂಲತತ್ವವಾದ 'ಮಗುವಿನ ಸರ್ವೋತ್ಕೃಷ್ಟ ಹಿತಾಸಕ್ತಿ' ತತ್ವವಕ್ಕೆ ತಿಲಾಂಜಲಿ ನೀಡುವುದಾಗುತ್ತದೆ. (***ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯ ಪರಿಚ್ಛೇಧ ೩ನ್ನು ನೋಡಿ)***

ಭಾಷಾ ಮಾಧ್ಯಮದ ಆಯ್ಕೆಯನ್ನು ಏಕಪಕ್ಷೀಯವಾಗಿ ತೀರ್ಮಾನಿಸುವ ಪಾಲಕರ ಮತ್ತು ಲಾಭವನ್ನೇ ಮೂಲ ಉದ್ದೇಶವನ್ನಾಗಿರಿಸಿಕೊಂಡಿರುವ ಖಾಸಗೀ ಸಂಸ್ಥೆಗಳ ವಿವೇಚನೆಗೆ ಬಿಟ್ಟರೆ ನಮ್ಮ ಭಾಷೆ, ಬದುಕು, ಸಂಸ್ಕೃತಿ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಭಾಷಾಪರಿಸರದ ಅಸ್ಮಿತೆಗೆ ಧಕ್ಕೆಯಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಜೊತೆಗೆ ಶಿಕ್ಷಣವು ಒಂದು ಮಾರಾಟದ ಸರಕಾಗುವುದರ ಮೂಲಕ ಶಿಕ್ಷಣದಲ್ಲಿನ ಅಸಮಾನತೆ ಮತ್ತು ಶ್ರೇಣಿಕೃತ ವ್ಯವಸ್ಥೆಯ ಭೇದನೀತಿ ಮತ್ತಷ್ಟು ವಿಸ್ತೃತಗೊಳ್ಳುವುದರಲ್ಲಿ ಎರಡು ಮಾತಿಲ್ಲ.

samachara.com

ಈ ಎಲ್ಲ ಗೊಂದಲಗಳ ನಡುವೆ ನಾವು ಶಿಕ್ಷಣದಲ್ಲಿ ಭಾಷಾ ಮಾಧ್ಯಮದ ಗೊಂದಲಕ್ಕೆ ಸೂಕ್ತ ಪರಿಹಾರ ಕಂಡುಕೊಳ್ಳಬೇಕಿದೆ. ಇಂದು ಶಿಕ್ಷಣದಲ್ಲಿ ಒಂದು ಭಾಷೆ ಅಥವಾ ದ್ವಿ–ಭಾಷಾ ಸೂತ್ರ ಎನ್ನುವ ಬದಲು ಬಹು ಭಾಷಾ ಸೂತ್ರಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಮಗು ತನ್ನ ಪರಿಸರ ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯುವ ಹಕ್ಕನ್ನು ಎಲ್ಲರೂ ಎತ್ತಿ ಹಿಡಿಯಬೇಕಿದೆ.

ಆದರೆ, ಈ ರೀತಿಯ ಆಯ್ಕೆಗಳು ಸಾಂಸ್ಥಿಕ ಮತ್ತು ನೀತಿ ನಿರೂಪಣೆಯ ಪ್ರಶ್ನೆಗಳಾಗಿದ್ದು ಸರ್ಕಾರ ಈ ವಿಷಯಕ್ಕೆ ಸಂಬಂಧಿಸಿದಂತೆ ಸೂಕ್ತ ನೀತಿಯನ್ನು ರೂಪಿಸುವ ಹೊಣೆಗಾರಿಕೆ ಹೊರಬೇಕಾಗುತ್ತದೆ. ಭಾರತದಂತಹ ಭಾಷಾ ವೈವಿಧ್ಯ ದೇಶದಲ್ಲಿ ರಾಷ್ಟ್ರೀಯವಾಗಿ ಗುರುತಿಸಲ್ಪಟ್ಟಿರುವ ಎಲ್ಲ ಭಾಷೆಗಳನ್ನು ಶಿಕ್ಷಣದ ಭಾಷೆಗಳನ್ನಾಗಿ ಬೆಸೆಯುವ ಮೂಲಕ ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಯನ್ನು **(ಭಾರತ ಸಂವಿಧಾನದ ಪ್ರಸ್ತಾವನೆಯನ್ನು ನೋಡಿ)** ಎತ್ತಿಹಿಡಿಯಬೇಕಿದೆ.

ಈ ಸಂದರ್ಭದಲ್ಲಿ, ಭಾಷಾ ಮಾಧ್ಯಮ ಮತ್ತು ನೀತಿಗೆ ಸಂಬಂಧಿಸಿದಂತೆ ಇರುವ ಚೌಕಟ್ಟುಗಳನ್ನು ಒಮ್ಮೆ ಅವಲೋಕಿಸುವುದು ಸೂಕ್ತವೆನಿಸುತ್ತದೆ. ಭಾಷಾಮಾಧ್ಯಮ ಕಲಿಕೆಗೆ ಇರುವ ಕಾನೂನಿನ ಅವಕಾಶಗಳನ್ನು ವಿಮರ್ಶಿಸುವಾಗ, ಅಂತರಾಷ್ಟ್ರೀಯ ಮಟ್ಟದಲ್ಲಿ ವಿಶ್ವಸಂಸ್ಥೆಯು ವಿಶೇಷ ಗಮನಹರಿಸಿ ಹೊರತಂದಿರುವ ಹಲವು ಮಾನವ ಹಕ್ಕುಗಳ ಘೋಷಣೆ/ಒಡಂಬಡಿಕೆ/ಒಪ್ಪಂದಗಳನ್ನು ನಾವೂ ಪರಿಶೀಲಿಸಬೇಕಾಗುತ್ತದೆ. ಅಂತಹ ಘೋಷಣೆಗಳಲ್ಲಿ ಒಂದಾಗಿರುವ ವಿಶ್ವಸಂಸ್ಥೆಯ ಭಾಷಾಧ್ಯಯನ ಹಕ್ಕುಗಳ ಸಾರ್ವತ್ರಿಕ ಘೋಷಣೆ ೧೯೯೬ರ ಕೆಲವು ಪರಿಚ್ಛೇದಗಳನ್ನು ಈ ಸಂದರ್ಭದಲ್ಲಿ ಪರಿಶೀಲಿಸಬೇಕಾಗಿದೆ.

ಘೋಷಣೆಯ ಭಾಗ ಮೂರರಲ್ಲಿ ಪರಿಚ್ಛೇದ ೨೩ ರಿಂದ ೩೦ರವರಗೆ ಶಿಕ್ಷಣದ ವಿವಿಧ ಹಂತದಲ್ಲಿ ಸಮುದಾಯ/ಮಾತೃಭಾಷೆಯನ್ನು ಅಳವಡಿಸಿಕೊಳ್ಳುವ ಬಗ್ಗೆ ವಿವರವಾಗಿ ತಿಳಿಸುತ್ತದೆ. ಘೋಷಣೆಯ ಪರಿಚ್ಛೇದ ೨೪ರ ಅನ್ವಯ 'ಪ್ರತಿಯೊಂದು ಭಾಷಾ ಸಮುದಾಯಕ್ಕೂ ತನ್ನ ಪ್ರಾಂತ್ಯ/ನಾಡಿನಲ್ಲಿ ಶಿಕ್ಷಣದ ವಿವಿಧ ಹಂತಗಳಲ್ಲಿ; ಪೂರ್ವ–ಪ್ರಾಥಮಿಕ, ಪ್ರಾಥಮಿಕ, ಪ್ರೌಢ, ತಾಂತ್ರಿಕ ಮತ್ತು ವೃತ್ತಿ ಶಿಕ್ಷಣ, ವಿಶ್ವವಿದ್ಯಾಲಯ ಮತ್ತು ವಯಸ್ಕರ ಶಿಕ್ಷಣ ಯಾವ ಭಾಷೆಯಲ್ಲಿ ಕಲಿಯಬೇಕೆಂದು ತೀರ್ಮಾನಿಸುವ ಹಕ್ಕಿರುತ್ತದೆ'.

ಇದು ಅಂತರಾಷ್ಟ್ರೀಯ ಮಾನವ ಹಕ್ಕುಗಳ ಕಾನೂನಿನ ಚೌಕಟ್ಟಿನಲ್ಲಿ ಪ್ರತಿಯೊಂದು ಸಮುದಾಯಕ್ಕೂ ಇರುವ ಹಕ್ಕು. ನಮ್ಮ ದೇಶದ ನ್ಯಾಯಾಲಯಗಳು

samachara.com

ಮತ್ತು ಕಾನೂನು ಪರಿಣಿತರು ಸಮುದಾಯದ ಭಾಷಾ ವಿಷಯಗಳ ಬಗ್ಗೆ ಚರ್ಚಿಸುವಾಗ ಹಾಗು ತೀರ್ಮಾನಿಸುವಾಗ ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಪಾಲಿಸಬೇಕಾಗುತ್ತದೆ.

ಇನ್ನು ನಮ್ಮ ದೇಶದ ಮಟ್ಟಿಗೆ ಯೋಚಿಸುವಾಗ ನಮ್ಮೆಲ್ಲರಿಗೂ ತಿಳಿದಿರುವಂತೆ ಒಂದು ಆರೋಗ್ಯಕರ ಅಭಿವೃದ್ಧಿ ಸಮಾಜವನ್ನು ಕಟ್ಟಿಕೊಳ್ಳುವ ವಿಷಯದಲ್ಲಿ ಶಿಕ್ಷಣದಲ್ಲಿ ಎಲ್ಲರಿಗೂ ಸಮಾನ ಅವಕಾಶಗಳು ಅನಿವಾರ್ಯ ಮತ್ತು ಅವಶ್ಯಕ ಎಂಬುದು ಸಾರ್ವತ್ರಿಕ ಸತ್ಯ. ಶಿಕ್ಷಣ ಮತ್ತು ಸಂವಿಧಾನದ ಆಶಯಗಳಾದ ಸಮಾನತೆ ಮತ್ತು ಸಾಮಾಜಿಕ ನ್ಯಾಯ ಇವುಗಳಿಗೆ ಅವಿನಾಭಾವ ಸಂಬಂಧವಿದೆ. ಈ ವಿಷಯಗಳನ್ನು ಬೇರ್ಪಡಿಸಿ ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲ. ಇನ್ನು ಮೂಲ ಶಿಕ್ಷಣದ ವಿಷಯ ಬಂದಾಗ ಭಾಷೆ ಮತ್ತು ಶಿಕ್ಷಣದ ಮಾಧ್ಯಮ ಒಂದು ಬಲಿಷ್ಠ ಶಿಕ್ಷಣ ವ್ಯವಸ್ಥೆಯನ್ನು ಕಟ್ಟಿಕೊಳ್ಳುವಲ್ಲಿ ನಿರ್ಣಾಯಕ ಪಾತ್ರ ವಹಿಸಿಸುತ್ತದೆಯೆಂಬುದರಲ್ಲಿ ಎರಡು ಮಾತಿಲ್ಲ.

ಮಕ್ಕಳ ಶಿಕ್ಷಣ ಮಾಧ್ಯಮ ಯಾವುದಾಗಿರಬೇಕೆಂದು ಆಯ್ಕೆ ಮಾಡುವ ಸ್ವಾತಂತ್ರ್ಯ ಮಕ್ಕಳ ಪಾಲಕರಿಗೆ ಮತ್ತು ಪೋಷಕರಿಗಿದೆಯೆಂದು ನಿಖರವಾಗಿ ಸಂವಿಧಾನ ಎಲ್ಲಿಯೂ ಹೇಳಿಲ್ಲ. ಬದಲಿಗೆ, ಮಕ್ಕಳ ಹಕ್ಕುಗಳನ್ನು ಎತ್ತಿ ಹಿಡಿಯುವ ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯು ಪರಿಚ್ಛೇದ ೧೨ರಲ್ಲಿ ತಮಗೆ ಸಂಬಂಧಿಸಿದ ವಿಷಯಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ರೂಪಿಸಿಕೊಳ್ಳಲು ಸಮರ್ಥರಾದ ಮಕ್ಕಳಿಗೆ ಅವರ ವಯಸ್ಸು ಮತ್ತು ಪ್ರಬುದ್ಧತೆಯನ್ನು ಗಮನಿಸಿ ಮುಕ್ತ ಅವಕಾಶ ಕಲ್ಪಿಸಿಕೊಡಬೇಕೆಂದು ತಿಳಿಸುತ್ತದೆ(**ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯು ಪರಿಚ್ಛೇದ ೧೨ನ್ನು ನೋಡಿ**).

ಇನ್ನು ಶಾಲಾ ಶಿಕ್ಷಣದಲ್ಲಿ ಶೈಕ್ಷಣಿಕ ಪ್ರಾಧಿಕಾರ ಎಂದು ಗುರುತಿಸಲ್ಪಟ್ಟಿರುವ ರಾಷ್ಟ್ರೀಯ ಶಿಕ್ಷಣ, ಸಂಶೋಧನೆ ಮತ್ತು ತರಬೇತಿ ಸಂಸ್ಥೆಯು ಭಾಷಾ ಮಾಧ್ಯಮ ಮತ್ತು ಭಾಷಾ ಕಲಿಕೆಯ ಬಗ್ಗೆ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನಲ್ಲಿ ವಿಷದವಾಗಿ ಚರ್ಚಿಸಲಾಗಿದೆ.ಇದು ನಮ್ಮ ರಾಷ್ಟ್ರೀಯ ನೀತಿ ನಿರೂಪಣಾ ಚೌಕಟ್ಟು. ಈ ನೀತಿ ನಿರೂಪಣಾ ಚೌಕಟ್ಟಿನ ಪ್ಯಾರಾ ೩.೧.೨ರಲ್ಲಿ ಹೇಳಿರುವಂತೆ "ಮಕ್ಕಳು ಹುಟ್ಟಿನಿಂದ ಸಹಜವಾಗಿ ಬಂದ ಅದ್ಭುತ ಭಾಷಾ ಸಾಮರ್ಥ್ಯವನ್ನು ಮತ್ತು ತನ್ನ ಕುಟುಂಬ ಮತ್ತು ತನ್ನ ಸುತ್ತ-ಮುತ್ತಲಿನ ಜನಸಮುದಾಯದೊಂದಿಗೆ ಸಂಭಾಷಿಸುವ ಕೌಶಲ್ಯದೊಂದಿಗೆ ಪೂರ್ಣವಾಗಿ ಅರಳಿದ ಭಾಷಾ ಸಂವಹನ ಸಾಮರ್ಥ್ಯದೊಂದಿಗೆ ಶಾಲೆಗೆ ಬಂದಿರುತ್ತಾರೆ. ಅವರು ಸಾವಿರಾರು ಪದಗಳ ಸಾಮರ್ಥ್ಯ ಮಾತ್ರವಲ್ಲದೆ, ಭಾಷಾ



samachara.com

ವಿಷಯಕ್ಕೆ ಸಂಬಂಧಿಸಿದ ಸಂಕೀರ್ಣವಾದ ಪದ, ಶಬ್ದ ಮತ್ತು ವಾಕ್ಯಗಳ ರಚನೆಯ ನಿಯಮ, ಸಂರಚನೆ ಮತ್ತು ಬಳಕೆಯ ಮೇಲೆ ಪೂರ್ಣ ಪ್ರಭುತ್ವತೆ ಪಡೆದೆ ಶಾಲೆಗೆ ಬರುತ್ತಾರೆ. ಮಗುವಿಗೆ ತನ್ನ ಭಾಷೆಯಲ್ಲಿ ಹೇಗೆ ಸರಿಯಾಗಿ ತಿಳಿಯಬೇಕು ಮತ್ತು ಮಾತನಾಡಬೇಕು ಎಂಬುದು ಮಾತ್ರವಲ್ಲದೆ ಎಲ್ಲಿ? ಹೇಗೆ? ಸೂಕ್ತವಾಗಿ ಬಳಸಬೇಕೆಂಬುದರ ಬಗ್ಗೆಯೂ ಅರಿವಿರುತ್ತದೆ. ಹೀಗಾಗಿ, ಅತ್ಯಗತ್ಯವಾಗಿ ನಾವು ಮಾಡಬೇಕಾದ ಕೆಲಸವೆಂದರೆ ಶಾಲೆಗಳಲ್ಲಿ ಭಾರತೀಯ ಭಾಷೆಗಳಲ್ಲಿ ಸುಸ್ಥಿರವಾಗಿ ಕಲಿಸಲು ಅಗತ್ಯವಾದ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಂಡು ಅದನ್ನು ಬಲಪಡಿಸಬೇಕಿದೆ". **(ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು, ೨೦೦೫)**

ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರ ಶಿಕ್ಷಣದಲ್ಲಿ ಮಾತೃ ಭಾಷಾ ಮಾಧ್ಯಮವನ್ನು ಕಡ್ಡಾಯಗೊಳಿಸಲು ಹೊರಟಿರುವುದು ಎಲ್ಲಾ ರೀತಿಯಲ್ಲು ಸಮಂಜಸವಾಗಿದೆ. ಮೇಲಿನ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ನೀತಿ ನಿರೂಪಣಾ ಚೌಕಟ್ಟುಗಳು ಅದಕ್ಕೆ ಪೂರಕವಾಗಿವೆ. ಈ ನಿಟ್ಟಿನಲ್ಲಿ ಸರ್ಕಾರದ ಮುಂದೆ ಎರಡು ನಿರ್ಧಿಷ್ಟ ಅವಕಾಶಗಳಿವೆ. ಮೊದಲನೆಯದಾಗಿ, ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿರುವುದರಿಂದ ರಾಜ್ಯ ಮತ್ತು ಕೇಂದ್ರ ಆ ವಿಷಯಗಳಲ್ಲಿ ನೀತಿ ಮತ್ತು ಕಾನೂನು ರೂಪಿಸುವ ಸಮಾನ ಹಕ್ಕನ್ನು ಹೊಂದಿರುತ್ತವೆ. ಈ ಅವಕಾಶವನ್ನು ಬಳಸಿ, ರಾಜ್ಯ ಸರ್ಕಾರವು ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ ೨೦೦೯ ಪ್ರಕರಣ ೨೯(೨) ರಲ್ಲಿ ಗೊತ್ತುಪಡಿಸಿರುವ ಮೌಲ್ಯಗಳಿಗನುಗುಣವಾಗಿ ಭಾಷಾ ನೀತಿಯನ್ನು ರೂಪಿಸಿ ಜಾರಿಗೊಳಿಸುವ ಕ್ರಮಕ್ಕೆ ಮುಂದಾಗಬೇಕಿದೆ. ಪ್ರಕರಣ ೨೯(೨)ರ ಅನ್ವಯ ಅಂತಹ ನೀತಿಯು ಸಂವಿಧಾನದಲ್ಲಿನ ಮೌಲ್ಯಗಳು; ಮಕ್ಕಳ ಸರ್ವಾಂಗೀಣ ಅಭಿವೃದ್ಧಿ; ಮಕ್ಕಳ ಜ್ಞಾನ, ಸಾಮರ್ಥ್ಯ ಮತ್ತು ಪ್ರತಿಭೆಯ ವರ್ಧನೆ; ಪೂರ್ಣ ಪ್ರಮಾಣದಲ್ಲಿ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳ ವಿಕಸನ; ಶಿಶು ಸ್ನೇಹಿ ಮತ್ತು ಶಿಶು ಕೇಂದ್ರೀಕೃತ ವಾತಾವರಣದಲ್ಲಿ ಚಟುವಟಿಕೆಗಳು, ಅನ್ವೇಷಣೆ ಮತ್ತು ಸಾಹಸ ಶೋಧನೆ ಮೂಲಕ ಮಕ್ಕಳು ಕಲಿಯುವುದು ಮತ್ತು ಮಗುವಿನ ಭಯ, ಆಘಾತ ಹಾಗೂ ಆತಂಕ ಹೋಗಲಾಡಿಸುವುದು ಮತ್ತು ಮಗು ಮುಕ್ತವಾಗಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ನೆರವಾಗುವುದು.

ಇದೆಲ್ಲವೂ ಸಾಧ್ಯವಾಗಬೇಕಾದರೆ ಕಾನೂನಿನಲ್ಲಿ ಹೇಳಿರುವಂತೆ ಶಿಕ್ಷಣ ಮಾಧ್ಯಮವು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಮಕ್ಕಳ ಪರಿಸರ ಮಾತೃಭಾಷೆಯಲ್ಲಿರಬೇಕು. ಒಂದು ರಾಜ್ಯದಲ್ಲಿ ಒಂದಕ್ಕಿಂತ ಹೆಚ್ಚು ಮಾತೃ ಭಾಷೆಗಳಿರುವ

samachara.com

ಸಾಧ್ಯತೆಯಿರುತ್ತದೆ. ಅಂತಹ ಸಂದರ್ಭಗಳಲ್ಲಿ, ಮಾತೃ ಭಾಷೆಯಲ್ಲಿ ಶಿಕ್ಷಣ ಒದಗಿಸುವ ಹೊಣೆ ಹೊತ್ತಿರುವ ರಾಜ್ಯ ಸರ್ಕಾರವು ಸಾಧ್ಯವಾದಷ್ಟು ಮಟ್ಟಿಗೆ ಆ ಮಕ್ಕಳ ಮಾತೃ ಭಾಷೆಯಲ್ಲಿಯೇ ಶಿಕ್ಷಣ ನೀಡಲು ಕ್ರಮ ಕೈಗೊಳ್ಳಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಆ ಭಾಷೆಗೆ ಸೇರಿದ ಜನ ಸಂಖ್ಯೆ ಮತ್ತು ಮಕ್ಕಳ ಸಂಖ್ಯೆಯನ್ನು ಗಮನಿಸಿ ಸರ್ಕಾರ ತೀರ್ಮಾನಿಸಬೇಕಾಗುತ್ತದೆ. ಸರ್ಕಾರದ ಅಂತಹ ತೀರ್ಮಾನಗಳಿಗೆ ಸಹಾಯಕವಾಗುವ ರೀತಿಯಲ್ಲಿ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ೨೯(೨)–(ಎಫ್)ನ್ನು ಸೇರಿಸಲಾಗಿದೆಯೇ ಹೊರತು ಬಹು ಸಂಖ್ಯಾತರ ಮಾತೃ ಭಾಷೆಯನ್ನು ಕಡೆಗಣಿಸುವ ದೃಷ್ಟಿಯಿಂದಲ್ಲ. ಕಾಯ್ದೆಯ ಈ ಅವಕಾಶವನ್ನು ಮುಂದಿನ ಶೈಕ್ಷಣಿಕ ವರ್ಷದಿಂದಲೇ ಜಾರಿಗೆ ತರಲು ಅಗತ್ಯ ಕ್ರಮ ಕೈಗೊಳ್ಳಬೇಕಿದೆ.

ರಾಜ್ಯಸರ್ಕಾರವು ಇತರೆ ರಾಜ್ಯಗಳ ಬೆಂಬಲದೊಂದಿಗೆ ಸಂವಿಧಾನದ ಪರಿಚ್ಛೇಧ ೨೧ಎ ಗೆ ಅಗತ್ಯ ತಿದ್ದುಪಡಿ ತರುವ ಮೂಲಕ ಪೂರ್ವ ಪ್ರಾಥಮಿಕ ಶಿಕ್ಷಣದಿಂದ ಎಲಿಮೆಂಟರಿ ಶಿಕ್ಷಣದವರೆಗೆ ಕಡ್ಡಾಯವಾಗಿ ಮಗುವಿನ ಮಾತೃ ಭಾಷೆಯಲ್ಲಿಯೇ ಶಿಕ್ಷಣ ನೀಡಲು ರಾಜ್ಯ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕಿದೆ. ಈ ವಿಷಯದಲ್ಲಿ, ರಾಜ್ಯವನ್ನು ಪ್ರತಿನಿಧಿಸುವ ಸಂಸದರು ಸಕ್ರಿಯ ಪಾತ್ರವಹಿಸಬೇಕಿದೆ.

ಕೊನೆಯದಾಗಿ, ಭಾಷಾ ಮಾಧ್ಯಮ ಕೇವಲ ಶಿಕ್ಷಣದ ವಿಷಯ ಮಾತ್ರವಾಗದೆ ಎಲ್ಲ ಹಂತಗಳಲ್ಲಿ ಜಾರಿಗೊಳ್ಳಬೇಕಿದೆ.ನಾಡಿನ ಜನಮನದ ಭಾಷೆಯಾಗಿರುವ ಕನ್ನಡ ಭಾಷೆ ಆಡಳಿತದ ಎಲ್ಲಾ ಹಂತದಲ್ಲಿ ಪ್ರಾಮಾಣಿಕವಾಗಿ ಜಾರಿಯಾಗಬೇಕಾಗಿದೆ. ಮುಂದುವರಿದು, ಭಾಷೆ ಮತ್ತು ನಾಡಿನ ಹಿತದೃಷ್ಟಿಯಿಂದ ಕನ್ನಡವನ್ನು ಉಳಿಸಿ ಬೆಳೆಸಲು ಸರ್ಕಾರಕ್ಕಿರುವ ಒಂದೇ ಒಂದು ದಾರಿಯೆಂದರೆ ಶಿಕ್ಷಣವನ್ನು ರಾಜ್ಯದ ಸಮಗ್ರ ಅಭಿವೃದ್ಧಿಗೆ ಏಕೈಕ ಭದ್ರ ಬುನಾದಿಯೆಂದು ಪರಿಗಣಿಸಿ ಕೂಡಲೇ ರಾಜ್ಯದ ಎಲ್ಲಾ ಮಕ್ಕಳಿಗೆ ಸಮಾನ ಶಾಲಾ ಶಿಕ್ಷಣ ವ್ಯವಸ್ಥೆಯ ಆಧಾರದ ಮೇಲೆ ಒಂದೇ ಗುಣಮಟ್ಟದ ಶಿಕ್ಷಣ ಒದಗಿಸಬಲ್ಲ ಸಮಗ್ರ ಶಿಕ್ಷಣ ನೀತಿ ಹಾಗು ಭಾಷಾ ನೀತಿಯನ್ನು ರೂಪಿಸಿ ಅನುಷ್ಠಾನಗೊಳಿಸಬೇಕಾಗಿದೆ. ತಾರತಮ್ಯಗಳನ್ನು ಹುಟ್ಟುಹಾಕುತ್ತಿರುವ ಇಂದಿನ ಶೈಕ್ಷಣಿಕ ವ್ಯವಸ್ಥೆಗೆ ಅಂತ್ಯವಾಡುವುದರ ಮೂಲಕ ಸಮಸ್ಯೆಯ ಮೂಲವನ್ನು ಅರಿತು ದೀರ್ಘಕಾಲಿಕ ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ. ಸಮಾನತೆ ಮತ್ತು ಸಾಮಾಜಿಕ ನ್ಯಾಯದ ತಳಹದಿಯ ಮೇಲೆ ಮಾತೃ ಭಾಷಾ ಮಾಧ್ಯಮದಲ್ಲಿ ಸಮಾನ ಶಾಲಾ ಶಿಕ್ಷಣವನ್ನು ನೀಡಲು ಸಾಧ್ಯವಾಗಬಹುದಾದ ಸಮಗ್ರ ಶಿಕ್ಷಣ ನೀತಿಯೊಂದು ಮಾತ್ರ ಇಂತಹ ಸಂಕೀರ್ಣ ಮತ್ತು ಸೂಕ್ಷ್ಮತೆಯಿಂದ ಕೂಡಿದ ವಿಚಾರಗಳಿಗೆ ಪರಿಹಾರವನ್ನು ಒದಗಿಸಬಲ್ಲದು.

samachara.com

## ಶಿಫಾರಸು–೧೭

ಅಂಗನವಾಡಿ ಕೇಂದ್ರಗಳನ್ನು ಪುನಶ್ಚೇತನಗೊಳಿಸುವುದು:

(ಅ) ಪ್ರಸ್ತುತ ಅಂಗನವಾಡಿ ಕೇಂದ್ರಗಳನ್ನು ಮಕ್ಕಳ ಪಾಲನಾ ಕೇಂದ್ರವಾಗಿಸಲು ಬೇಕಾದ ಮೂಲಭೂತ ಅನುಕೂಲತೆಗಳಿಂದ ವ್ಯವಸ್ಥಿತಗೊಳಿಸಬೇಕು.

(ಇ) ಪ್ರತಿ ಗ್ರಾಮಗಳಲ್ಲೂ ಶಿಶುಪಾಲನಾ ಕೇಂದ್ರಗಳನ್ನು ತೆರೆಯಬೇಕು. ಅಲ್ಲಿ ೧ ರಿಂದ ೩+ವರೆಗಿನ ಮಗು ಪ್ರವೇಶ ಪಡೆಯಬೇಕು. ಅಲ್ಲಿ ತರಬೇತಿ ಪಡೆದ ಶಿಕ್ಷಕಿ ಹಾಗು ಓರ್ವ ಸಹಾಯಕರ ನೇಮಕ ಮಾಡಬೇಕು. ಅಲ್ಲದೆ ಆರೋಗ್ಯ ಕಾರ್ಯಕರ್ತೆಯರ ಸೇವೆ ಸಂದರ್ಭಾನುಸಾರ ನಿಯತವಾಗಿ ದೊರಕುವಂತಿರಬೇಕು ಮತ್ತು ಮೂಲ ಸೌಲಭ್ಯಗಳನ್ನು ಒದಗಿಸಬೇಕು.

samachara.com

# ವಿವರಣೆ : ಅಂಗನವಾಡಿ ಕೇಂದ್ರದ ವಸ್ತುಸ್ಥಿತಿ

'ಮನೆಯೇ ಮೊದಪಾಠಶಾಲೆ, ಜನನಿ ತಾನೆ ಮೊದಲ ಗುರುವು, ಜನನಿಯಿಂದ ವಿದ್ಯೆ ಕಲಿತ ಜನರೆ ಧನ್ಯರು' ಎಂಬ ಕವಿವಾಣಿಯಂತೆ ಮಗುವಿನ ಶಿಕ್ಷಣ ಮೊದಲು ಪ್ರಾರಂಭವಾಗುವುದು ಮನೆಯಲ್ಲಿ, ಮಗು ತನ್ನ ತಾಯಿಯ ಮೂಲಕ, ಕುಟುಂಬದ ಪರಿಚಯ ಹೊಂದಿ, ಅವರೊಂದಿಗೆ ಬೆರೆತು, ತನ್ನ ಸಾಮಾಜಿಕ ಪರಿಸರಕ್ಕೆ ಕಾಲಿಡುತ್ತದೆ. ಮಗುವಿಗೆ ಮೂರು ವರ್ಷ ತುಂಬಿದ ಬಳಿಕ ಮಗುವನ್ನು ಅಂಗನವಾಡಿ ಕೇಂದ್ರಕ್ಕೆ ದಾಖಲು ಮಾಡಲಾಗುತ್ತದೆ. ಆದರೆ, ಇಂದಿನ ವ್ಯವಸ್ಥೆಯಲ್ಲಿ ಎಲ್ಲಾ ಮಕ್ಕಳೂ ಅಂಗನವಾಡಿ ಕೇಂದ್ರಗಳಿಗೆ ದಾಖಲಾಗುವುದಿಲ್ಲ. ವಿವಿಧ ವರ್ಗದ ಮಕ್ಕಳಿಗೆ ವಿವಿಧ ಶಿಕ್ಷಣ ಕ್ರಮವನ್ನು ರೂಪಿಸಿಕೊಂಡಿರುವ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಪೂರ್ವ–ಪೂರ್ವ ಪ್ರಾಥಮಿಕ (ನರ್ಸರಿ), ಪೂರ್ವ– ಪ್ರಾಥಮಿಕ, ಲೋವರ್ ಕಿಂಡರ್ ಗಾರ್ಡನ್ (ಎಲ್‌ಕೆಜಿ), ಅಪ್ಪರ್ ಕಿಂಡರ್ ಗಾರ್ಡನ್ (ಯುಕೆಜಿ), ಮಾಂಟೆಸರಿ ಇತ್ಯಾದಿ ವ್ಯವಸ್ಥೆಯಲ್ಲಿ ಮಕ್ಕಳು ದಾಖಲಾಗುತ್ತವೆ. ಮಕ್ಕಳನ್ನು ವಿಭಜಿಸುವ ಕ್ರೂರ ವ್ಯವಸ್ಥೆ ಇಲ್ಲಿಂದಲೇ ರೂಪುಗೊಂಡು ಸಮಾನ ಶಾಲಾ ಶಿಕ್ಷಣದ ಕನಸಿನ ತಳಹದಿಯೇ ಬಿರುಕು ಬಿಟ್ಟಂತಾಗುತ್ತದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ನಡೆಸಲ್ಪಡುವ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳನ್ನು ನೋಡಿಕೊಳ್ಳಲು ನೇಮಿಸಲಾಗುವ ಬಹುತೇಕ ಕಾರ್ಯಕರ್ತೆಯರಿಗೆ ಯಾವುದೇ ಸೇವಾ ಪೂರ್ವ ತರಬೇತಿ ನಿಗದಿಗೊಳಿಸಿರುವುದಿಲ್ಲ. ಇವರ ಆಯ್ಕೆಗೆ ೧೦ನೇ ತರಗತಿ ಶಿಕ್ಷಣವನ್ನು ಪರಿಗಣಿಸಲಾಗುತ್ತದೆ. ಅಂಗನವಾಡಿ ಕೇಂದ್ರಗಳಲ್ಲಿ ರೂಢಿಗತವಲ್ಲದ ಶಾಲಾ ಪೂರ್ವ ಶಿಕ್ಷಣ ನೀಡಲಾಗುತ್ತಿದೆ. ಈ ಶಿಕ್ಷಣವು ಅಂಗನವಾಡಿ ಕೇಂದ್ರಗಳಲ್ಲಿರುವ ವಿವಿಧ ವಯೋಮಾನದ ಮಕ್ಕಳಿಗೆ ಅವರ ಸಾಮರ್ಥ್ಯಕ್ಕನುಗುಣವಾಗಿ ಕಲಿಕಾಸಕ್ತಿಯನ್ನು ಉದ್ದೀಪನ ಗೊಳಿಸುವಂತಹ ಹಾಗೂ ಮುಂದಿನ ಶೈಕ್ಷಣಿಕ ಹಂತವಾದ ಪ್ರಾಥಮಿಕ ಶಿಕ್ಷಣಕ್ಕೆ ಮಗುವನ್ನು ಅಣಿಗೊಳಿಸುವಂತಹ



samachara.com

ಚಟುವಟಿಕೆಗಳನ್ನು ಕಾರ್ಯಗತಗೊಳಿಸುತ್ತಿಲ್ಲ. ಹೀಗಾಗಿ, ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಶಿಕ್ಷಣಕ್ಕೆ ಸಾವಯವ (Organic)ಸಂಬಂಧವೇ ಇಲ್ಲದಂತಾಗಿದೆ.

ಪ್ರಸ್ತುತ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳಲ್ಲಿ ಬಹುತೇಕ ಕೇಂದ್ರಗಳಿಗೆ ಸ್ವಂತ ಕಟ್ಟಡವಿಲ್ಲ. ಆಯಾ ಗ್ರಾಮದ ಪರಿಸರಕ್ಕನುಗುಣವಾಗಿ ಬಾಡಿಗೆ ಅಥವಾ ದಾನಿಗಳ ಕೊಡುಗೆಯ ಕಟ್ಟಡಗಳಲ್ಲಿ ಕೇಂದ್ರಗಳನ್ನು ನಡೆಸಲಾಗುತ್ತಿದೆ. ಇನ್ನು ಹಾಲಿ ಇರುವ ಬಹುತೇಕ ಕಟ್ಟಡಗಳಲ್ಲಿ ಶೌಚಾಲಯ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ಸುಸಜ್ಜಿತ ಅಡುಗೆ ಮನೆ ಸಹಿತ ಊಟದ ಕೋಣೆ, ಮಧ್ಯಾಹ್ನ ಮಕ್ಕಳು ಮಲಗಲು ಸೂಕ್ತ ವ್ಯವಸ್ಥೆಗಳನ್ನು ಹೊಂದಿರುವುದಿಲ್ಲ.

ವಾಸ್ತವಿಕವಾಗಿ, ಅಂಗನವಾಡಿ ಕಾರ್ಯಕರ್ತೆಯರು ಮಗುವಿನ ಆರೋಗ್ಯ, ಪೌಷ್ಠಿಕತೆ, ಆರೈಕೆ ಮತ್ತು ಅಭಿವೃದ್ಧಿಗೆ ಹೆಚ್ಚು ಗಮನಹರಿಸುವುದು ಮುಖ್ಯ. ಇದರ ಭಾಗವಾಗಿ ಸ್ತ್ರೀ ಗರ್ಭಧರಿಸಿದಂದಿನಿಂದ ಹಿಡಿದು ಜನನದವರೆಗೆ ಮತ್ತು ನಂತರ ಎದೆಹಾಲಿನ ಪ್ರಾಮುಖ್ಯತೆ, ಪಲ್ಸ್ ಪೋಲಿಯೋ ಲಸಿಕೆ, ಚುಚ್ಚುಮದ್ದು, ಕ್ಷಯರೋಗ, ಹೆಚ್.ಐ.ವಿಸೋಂಕಿನ ಬಗೆಗಿನ ಮಾಹಿತಿ ಇತ್ಯಾದಿಗಳ ಬಗ್ಗೆ ಗಮನ ಹರಿಸಿ ಕೆಲಸ ಮಾಡಬೇಕು.ಆದರೆ ಅಂಗನವಾಡಿ ಕಾರ್ಯಕರ್ತೆಯರು ವಾಸ್ತವಿಕವಾಗಿ ಜಾತಿ ಹಾಗೂ ಜಾನುವಾರು ಗಣತಿ, ಚುನಾವಣಾ ಕೆಲಸ, ಸ್ತ್ರೀಶಕ್ತಿ ಸಂಘ, ಕಿಶೋರಿಯರಿಗೆ ಮಾಹಿತಿ ಇನ್ನೂ ಮುಂತಾದ ಮಕ್ಕಳ ಅಭಿವೃದ್ಧಿಯೇತರ ಕಾರ್ಯಗಳ ಜೊತೆಗೆ ಮಕ್ಕಳ ಆರೋಗ್ಯ, ಆರೈಕೆ ಮತ್ತು ಶೈಕ್ಷಣಿಕ ಚಟುವಟಿಕೆಗಳತ್ತ ಗಮನ ನೀಡುವುದು ಕಷ್ಟ ಸಾಧ್ಯವಾದ ಕೆಲಸವಾಗಿದೆ.

ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರಿಗೆ ಸರಿಯಾದ ಸಂಬಳ, ಸೇವಾ ಭದ್ರತೆ, ಆರೋಗ್ಯ ವಿಮೆ, ಪಿಂಚಣಿ ಸೌಲಭ್ಯ ಇತ್ಯಾದಿಗಳ ಅವಕಾಶಗಳಿಲ್ಲ. ತಮ್ಮ ಜೀವನಕ್ಕೆ ಭದ್ರತೆಯಿಲ್ಲದ ಈ ಕಾರ್ಯಕರ್ತೆಯರಿಂದ ಮಕ್ಕಳ ಅಭಿವೃದ್ಧಿ ಯಾವ ರೀತಿ ಸಿಗಬಹುದು. ಮಿಗಿಲಾಗಿ, ಸರ್ವಾಂಗೀಣ ಅಭಿವೃದ್ಧಿಗೆ ಬೇಕಾಗುವ ಪೂರಕ ಆರೈಕೆ ಮತ್ತು ಶಿಕ್ಷಣ ಸಿಗಲು ಸಾಧ್ಯವಾಗುವುದಿಲ್ಲ.

ಮೇಲಿನ ಕಾರಣಗಳಿಂದ ಅಂಗನವಾಡಿಗಳಲ್ಲಿ ನಿಜ ಅರ್ಥದಲ್ಲಿ ಯಾವುದೇ ಶಾಲಾ ಪೂರ್ವ ಶಿಕ್ಷಣ ಮಕ್ಕಳಿಗೆ ಸಿಗುತ್ತಿಲ್ಲ. ಜೊತೆಗೆ ಅಂಗನವಾಡಿ ಮತ್ತು ಪ್ರಾಥಮಿಕ ಶಿಕ್ಷಣ ಬೇರೆ ಬೇರೆ ಇಲಾಖೆಗಳ ಕಾರ್ಯಕ್ರಮವಾಗಿದ್ದು ಸಮನ್ವಯ ಮತ್ತು ಸಾವಯವ ಸಂಬಂಧದ ಬದಲು ಸಮಾನಾಂತರ ಮತ್ತು ಪ್ರತ್ಯೇಕತೆಯಿಂದ

samachara.com

ನಡೆಯುತ್ತಿವೆ. ಪ್ರಾಥಮಿಕ ಶಿಕ್ಷಣದ ಅವಿಭಾಜ್ಯ ಅಂಗವಾಗಬೇಕಿದ್ದ ಶಾಲಾ ಪೂರ್ವ ಶಿಕ್ಷಣ ದಿಕ್ಕು ದೆಸೆಯಿಲ್ಲದೆ ಸಾಗಿದೆ.

## ಶಿಶು ಪಾಲನಾ ಕೇಂದ್ರ

ಆರಂಭಿಕ ಬಾಲ್ಯದ ಬೆಳವಣಿಗೆ ಹುಟ್ಟಿನಿಂದ ೩+ ವರ್ಷ ವಯಸ್ಸಿನ ಮಕ್ಕಳ ಬೆಳವಣಿಗೆ ಹಾಗೂ ಅಗತ್ಯಗಳಿಗೆ ಸಂಬಂಧಿಸಿದೆ.ಕುಟುಂಬ ಹಾಗು ಸಮುದಾಯಗಳು ಮಕ್ಕಳ ಈ ಅಗತ್ಯಕ್ಕೆ ಸ್ವಲ್ಪ ಮಟ್ಟಿನ ಒತ್ತು ನೀಡುತ್ತವೆ. ಮಕ್ಕಳ ಆರೋಗ್ಯ, ಪೌಷ್ಠಿಕತೆ, ಅರಿವು, ಸಾಮಾಜೀಕರಣ ಹಾಗೂ ಭಾವನಾತ್ಮಕ ಸಾಮಾರ್ಥ್ಯಗಳಿಗೆ ಒತ್ತು ನೀಡುವ ನೀತಿಯೊಂದನ್ನು ರೂಪಿಸುವುದರ ಮೂಲಕ ಅವರ ಅಭಿವೃದ್ಧಿಗೆ ಸಹಾಯಕವಾಗುವ ಪಾತ್ರವನ್ನು ಸರ್ಕಾರಗಳು ವಹಿಸಬೇಕಾಗುತ್ತದೆ.ಪ್ರಾರಂಭದಲ್ಲಿ ಮಕ್ಕಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳು ಅವರ ಕುಟುಂಬ ಹಾಗೂ ಸಮುದಾಯಗಳಿಂದ ರೂಪಿತವಾಗುತ್ತವೆ. ಇದರ ಜೊತೆಗೆ ಮಗುವಿನ ಸರ್ವಾಂಗೀಣ ಬೆಳವಣಿಗೆಯನ್ನು ವರ್ಧಿಸುವ ಸಾಮಾಜಿಕ–ಸಾಂಸ್ಕೃತಿಕ ಪರಿಸರಗಳು ಸೃಷ್ಟಿಯಾಗಬೇಕು. ಮಕ್ಕಳನ್ನು ಪಾಲನೆ ಮಾಡುವ ಸಾಂಪ್ರದಾಯಿಕ ರೂಢಿಗಳನ್ನು ಅರ್ಥ ಮಾಡಿಕೊಳ್ಳಬೇಕು. ಈ ಮೂಲಕ ಕುಟುಂಬಗಳಲ್ಲಿ ಮಕ್ಕಳು ಶಾಲೆಗೆ ಹೋಗುವುದನ್ನು ಉತ್ತೇಜಿಸುವುದು, ಆರೋಗ್ಯ ಹಾಗೂ ಉತ್ತಮ ಪೌಷ್ಠಿಕತೆಯೊಂದಿಗೆ ಬೌದ್ಧಿಕವಾಗಿಯೂ ಕುತೂಹಲಕಾರಿ ಯಾಗುವಂತೆ ಮಾಡುವುದು, ಸಮಾಜದಲ್ಲಿ ದಿಟ್ಟವಾಗಿರುವುದು, ಜೀವನ ಪರ್ಯಂತದ ಕಲಿಕೆಗೆ ಒಂದು ಗಟ್ಟಿಯಾದ ಅಡಿಪಾಯವನ್ನು ಹಾಕಿಕೊಡುವುದು ಸಾಧ್ಯವಾಗುತ್ತದೆ.

samachara.com

ಶಿಶು ಪಾಲನಾ ಕೇಂದ್ರಗಳಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ಆರೈಕೆ; ಮಕ್ಕಳ ಅಕಾಲಿಕ ಮರಣ; ನವಜಾತ ಶಿಶುವಿನ ಧನುರ್ವಾಯುವಿನ ಸೆಳೆತದಿಂದ ಉಂಟಾದ ಅತಿಸಾರ; ಸಕಾಲಿಕ ಚುಚ್ಚುಮದ್ದಿನಿಂದ ತಡೆಗಟ್ಟಬಹುದಾದ ಕಾಯಿಲೆಗಳು; ಕಬ್ಬಿಣಾಂಶ ಕೊರತೆಯಿಂದ ಉಂಟಾದ ರಕ್ತ ಹೀನತೆ; ದೀರ್ಘಕಾಲದ ಅಪೌಷ್ಠಿಕತೆ; ಬೆಳವಣಿಗೆಯಲ್ಲಿ ಕುಂಠಿತ; ಮಗುವಿನ ಮಾನಸಿಕ ಹಾಗೂ ಆರೋಗ್ಯ ಸ್ಥಿತಿಗತಿ ಇತ್ಯಾದಿ ಸಮಸ್ಯೆಗಳಿಗೆ ವ್ಯವಸ್ಥಿತ ಪರಿಹಾರಗಳನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಮತ್ತು ಸಹಾಯಕ ವಾಗುತ್ತದೆ.

ಮಗುವಿನ ಬಾಲ್ಯ ಬಹಳ ಮುಖ್ಯವಾದದ್ದು. ಚಿಕ್ಕಂದಿನಲ್ಲಿ ಮಗು ಕಲಿಯುವಂತಹದು ಕೊನೆಯವರೆಗೂ ಉಳಿಯುವುದರಿಂದ ಈ ಹಂತದಲ್ಲಿ ಮಗುವಿನ

ಪಾಲನೆ ಮತ್ತು ಕಲಿಕೆ ಬಹಳ ಪ್ರಾಮುಖ್ಯತೆಯನ್ನು ಹೊಂದಿದೆ. ಮಗು ಹುಟ್ಟಿದಂದಿನಿಂದ ೩+ ವಯೋಮಾನದ ವರೆಗಿನ ಮಕ್ಕಳಿಗೆ ಶಿಶುಪಾಲನಾ ಕೇಂದ್ರಗಳ ಮೂಲಕ ಮಗುವಿನ ಬೆಳವಣಿಗೆಗೆ ಉತ್ತಮ ವಾತಾವರಣ ನಿರ್ಮಿಸಬಹುದಾಗಿದೆ. ಹುಟ್ಟಿನಿಂದ ೨ ವರ್ಷ ತುಂಬುವವರೆಗೆ ಮಗು ಮನೆಯಲ್ಲಿಯೇ ಕೌಟುಂಬಿಕ ಪರಿಸರದ ಹಿನ್ನೆಲೆಯಲ್ಲಿ ಬೆಳೆಯುತ್ತದೆ. ಈ ಅವಧಿಯಲ್ಲಿ ಮಗುವಿನ ದೈಹಿಕ ಬೆಳವಣಿಗೆ ಮತ್ತು ಆರೋಗ್ಯದ ಕಡೆಗೆ ನಿಗಾವಹಿಸಲು ಜನಸಂಖ್ಯೆಯ ಮಿತಿಗನುಗುಣವಾಗಿ ಆರೋಗ್ಯ ಕಾರ್ಯಕರ್ತೆಯರನ್ನು ನೇಮಕ ಮಾಡಿ, ಮಕ್ಕಳಿಗೆ ನೀಡಲಾಗುವ ರೋಗ ನಿರೋಧಕ ಲಸಿಕೆಗಳನ್ನು ಕಾಲ ಕಾಲಕ್ಕೆ ಸರ್ಕಾರದಿಂದಲೇ ಉಚಿತವಾಗಿ ಮಗುವಿನ ಕುಟುಂಬದ ಪರಿಸರದಲ್ಲಿಯೇ ನೀಡಬಹುದಾಗಿದೆ. ಇದರಿಂದ ದೈಹಿಕವಾಗಿ ಬೆಳವಣಿಗೆ ಹೊಂದಿದ ಆರೋಗ್ಯವಂತ ಮಗು ೨ ವರ್ಷಗಳು ತುಂಬಿದ ನಂತರ ಶಿಶು ಪಾಲನಾ ಕೇಂದ್ರಗಳಿಗೆ ದಾಖಲಾಗುತ್ತದೆ. ಶಿಶು ಪಾಲನಾ ಕೇಂದ್ರಗಳಲ್ಲಿ ಮಗುವಿಗೆ ಆರೋಗ್ಯ, ಬೆಳವಣಿಗೆ ಮತ್ತು ಪ್ರಾರಂಭಿಕ ಕಲಿಕೆಗೆ ಪೂರಕವಾದ ಮತ್ತು ಮಗುವಿನಲ್ಲಿ ಆಸಕ್ತಿ ಮೂಡಿಸುವ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ಉತ್ತಮ ಭೌತಿಕ ವಾತಾವರಣದಲ್ಲಿ ಹಮ್ಮಿಕೊಳ್ಳಬಹುದಾಗಿದೆ. ಇಂಥಹ ಉತ್ತಮ ಭೌತಿಕ ವ್ಯವಸ್ಥೆ ಕಲ್ಪಿಸಲು ಶಿಶು ಪಾಲನಾ ಕೇಂದ್ರಗಳು ಕನಿಷ್ಠ ೪ ಗುಂಟೆ ಜಮೀನನ್ನು ಹೊಂದಿರಬೇಕು. ಸದರಿ ಜಮೀನಿನ ೩ ಕುಂಟೆ ಜಾಗದಲ್ಲಿ ಕಲಿಕಾ ಕೊಠಡಿ; ವಿಶ್ರಾಂತಿ ಕೊಠಡಿ; ಅಡುಗೆ ಮನೆ; ಒಳಾಂಗಣ–ಕ್ರೀಡಾಂಗಣ ಇರಬೇಕು. ಶುದ್ಧೀಕರಿಸಿದ ಕುಡಿಯುವ ನೀರಿನ ಸೌಲಭ್ಯದೊಂದಿಗೆ ಮಕ್ಕಳ ಸ್ನೇಹಿ ಶೌಚಾಲಯಗಳನ್ನು ಹೊಂದಿರಬೇಕು. ಉಳಿದ ಒಂದು ಕುಂಟೆಯಲ್ಲಿ ಹೊರಾಂಗಣ ಕ್ರೀಡಾಂಗಣ ಇರಬೇಕು. ಹೊರಾಂಗಣ ಕ್ರೀಡಾಂಗಣದಲ್ಲಿ ಮಕ್ಕಳ ವಯೋಮಾನಕ್ಕನುಗುಣವಾದ ಸುಲಭವಾಗಿ ಆಡಬಹುದಾದ ಆಟದ ಸಾಮಾಗ್ರಿಗಳ ವ್ಯವಸ್ಥೆಯಿರಬೇಕು. ಶಿಶು ಪಾಲನಾ ಕೇಂದ್ರಗಳು ಸುಭದ್ರವಾದ ಕಾಂಪೌಂಡ್ ವ್ಯವಸ್ಥೆಯನ್ನು ಹೊಂದಿರಬೇಕು, ವಿದ್ಯುಚ್ಛಕ್ತಿ ಸೌಲಭ್ಯವನ್ನು ಕಡ್ಡಾಯವಾಗಿ ಹೊಂದಿರಬೇಕು.

ಜೊತೆ ಜೊತೆಗೆ ಮಗುವಿನ ಮಾನಸಿಕ ಮತ್ತು ದೈಹಿಕ ಬೆಳವಣಿಗೆಗೆ ಪೂರಕವಾದ ಸಮತೋಲನಾ ಆಹಾರ ನೀಡುತ್ತಾ ಮಗುವಿಗೆ ಆರೋಗ್ಯವನ್ನು ಸಹ ಕಾಪಾಡಬಹುದಾಗಿದೆ. ಈ ರೀತಿ ಮಗುವಿಗೆ ೩+ ವಯೋಮಾನ ತುಂಬುವುದರೊಳಗಾಗಿ ಮಗು ತನ್ನ ಕೌಟುಂಬಿಕ ಪರಿಸರದ ಜೊತೆಗೆ ಸುತ್ತಲಿನ ಪರಿಸರಕ್ಕೂ ಹೊಂದಿಕೊಂಡು ಪ್ರಾರಂಭಿಕ ಕಲಿಕೆಯಲ್ಲಿ ಆಸಕ್ತಿಯನ್ನು ಬೆಳಸಿಕೊಳ್ಳಲು ಸಹಾಯಕವಾಗುತ್ತದೆ.

samachara.com

ಶಿಶು ಪಾಲನಾ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸಲು ಆರೋಗ್ಯದ ದೃಷ್ಟಿಯಿಂದ ಓರ್ವ ಆರೋಗ್ಯ ಕಾರ್ಯಕರ್ತೆ, ಶಿಶು ಪಾಲನೆಯಲ್ಲಿ ತರಬೇತಿ ಪಡೆದ ಶಿಕ್ಷಕಿ ಮತ್ತು ಓರ್ವ ಸಹಾಯಕಿಯನ್ನು ನೇಮಕ ಮಾಡಿಕೊಳ್ಳಬೇಕು. ಆರೋಗ್ಯ ಕಾರ್ಯಕರ್ತೆಯರು ಶಿಶು ಪಾಲನಾ ಕೇಂದ್ರಗಳಲ್ಲಿರುವ ಮಕ್ಕಳು ಮತ್ತು ೨ ವರ್ಷದೊಳಗಿನ ಮನೆಯ ಪರಿಸರದಲ್ಲಿರುವ ಮಕ್ಕಳ ಜೊತೆಗೆ ಗರ್ಭಿಣಿ–ಬಾಣಂತಿಯರ ಆರೋಗ್ಯದ ಕಡೆಗೆ ವಿಶೇಷ ಗಮನ ನೀಡಿ, ಸಕಾಲಕ್ಕೆ ಲಸಿಕೆ ಇತ್ಯಾದಿಗಳನ್ನು ಒದಗಿಸಬಹುದು. ಶಿಶು ಪಾಲನೆಯಲ್ಲಿ ತರಬೇತಿ ಪಡೆದ ಶಿಕ್ಷಕಿ ಶಿಶು ಪಾಲನಾ ಕೇಂದ್ರದಲ್ಲಿದ್ದು ಅನ್ಯ ಕಾರ್ಯದ ಒತ್ತಡವಿಲ್ಲದೆ ಮಕ್ಕಳ ಜೊತೆ ಆಟ–ಪಾಠಗಳಲ್ಲಿ ಬೆರೆಯಬಹುದು. ಸಹಾಯಕರು ಸರ್ಕಾರ ನೀಡಿದ ಸಮತೋಲನ ಆಹಾರ ವಿತರಿಸಿ ಮಕ್ಕಳ ಬೇಕು ಬೇಡಗಳಿಗೆ ಸ್ಪಂದಿಸಬಹುದು. ಹೀಗಾಗಿ, ಪ್ರತಿ ಶಿಶು ಪಾಲನಾ ಕೇಂದ್ರಕ್ಕೆ ಮೇಲೆ ತಿಳಿಸಿದ ೩ ಜನ ಸಿಬ್ಬಂದಿ ಅತ್ಯಾವಶ್ಯಕವಾಗಿಬೇಕು.

ಶಿಶು ಪಾಲನಾ ಕೇಂದ್ರಗಳಿಗೆ ಸರಬರಾಜು ಮಾಡಲಾಗುವ ಆಹಾರವು ಪೋಷಕಾಂಶಗಳಿಂದ ಕೂಡಿದ್ದು ಸಮತೋಲನಯುಕ್ತ ಆಹಾರವಾಗಿರಬೇಕು. ಪದೇ ಪದೇ ಆಹಾರ ಬದಲಾವಣೆ ಮಾಡಬಾರದು. ಮಗುವಿನ ಪರಿಸರಕ್ಕೆ ಹೊಂದಾಣಿಕೆ ಯಾಗುವಂತಹ ಆಹಾರ ವಿತರಣೆಯಾಗಬೇಕು. ವಿತರಿಸುವಂತಹ ಆಹಾರ ಗುಣಮಟ್ಟದಿಂದ ಕೂಡಿದ್ದು ವೈದ್ಯರಿಂದ ದೃಢೀಕರಿಸಲ್ಪಟ್ಟಿರಬೇಕು.

samachara.com

## ಶಿಫಾರಸು–೧೮

ಪ್ರಾಥಮಿಕ ಕಿರಿಯ ಹಿರಿಯ ಮಾಧ್ಯಮಿಕ ಪ್ರೌಢ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ ನೀಡುವ ಅಗತ್ಯವಿದ್ದು, ಪ್ರಸ್ತುತ ಶಾಲೆಗಳನ್ನು ಇತರ ಶಿಕ್ಷಣ ಸಂಸ್ಥೆಗಳ ಜೊತೆ ಇಂದೀಕರಿಸುವ ತುರ್ತು ಇರುವುದರಿಂದ ಪಠ್ಯೇತರ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಆದ್ಯತೆಯಲ್ಲಿ ಆಗಬೇಕು. ಪಠ್ಯ ಮತ್ತು ಪಠ್ಯೇತರ ಕಲಿಕಾ ಸೌಲಭ್ಯಗಳನ್ನು ಕಾಲೋಚಿತಗೊಳಿಸುವುದು (ಅಪ್‌ಡೇಟ್):

(ಅ) ಪಠ್ಯೇತರ–ಸಂಗೀತ, ಚಿತ್ರಕಲೆ, ದೈಹಿಕ ಶಿಕ್ಷಣ, ತೋಟಗಾರಿಕೆ, ಕರಕುಶಲ ಕಲೆ ಇತ್ಯಾದಿ ವಿಷಯಗಳ ಬಗ್ಗೆ ತರಬೇತಿ ಹೊಂದಿದ ಶಿಕ್ಷಕರಿಂದ ಕಲಿಕೆ.

(ಆ) ಮೂಲಭೂತ ಸೌಲಭ್ಯ–ತರಗತಿಗೊಂದು ಕೊಠಡಿ, ಗ್ರಂಥಾಲಯ, ಶುದ್ಧ ಕುಡಿಯುವ ನೀರು, ಬಳಕೆಯುಕ್ತ ಶೌಚಾಲಯ, ಹೊರಾಂಗಣ–ಒಳಾಂಗಣ ಕ್ರೀಡಾಂಗಣ, ಕ್ರೀಡಾ ಸಾಮಗ್ರಿ, ಕಂಪ್ಯೂಟರ್ ಪ್ರಯೋಗಾಲಯ, ಸುಸಜ್ಜಿತ ಪ್ರಯೋಗಶಾಲೆ ರಂಗಮಂದಿರ ಇವೆಲ್ಲವೂ ಗುಣಾತ್ಮಕ ಶಿಕ್ಷಣಕ್ಕೆ ಪೂರಕ ಸಾಮಗ್ರಿಗಳಾಗಿದ್ದು ಅವುಗಳನ್ನು ಒದಗಿಸುವುದು.

(ಇ) ಪೂರ್ವ ಪ್ರಾಥಮಿಕ ಶಾಲೆಗಳ ನಂತರ ೧ ರಿಂದ ೪ರವರೆಗೆ ಕಿರಿಯ ಪ್ರಾಥಮಿಕ ಶಾಲೆ ಎಂದು ವಿಭಾಗಿಸಬೇಕು. ವಿಷಯ ಕ್ಕೊಬ್ಬರಂತೆ ಇಬ್ಬರು ಭಾಷಾ ಶಿಕ್ಷಕರು (ಆಂಗ್ಲ + ಮಾತೃಭಾಷೆ) ಪರಿಸರ ಅಧ್ಯಯನಕ್ಕೆ ಒಬ್ಬರು ಗಣಿತಕ್ಕೊಬ್ಬರು ಒಟ್ಟು ನಾಲ್ಕು ಜನ ಶಿಕ್ಷಕರು ನೇಮಕವಾಗಬೇಕು.

samachara.com

# ವಿವರಣೆ

ರಾಜ್ಯ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ನೀತಿಯಂತೆ ಒಂದರಿಂದ ಐದನೇ ತರಗತಿವರೆಗಿನ ಶಾಲಾ ಶಿಕ್ಷಣವನ್ನು ಕಿರಿಯ ಪ್ರಾಥಮಿಕ ಶಿಕ್ಷಣ ಎಂದು ಕರೆಯಲಾಗಿದೆ. ಮಗುವಿನ ಶೈಕ್ಷಣಿಕ ಜೀವನದಲ್ಲಿ ಪ್ರಾಥಮಿಕ ಶಿಕ್ಷಣ ಬಹಳ ಪ್ರಮುಖವಾದದು. ಸಂವಿಧಾನದ ಆಶಯದಂತೆ, ಸರ್ವರಿಗೂ ಶಿಕ್ಷಣ ನೀಡುವ ಉದ್ದೇಶದಿಂದ ಸರ್ಕಾರಗಳು ಕಾಲಮಿತಿ ಶೈಕ್ಷಣಿಕ ಯೋಜನೆಗಳನ್ನು ಹಮ್ಮಿಕೊಂಡು ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಾ ಬಂದಿವೆ. ಪ್ರತಿ ಜನವಸತಿ ಪ್ರದೇಶದಲ್ಲಿ ಕಿರಿಯ ಪ್ರಾಥಮಿಕ ಶಾಲೆಗಳನ್ನು ಆರಂಭಿಸಿದೆ. ಆದರೆ, ಸದರಿ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯುತ್ತಿದೆಯೇ? ದೊರೆಯದಿದ್ದಲ್ಲಿ ಕಾರಣಗಳೇನು? ಕೈ ಗೊಳ್ಳಬೇಕಾದ ಕ್ರಮಗಳೇನು? ಎಂಬ ಇತ್ಯಾದಿ ಅಂಶಗಳ ಕುರಿತು ಗಮನ ನೀಡುತ್ತಿಲ್ಲ. ತತ್ಪರಿಣಾಮವಾಗಿ ಗ್ರಾಮೀಣ ಸಮುದಾಯದ ಹಾಗೂ ಸರ್ಕಾರಿ ಶಾಲೆಗಳಲ್ಲಿ ಕಲಿಯುವಂತಹ ೧ ರಿಂದ ೫ನೇ ತರಗತಿಯ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯುತ್ತಿಲ್ಲ. ಪ್ರಸ್ತುತ ವ್ಯವಸ್ಥೆಯ ವಸ್ತುಸ್ಥಿತಿಯನ್ನು ಈ ಕೆಳಗಿನಂತೆ ವಿವರಿಸಬಹುದಾಗಿದೆ.

ಒಂದರಿಂದ ೫ನೇ ತರಗತಿಯವರೆಗಿನ ಕಿರಿಯ ಪ್ರಾಥಮಿಕ ಪಾಠಶಾಲೆಗಳಲ್ಲಿ ಪ್ರಸ್ತುತ ಮೂರು ರೀತಿಯ ಬೋಧನಾ/ಕಲಿಕಾ ವಿಧಾನಗಳನ್ನು ಕಾಣಬಹುದು. ಅವುಗಳೆಂದರೆ;

೧. ಒಂದರಿಂದ ೩ನೇ ತರಗತಿಗೆ “ನಲಿ–ಕಲಿ” ಯೋಜನಾ ಪದ್ಧತಿ

೨. ೪ನೇ ತರಗತಿಗೆ “ಕಲಿ–ನಲಿ” ಯೋಜನಾ ಪದ್ಧತಿ

೩. ೫ನೇ ತರಗತಿಗೆ ಚೈತನ್ಯ ಮಾದರಿಯ ಬೋಧನ ವಿಧಾನ.

samachara.com

ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಶಿಕ್ಷಕರ ನೇಮಕವಾಗುತ್ತಿದೆ. ಪ್ರಸ್ತುತ ಆರ್‌ಟಿಇ ಕಾಯ್ದೆ ಅನ್ವಯ, ಒಂದನೇ ತರಗತಿಯಿಂದ ಐದನೇ ತರಗತಿಗೆ ಅರವತ್ತರವರೆಗೆ ಇಬ್ಬರು; ಅರವತ್ತೊಂದರಿಂದ ತೊಂಬತ್ತರವರೆಗೆ ಮೂರು; ತೊಂಬತ್ತೊಂದರಿಂದ ನೂರಿಪ್ಪತರವರೆಗೆ ನಾಲ್ಕು; ನೂರ ಇಪ್ಪತ್ತೊಂದರಿಂದ ಇನ್ನೂರರ ನಡುವೆ ಐದು; ನೂರೈವತ್ತು ಮಕ್ಕಳಿಗೂ ಮೇಲ್ಪಟ್ಟಾಗ ಐದು ಶಿಕ್ಷಕರು ಮತ್ತು ಒಬ್ಬರು ಮುಖ್ಯೋಪಾಧ್ಯಾಯರು ಮತ್ತು ಇನ್ನೂರು ಮಕ್ಕಳಿಗೂ ಮೇಲ್ಪಟ್ಟ ನಂತರ ವಿದ್ಯಾರ್ಥಿ–ಶಿಕ್ಷಕರ ಪ್ರಮಾಣಾನುಪಾತ (ಮುಖ್ಯೋಪಾಧ್ಯಾಯರನ್ನು ಹೊರತುಪಡಿಸಿ) ನಲವತ್ತನ್ನು ಮೀರುವಂತಿಲ್ಲ.

ಆದರೆ, ನಮಗೆಲ್ಲ ತಿಳಿದಿರುವಂತೆ, ತರಗತಿವಾರು–ವಿಷಯವಾರು ಶಿಕ್ಷಕರಿಲ್ಲದೆ ಮಗು ಗುಣಮಟ್ಟದ ಶಿಕ್ಷಣ ಹೊಂದಲು ಸಾಧ್ಯವೇ? ಇದೊಂದು ಅವೈಜ್ಞಾನಿಕ ನೀತಿಯಲ್ಲವೇ? ಮಕ್ಕಳ ಸಂಖ್ಯೆ ಎಷ್ಟೇ ಇದ್ದರೂ, ತರಗತಿವಾರು ಹಾಗೂ ವಿಷಯವಾರು ಬೋಧನೆ ನಡೆಯಲೇ ಬೇಕಲ್ಲವೇ? ಮಕ್ಕಳ ಸಂಖ್ಯೆ ಕಡಿಮೆಯಿದೆ ಎಂದು ವಿವಿಧ ವಿಷಯಗಳನ್ನು ಬೋಧಿಸುವ ಪ್ರಮಾಣವನ್ನು ಕಡಿಮೆ ಮಾಡಲಾದೀತೆ? ಈ ಅಂಶವನ್ನು ಆಧಾರವಾಗಿಟ್ಟುಕೊಂಡರೆ, ನಮ್ಮ ರಾಜ್ಯದ ಬಹುತೇಕ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಒಂದು ಅಥವಾ ಎರಡು ಶಿಕ್ಷಕರು ೫ ತರಗತಿಗಳಿಗೆ ೧೭ ವಿಷಯಗಳನ್ನು ಬೋಧಿಸಲು ಸಾಧ್ಯವೇ?

ಮುಂದುವರಿದು, ಒಂದನೇ ತರಗತಿಯಿಂದ ಐದನೇ ತರಗತಿಯವರೆಗಿನ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಬಹುತೇಕ ಇಬ್ಬರು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದು, ಮುಖ್ಯ ಶಿಕ್ಷಕರಿಗೆ ಹೆಚ್ಚಿನ ಜವಾಬ್ದಾರಿಯಾಗಿ ಇಲಾಖೆಗೆ ಮಾಹಿತಿ ಸಲ್ಲಿಸುವುದು, ತರಬೇತಿಗಳು, ಕಟ್ಟಡ ಕಾಮಗಾರಿ ಮತ್ತು ದುರಸ್ಥಿ, ಬಿಸಿಯೂಟ ನಿರ್ವಹಣೆ, ಜನಗಣತಿ, ಚುನಾವಣಾ ಕೆಲಸ, ಕ್ಷೀರ ಭಾಗ್ಯ ಯೋಜನೆ ಇತ್ಯಾದಿಗಳನ್ನು ನೀಡಲಾಗಿದೆ. ಈ ಬೋಧಕೇತರ ಕೆಲಸಗಳ ಒತ್ತಡದ ನಡುವೆ ಶಿಕ್ಷಕರು ಬಳಲಿದ್ದಾರೆ. ಮಹಿಳಾ ಶಿಕ್ಷಕರ ಸ್ಥಿತಿ ಇನ್ನೂ ಶೋಚನೀಯವಾಗಿದೆ. ಬೋಧನೆಗಿಂತ ಬೋಧಕೇತರ ಕೆಲಸವೇ ಪ್ರಧಾನವಾಗಿರುವ ಈ ವ್ಯವಸ್ಥೆಯಲ್ಲಿ ಶಿಕ್ಷಕರು ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಲು ಸಾಧ್ಯವೇ? ಸರ್ಕಾರಿ ಶಾಲೆ ಹೇಗೆ ತಾನೇ ಉಳಿದು ಬೆಳೆದೀತು?

ಮೂಲ ಸೌಕರ್ಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಶಾಲೆಗಳಲ್ಲಿ ಶುದ್ಧ ಕುಡಿಯುವ ನೀರು, ಬಳಕೆಯುಕ್ತ ಶೌಚಾಲಯಗಳು, ಆಟದ ಮೈದಾನ, ಪ್ರಯೋಗಾಲಯ,

samachara.com

ಗ್ರಂಥಾಲಯ, ಊಟದ ಕೋಣೆ ಸಹಿತ ಅಡುಗೆ ಕೊಠಡಿ ಇತ್ಯಾದಿ ಇಲ್ಲವೆಂಬುದು ನಾವು ಕಂಡ ಸತ್ಯ.

ಕೊನೆಯದಾಗಿ, ಇಲಾಖಾ ಮೇಲ್ವಿಚಾರಣಾ ವ್ಯವಸ್ಥೆಯಂತೂ ಗೊಂದಲಮಯ ವಾಗಿದೆ. ಸಿಆರ್‌ಪಿ, ಬಿಆರ್‌ಪಿ, ಬಿಆರ್‌ಸಿ, ಬಿಇಒ, ಡಿಡಿಪಿಐ (ಆಡಳಿತ) ಮತ್ತು ಡಿಡಿಪಿಐ (ಅಭಿವೃದ್ಧಿ) ಹಂತದ ಅಧಿಕಾರಿಗಳ ಕಾರ್ಯವ್ಯಾಪ್ತಿಯನ್ನು ನಿಖರವಾಗಿ ಗುರುತಿಸಿ ಲಿಖಿತವಾಗಿ ತಿಳಿಸಿಲ್ಲ. ಶಾಲೆಗೆ ಭೇಟಿ ನೀಡಿದಾಗ ಯಾವ ವಿಷಯದ ಕಡೆಗೆ ಯಾವ ಹಂತದ ಅಧಿಕಾರಿ ಎಷ್ಟು ಗಮನಹರಿಸಬೇಕೆಂಬುದು ತಿಳಿಯದೆ ಒಬ್ಬರು ಮಾಡುವ ಕೆಲಸವನ್ನೇ ಮತ್ತೊಬ್ಬರು ಮಾಡುವುದು, ಏನು ಮಾಡಬೇಕೆಂಬುದು ತಿಳಿಯದೆ ಅಧಿಕಾರ–ಜವಾಬ್ದಾರಿಯ ವ್ಯಾಪ್ತಿ ಮೀರಿ ವರ್ತಿಸುವುದು ಮತ್ತು ಈ ಮೂಲಕ ಶಿಕ್ಷಕರನ್ನು ಪ್ರೇರೇಪಿಸುವ ಬದಲು ಅವರ ನೈತಿಕತೆಯನ್ನು ಕುಗ್ಗಿಸಿ ವೃತ್ತಿಪರ ದಕ್ಷತೆಗೆ ಧಕ್ಕೆ ತಂದ ಸಂದರ್ಭಗಳೇ ಹೆಚ್ಚು.

ಒಟ್ಟಾರೆ, ಕನಿಷ್ಠ ತರಗತಿಗೊಬ್ಬ–ವಿಷಯಕ್ಕೊಬ್ಬ ಶಿಕ್ಷಕರಿಲ್ಲದಿರುವುದು, ತರಗತಿಗೊಂದು ಕೊಠಡಿಯಿಲ್ಲದಿರುವುದು, ವಿವಿಧ ರೀತಿಯ ಬಹುವರ್ಗದ ಕಲಿಕಾ ಯೋಜನೆ, ಮುಂದಾಲೋಚನೆಯೇ ಇಲ್ಲದೆ ಪರಿಮಾಣಾತ್ಮಕವಾಗಿ ಶಾಲೆಗಳ ಸಂಖ್ಯೆ ಹೆಚ್ಚಳ, ಎಲ್ಲಕ್ಕಿಂತ ಮಿಗಿಲಾಗಿ ಸರ್ಕಾರಿ ಶಾಲೆಗಳ ಪಕ್ಕದಲ್ಲಿಯೇ ಖಾಸಗಿ ಶಾಲೆಗಳಿಗೆ ಅನುಮತಿ ನೀಡುವ ಸರ್ಕಾರದ ನೀತಿ ಇತ್ಯಾದಿ ಸರ್ಕಾರಿ ಶಾಲೆಗಳನ್ನು ಅತ್ಯಂತ ಶೋಚನೀಯ ಪರಿಸ್ಥಿತಿಗೆ ತಳ್ಳಿವೆ. ಮಕ್ಕಳ ದಾಖಲಾತಿ ಗಣನೀಯವಾಗಿ ಇಳಿಮುಖವಾಗಲು ಕಾರಣವಾಗಿದೆ. ಮತ್ತೊಂದೆಡೆ, ಶಿಕ್ಷಣದ ಖಾಸಗೀಕರಣ, ವ್ಯಾಪಾರೀಕರಣ ಮತ್ತು ಶಿಕ್ಷಣವನ್ನು ಮಾರಾಟದ ಸರಕನ್ನಾಗಿಸುವ ಕೆಲಸ ಅತಿ ವೇಗದಿಂದ ಸಾಗುತ್ತಿದೆ.

samachara.com

ಉಳಿದಂತೆ ಕಿರಿಯ ಪ್ರಾಥಮಿಕ ಹಂತವು ೧,೨,೩ ಮತ್ತು ೪ ನೇ ತರಗತಿಗಳನ್ನು ಮಾತ್ರ ಒಳಗೊಂಡು ಈಗಿನ ವ್ಯವಸ್ಥೆಯಲ್ಲಿರುವ ೫ ನೇ ತರಗತಿಯನ್ನು ಹಿರಿಯ ಪ್ರಾಥಮಿಕ ಶಾಲೆಗೆ ಸೇರಿಸಲಾಗುತ್ತದೆ. ೧, ೨, ೩ ಮತ್ತು ೪ನೇ ತರಗತಿಗಳು ಪ್ರಾಥಮಿಕ ಶಿಕ್ಷಣದ ಭಾಗವಾಗಿ ಮುಂದುವರಿಯುತ್ತವೆ. ಇಲ್ಲಿ ವಿಷಯಕೊಬ್ಬ ಶಿಕ್ಷರಂತೆ ಇಬ್ಬರು ಭಾಷಾ ಶಿಕ್ಷಕರು (ಒಬ್ಬರು ಆಂಗ್ಲ ಭಾಷೆ ಮತ್ತೊಬ್ಬರು ಮಾತೃ ಭಾಷೆ), ಪರಿಸರ ಅಧ್ಯಯನಕ್ಕಾಗಿ ಒಬ್ಬರು ಮತ್ತು ಗಣಿತಕ್ಕಾಗಿ ಒಬ್ಬರು ಒಟ್ಟು ಕನಿಷ್ಠ ೪ ಜನ ಶಿಕ್ಷಕರಿರಬೇಕು. ಜೊತೆಗೆ ಪೂರ್ವ–ಪ್ರಾಥಮಿಕ ಹಾಗು ಪ್ರಾಥಮಿಕ ಸೇರಿದಂತೆ ಒಬ್ಬರು ಪ್ರಾಂಶುಪಾಲರು ಅಥವಾ ಮುಖ್ಯ ಶಿಕ್ಷಕರು ಈ ಹಂತದ ಪೂರ್ಣ

ಜವಾಬ್ದಾರಿಯನ್ನು ನಿರ್ವಹಿಸಬೇಕು. ಬೋಧಕೇತರ ಮತ್ತು ಕಛೇರಿ ಕೆಲಸಗಳಿಗೆ ಓರ್ವ 'ಎಸ್‌ಡಿಸಿ' ಮತ್ತು ಶಾಲಾ ಸ್ವಚ್ಛತೆಗಾಗಿ ಓರ್ವ 'ಡಿ' ದರ್ಜೆ ನೌಕರ ನೇಮಕಾತಿಯಾಗಬೇಕು.

ಪೂರ್ವ–ಪ್ರಾಥಮಿಕ ಹಂತ ಪ್ರಾಥಮಿಕ ಶಾಲಾ ವ್ಯಾಪ್ತಿಗೆ ಒಳಪಡುವುದರಿಂದ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಿ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯಾವಾಗುತ್ತದೆ. ಜೊತೆಗೆ ಸುಸಜ್ಜಿತ ಭೌತಿಕ ವ್ಯವಸ್ಥೆಯನ್ನು ಕಲ್ಪಿಸಬೇಕು. ಇದಕ್ಕಾಗಿ ಈ ಹಂತದಲ್ಲಿ ಕನಿಷ್ಠ ಒಂದು ಎಕರೆ ಭೂಮಿಯಿದ್ದು, ಕನಿಷ್ಠ ೭ ತರಗತಿ ಕೊಠಡಿಗಳು; ಮುಖ್ಯ ಶಿಕ್ಷಕರ ಕೊಠಡಿ; ಸಿಬ್ಬಂದಿ ಕೊಠಡಿ; ಮಕ್ಕಳ ವಿಶ್ರಾಂತಿ ಕೋಣೆ; ಊಟದ ಕೋಣೆ ಸಹಿತ ಅಡುಗೆ ಕೋಣೆ; ಶೌಚಾಲಯ; ಶುದ್ಧ ಕುಡಿಯುವ ನೀರು; ಗ್ರಂಥಾಲಯ; ಒಳಾಂಗಣ ಹಾಗೂ ಹೊರಾಂಗಣ ಕ್ರೀಡಾಂಗಣ; ಕಾಂಪೌಂಡ್ ಗೋಡೆ; ಆಟ–ಪೀಠೋಪಕರಣಗಳು; ಬಾಲ ಉದ್ಯಾನ ಸಾಮಾಗ್ರಿಗಳು; ವಿದ್ಯುಚ್ಛಕ್ತಿನ್ನೊಳಗೊಂಡಂತೆ ಉಳಿದ ಎಲ್ಲಾ ಭೌತಿಕ ಸೌಲಭ್ಯಗಳನ್ನು ಹೊಂದಿರಬೇಕು. ಈ ಎಲ್ಲಾ ಸೌಲಭ್ಯಗಳು ತಮ್ಮ ನೆರೆಹೊರೆಯ ಸರ್ಕಾರಿ ಶಾಲೆಯಲ್ಲಿಯೇ ದೊರೆತಾಗ ತಂದೆ–ತಾಯಿಗಳಿಗೆ ತಮ್ಮ ಮಕ್ಕಳನ್ನು ಖಾಸಗಿ ಶಾಲೆಗೆ ಸೇರಿಸುವ ಅನಿವಾರ್ಯತೆ ಉದ್ಭವಿಸುವುದಿಲ್ಲ ಪರಿಣಾಮ ಶಿಕ್ಷಣದ ಖಾಸಗೀಕರಣ ಮತ್ತು ವ್ಯಾಪಾರೀಕರಣವನ್ನು ಹತ್ತಿಕ್ಕಿ ಸರ್ಕಾರಿ ಶಾಲೆಗಳನ್ನು ಮುಚ್ಚುವ/ವಿಲೀನಗೊಳಿಸುವ ಸಮಸ್ಯೆಗೆ ಪರಿಹಾರ ಕಂಡುಕೊಳ್ಳ ಬಹುದಾಗಿದೆ.

ಈ ಹಂತದಲ್ಲಿ ಆರೋಗ್ಯ ಕಾರ್ಯಕರ್ತರಿರುವುದರಿಂದ ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನು ೪ ನೇ ವರ್ಷದಿಂದಲೇ ಶಾಲಾ ವ್ಯಾಪ್ತಿಗೆ ಒಳಪಡಿಸಿ ಪೂರ್ವ–ಪ್ರಾಥಮಿಕ ಶಿಕ್ಷಣದ ಹಂತದಿಂದಲೇ ಮುಖ್ಯವಾಹಿನಿಗೆ ಸಮನ್ವಯಗೊಳಿಸಬಹುದಾದ ಕೆಲಸವನ್ನು ಯಶಸ್ವಿಯಾಗಿ ಸಾಧಿಸಬಹುದಾಗಿದೆ.ಪೂರ್ವ ಪ್ರಾಥಮಿಕ ಹಂತವನ್ನು ಕಿರಿಯ ಪ್ರಾಥಮಿಕ ಶಾಲೆಗಳೊಂದಿಗೆ ವಿಲೀನಗೊಳಿಸುವುದರಿಂದ ಉತ್ತಮ ರೀತಿಯ ಕಲಿಕಾ ಪರಿಸರ ನಿರ್ಮಾಣಗೊಂಡು ಪರಸ್ಪರ ಸಹ ಸಂಬಂಧ ಶಿಕ್ಷಣ ಸಾಧ್ಯವಾಗಿ ತಾರತಮ್ಯವಿಲ್ಲದ ಗುಣಾತ್ಮಕ ಕಲಿಕೆ ಸಾಧ್ಯವಾಗುತ್ತದೆ.

samachara.com

samachara.com

# ಶಿಫಾರಸು–೧೯

**ಸಮ ಸಮಾಜಕ್ಕಾಗಿ ಗ್ರಾಮೀಣ ಪ್ರದೇಶದಲ್ಲಿ ಪಂಚಾಯತಿ ಹಾಗು ಪಟ್ಟಣ/ ನಗರ ಪ್ರದೇಶಗಳಲ್ಲಿ ವಾರ್ಡ್ ಮಟ್ಟದ ಸುಸಜ್ಜಿತ ನೆರೆಹೊರೆಯ ಸಮಾನ ಸಾರ್ವಜನಿಕ ಶಾಲೆಗಳನ್ನು ಕೇಂದ್ರ ಸರ್ಕಾರದ ಕೇಂದ್ರೀಯ ಶಾಲೆಯ ಮಾದರಿಯಲ್ಲಿ ಸ್ಥಾಪಿಸಬೇಕು.**

samachara.com

# ವಿವರಣೆ

ಈಗಿನ ವ್ಯವಸ್ಥೆಯಲ್ಲಿ ೧ ರಿಂದ ೭ನೇ ತರಗತಿ ಮತ್ತು ಉನ್ನತೀಕರಿಸಿ ೮ನೇ ತರಗತಿ ಹೊಂದಿರುವ ಶಾಲೆಗಳನ್ನು 'ಹಿರಿಯ ಪ್ರಾಥಮಿಕ ಶಾಲೆ' ಎಂದು ಕರೆಯಲಾಗಿದೆ. ಆದರೆ ಈ ಶಾಲೆಗಳ ಪರಿಸ್ಥಿತಿ ಕಿರಿಯ ಪ್ರಾಥಮಿಕ ಶಾಲೆಗಳಿಗಿಂತ ಏನೂ ಭಿನ್ನವಾಗಿಲ್ಲ. ಬದಲು ಇನ್ನಷ್ಟು ಸಮಸ್ಯೆಗಳಿಂದಾಗಿ ಮಕ್ಕಳು ಗುಣಾತ್ಮಕ ಹಾಗೂ ಸಮಾನ ಶಾಲಾ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ.

ಒಂದರಿಂದ ೭ನೇ ತರಗತಿಯವರೆಗಿನ ಶಾಲೆಗಳಲ್ಲಿ ೧ ರಿಂದ ೪ನೇ ತರಗತಿಗಳನ್ನು ಕಿರಿಯ ಮತ್ತು ೫ ರಿಂದ ೭ನೇ ತರಗತಿಗಳನ್ನು ಹಿರಿಯ ಪ್ರಾಥಮಿಕ ಶಾಲೆಗಳೆಂದು ವಿಭಾಗಿಸಲಾಗಿದೆ. ಈ ಹಿಂದೆ ಇದ್ದ ಫೀಡರ್ ಶಾಲೆಯ ನೀತಿಯ ಬದಲು ಕಿರಿಯ ಪ್ರಾಥಮಿಕ ಶಾಲೆಗಳನ್ನು ಉನ್ನತೀಕರಿಸುತ್ತಾ ಹಿರಿಯ ಪ್ರಾಥಮಿಕ ಶಾಲೆಗಳನ್ನಾಗಿ ಮಾರ್ಪಡಿಸಲಾಯಿತು.ಪರಿಣಾಮ ನಾಲ್ಕೈದು ಕಿರಿಯ ಪ್ರಾಥಮಿಕ ಫೀಡರ್ ಶಾಲೆಗಳಿಂದ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಬರುತ್ತಿದ್ದ ಮಕ್ಕಳ ಸಂಖ್ಯೆ ಗಣನೀಯವಾಗಿ ಇಳಿಮುಖವಾಗಿ ಕ್ರಮೇಣ ಕಲಿಸುವ ಶಿಕ್ಷಕರ ಸಂಖ್ಯೆಯೂ ಇಳಿಮುಖವಾಯಿತು. ಹಲವು ಶಾಲೆಗಳಲ್ಲಿ ೧ ರಿಂದ ೭ನೇ ತರಗತಿಯವರೆಗೆ ೩ ಅಥವಾ ೪ ಜನ ಶಿಕ್ಷಕರು ೭ ತರಗತಿಗಳಿಗೆ ಪಾಠ ಕಲಿಸುತ್ತಿದ್ದು ಸುಮಾರು ೨೭ ರಿಂದ ೩೦ ವಿಷಯಗಳನ್ನು ಬೋಧಿಸುತ್ತಿದ್ದಾರೆ.

ಶಾಲೆಯಲ್ಲಿರುವ ಮೂರು/ನಾಲ್ಕು ಶಿಕ್ಷಕರ ಪೈಕಿ ಮುಖ್ಯ ಶಿಕ್ಷಕರು ಕಾಮಾಗಾರಿ, ಆಡಳಿತ, ದುರಸ್ಥಿ ಇತ್ಯಾದಿ ಹತ್ತು ಹಲವು ಜವಾಬ್ದಾರಿ ನಿರ್ವಹಿಸಿದರೆ, ಉಳಿದ ಶಿಕ್ಷಕರು ತಲಾ ೧೦ಕ್ಕಿಂತ ಹೆಚ್ಚು ವಿಷಯಗಳನ್ನು ಬೋಧಿಸುವುದರ ಜೊತೆಗೆ ಜನಗಣತಿ, ಚುನಾವಣಾ ಕೆಲಸ ಇತ್ಯಾದಿಗಳನ್ನು ನಿರ್ವಹಿಸಬೇಕು. ಬೋಧನೇತರ ಕೆಲಸ ಅತೀ ಹೊರೆಯಿಂದಾಗಿ ಶಿಕ್ಷಕರು ಅರ್ಥಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಕಲಿಸಲು ಸಾಧ್ಯವಾಗುತ್ತಿಲ್ಲ. ಪಠ್ಯ ಚಟುವಟಿಕೆಯೇ ಸಾಧ್ಯವಾಗದಿದ್ದಾಗ ಸಹಪಠ್ಯ

samachara.com

ಚಟುವಟಿಕೆಗಳ ವಿಷಯಗಳನ್ನು ಕಲಿಸುವವರಿಲ್ಲ ಮತ್ತು ಅದಕ್ಕೆ ನಿಗದಿತ ಸಮಯವೂ ಇಲ್ಲ. ಕೆಲವೊಂದು ಹೋಬಳಿ, ತಾಲ್ಲೂಕು ಮಟ್ಟದಲ್ಲಿರುವ ಶಾಲೆಗಳನ್ನು ಹೊರತುಪಡಿಸಿದರೆ, ಉಳಿದ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ದೈಹಿಕ ಶಿಕ್ಷಣ, ಸಂಗೀತ, ಚಿತ್ರಕಲೆ, ತೋಟಗಾರಿಕಾ ವಿಷಯಗಳನ್ನು ಕಲಿಸುವ ಶಿಕ್ಷಕರುಗಳಿಲ್ಲ.

ಮೂಲ ಸೌಕರ್ಯಗಳಿಗೆ ಸಂಬಂಧಿಸಿದಂತೆ, ತರಗತಿಗೊಂದು ಕೊಠಡಿ, ಪೀಠೋಪಕರಣಗಳ, ಪಾಠೋಪಕರಣ, ಶುದ್ಧ ಕುಡಿಯುವ ನೀರು, ಬಳಕೆಯುಕ್ತ ಶೌಚಾಲಯ, ಉತ್ತಮ ಗ್ರಂಥಾಲಯ, ಒಳಾಂಗಣ ಮತ್ತು ಹೊರಾಂಗಣ ಕ್ರೀಡಾಂಗಣ, ಕ್ರೀಡಾ ಸಾಮಾಗ್ರಿ, ಕಂಪ್ಯೂಟರ್ ಪ್ರಯೋಗಾಲಯ, ಸುಸಜ್ಜಿತ ಪ್ರಯೋಗಶಾಲೆ, ರಂಗಮಂದಿರ ಇತ್ಯಾದಿ ವ್ಯವಸ್ಥೆ ಇಲ್ಲದ ಕಾರಣ ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ನೀಡಲು ಆಗುತ್ತಿಲ್ಲ. ಶಿಕ್ಷಣ ಇಲಾಖೆಯು ತೋರಿಸುವ ದಾಖಲೆಗಳನ್ನು ಇಟ್ಟುಕೊಂಡು ಪ್ರದೇಶವಾರು ಪರಿಶೀಲಿಸಿದಾಗ ಶಾಲೆಗಳಲ್ಲಿ ಶೌಚಾಲಯಗಳಿದ್ದು ಬಳಕೆಗೆ ಉಪಯೋಗಿಸುತ್ತಿಲ್ಲ, ಗ್ರಂಥಾಲಯಗಳಿದ್ದೂ ಉಪಯೋಗಕ್ಕೆ ಬಾರದ ಗ್ರಂಥಗಳು, ಗಣಕಯಂತ್ರಗಳಿದ್ದೂ ಬಳಸಲು ಯೋಗ್ಯವಾಗಿಲ್ಲ ಹಾಗು ಬಳಸುವ ತಜ್ಞ ಶಿಕ್ಷಕರಿಲ್ಲ ಮತ್ತು ವಿದ್ಯುತ್ ಕೊರತೆ ಇತ್ಯಾದಿ ಸಮಸ್ಯೆಗಳಿಂದ ಉದ್ದೇಶವೇ ವಿಫಲವಾಗಿರುವುದು ಕಂಡುಬರುತ್ತಿದೆ.

ಇದು ಸಾಲದೆಂಬಂತೆ ರಾಜ್ಯದಲ್ಲಿ ವಿವಿಧ ಪಠ್ಯಕ್ರಮಗಳಿಗೆ ನೊಂದಾಯಿಸಿ ಕೊಂಡಿರುವ ಶ್ರೇಣೀಕೃತ ಶಾಲಾ ವ್ಯವಸ್ಥೆ ಜಾರಿಯಲ್ಲಿದೆ. ಅವುಗಳೆಂದರೆ, ಅಂತರಾಷ್ಟ್ರೀಯ ಶಾಲೆಗಳು; ಐಸಿಎಸ್‌ಇ; ಸಿಬಿಎಸ್‌ಇ; ಪ್ರತಿಷ್ಠಿತ ಖಾಸಗಿ ಅನುದಾನರಹಿತ ಆಂಗ್ಲ ಮಾಧ್ಯಮ ಶಾಲೆಗಳು; ಸಣ್ಣ–ಪುಟ್ಟ ಖಾಸಗಿ ಅನುದಾನರಹಿತ ಆಂಗ್ಲ ಮಾಧ್ಯಮ ಶಾಲೆಗಳು; ಅನುದಾನಿತ ಶಾಲೆಗಳು; ಸ್ಥಳೀಯ ಸರ್ಕಾರದ ಶಾಲೆಗಳು; ಸರ್ಕಾರಿ ಶಾಲೆಗಳು ಇತ್ಯಾದಿ. ಹಲವು ಬಗೆಯ ಖಾಸಗಿ ಅನುದಾನರಹಿತ ವ್ಯಾಪಾರೀ ಶಾಲೆಗಳೊಂದಿಗೆ ಸರ್ಕಾರಿ ಶಾಲೆಗಳು ಅನಾರೋಗ್ಯ ಮತ್ತು ಅನಗತ್ಯ ನಿರರ್ಥಕ ಪೈಪೋಟಿ ಎದುರಿಸಬೇಕಾಗಿದೆ. ಮಾರುಕಟ್ಟೆಯ ವಿಸ್ತರಣೆಗೆ ವಿಫುಲ ಅವಕಾಶ ಮತ್ತು ಗರಿಷ್ಠ ಲಾಭವೇ ಗುಣಮಟ್ಟದ ಶಿಕ್ಷಣ ಎಂದು ಅರ್ಥೈಸಿ ಮಕ್ಕಳನ್ನು ಅನಾರೋಗ್ಯಕರ ಅಂಕಗಳ ಸ್ಪರ್ಧೆಗೆ ಈಡುಮಾಡುತ್ತದೆ.

ಈ ರೀತಿಯ ಶಿಕ್ಷಣ ವ್ಯವಸ್ಥೆಯಿಂದ ಆರ್‌ಟಿಇ ಕಾಯ್ದೆ ಸೆಕ್ಷನ್ ೨೯ ರಲ್ಲಿ ಹೇಳುವ ಸಂವಿಧಾನದಲ್ಲಿ ಮೌಲ್ಯಗಳ ಅನುಗುಣವಾದ; ಮಕ್ಕಳ ಸರ್ವಾಂಗೀಣ ಅಭಿವೃದ್ಧಿ ಪೂರಕವಾದ; ಮಕ್ಕಳ ಜ್ಞಾನ, ಸಾಮರ್ಥ್ಯ ಮತ್ತು ಪ್ರತಿಭೆಯ ವರ್ಧನೆಗೆ



samachara.com

ಸಹಾಯವಾಗುವ; ಪೂರ್ಣ ಪ್ರಮಾಣದಲ್ಲಿ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳ ವಿಕಸನಗೊಳಿಸುವ; ಶಿಶು ಸ್ನೇಹಿ ಮತ್ತು ಶಿಶು ಕೇಂದ್ರೀಕೃತ ವಾತಾವರಣದಲ್ಲಿ, ಚಟುವಟಿಕೆಗಳು ಅನ್ವೇಷಣೆ ಮತ್ತು ಶೋಧನೆ ಮೂಲಕ ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಮಕ್ಕಳ ಮಾತೃಭಾಷೆಯಲ್ಲಿ ಭಯ, ಆಘಾತ ಹಾಗೂ ಆತಂಕವಿಲ್ಲದೆ ಮತ್ತು ಮಗು ಮುಕ್ತವಾಗಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ನೆರವಾಗಬಲ್ಲ ಗುಣಮಟ್ಟದ ಶಿಕ್ಷಣವನ್ನು ಹೊಂದಲು ಸಾಧ್ಯವೇ? ಇಂತಹ ತಾರತಮ್ಯ ವ್ಯವಸ್ಥೆಯಲ್ಲಿ ೭ ಅಥವಾ ೮ನೇ ತರಗತಿಯವರಗೆ ಎಲಿಮೆಂಟರಿ ಶಿಕ್ಷಣವನ್ನು ಪೂರೈಸಿ ಪ್ರೌಢಶಿಕ್ಷಣ ಪಡೆಯಲು ಮಗು ಹೇಗೆ ತಾನೆ ಸಿದ್ಧವಾಗುತ್ತದೆ!

ಈ ವ್ಯವಸ್ಥೆಯ ಬದಲು, ಈಗಿರುವ ಮಾಧ್ಯಮಿಕ, ಪ್ರೌಢ ಹಾಗು ಪದವಿ–ಪೂರ್ವ ಶಿಕ್ಷಣವನ್ನು ಸಮ್ಮಿಲನಗೊಳಿಸಿ ೫ ರಿಂದ ೧೨ ನೇ ತರಗತಿವರೆಗಿನ ಶಿಕ್ಷಣವನ್ನು ನೆರೆಹೊರೆಯ ತತ್ವದ ಆಧಾರದಲ್ಲಿ ಸಮಾನ ಶಾಲೆಯ ಮೂಲಕ ಒದಗಿಸಲು ಆಯಾ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮ ಪಂಚಾಯತಿ ಕೇಂದ್ರದಲ್ಲಿ ಹಾಗೂ ಪಟ್ಟಣ/ನಗರ ಪ್ರದೇಶಗಳ ವ್ಯಾಪ್ತಿಯ ವಾರ್ಡ್ ಮಟ್ಟದಲ್ಲಿ **ಸಮಾನ ಸಾರ್ವಜನಿಕ ಶಾಲೆ** ಸ್ಥಾಪಿಸಬೇಕು. ಇವುಗಳನ್ನು ಗ್ರಾಮ ಪಂಚಾಯತಿ/ವಾರ್ಡ್ ಮಟ್ಟದ ಸಾರ್ವಜನಿಕ/ಪಬ್ಲಿಕ್ ಶಾಲೆಗಳೆಂದು ಕರೆಯಬೇಕು. ಈ ಶಾಲೆಗಳು ೫ ರಿಂದ ೧೨ ನೇ ತರಗತಿಯ ವರೆಗಿನ ತರಗತಿಗಳನ್ನು ಒಳಗೊಂಡಿದ್ದು ಯಾವುದೇ ರೀತಿಯ ತಾರತಮ್ಯ ಭೇದ–ಭಾವಗಳಿಲ್ಲದೆಯೇ ಸಮಾನ ಶಾಲಾ ಶಿಕ್ಷಣವನ್ನು ನೀಡುವ ಸುಸಜ್ಜಿತ ಭೌತಿಕ ವ್ಯವಸ್ಥೆಯನ್ನು ಹೊಂದಿರಬೇಕು.ಇದಕ್ಕಾಗಿ ಗ್ರಾಮ ಪಂಚಾಯತಿ / ವಾರ್ಡ್ ಹಂತದ ಸಮಾನ ಸಾರ್ವಜನಿಕ ಶಾಲೆಗಳಿಗೆ ಕನಿಷ್ಠ ಪಕ್ಷ ೩ ಎಕರೆಗಳಷ್ಟು ಜಮೀನು ಇರಲೇ ಬೇಕು. ಈ ಜಮೀನಿನಲ್ಲಿ, ತರಗತಿಗೊಂದು ಕೊಠಡಿ; ಪ್ರಾಂಶುಪಾಲರ ಕೊಠಡಿ; ಸಿಬ್ಬಂದಿ ವರ್ಗದ ಕೊಠಡಿ; ಕೇಂದ್ರೀಯ ವಿದ್ಯಾಲಯಗಳ ಮಾದರಿಯಲ್ಲಿ ಶಿಕ್ಷಕರು ಮತ್ತು ಇತರೆ ಸಿಬ್ಬಂದಿಗೆ ವಸತಿ;ಸುಸಜ್ಜಿತ ಕಂಪ್ಯೂಟರ್ ಲ್ಯಾಬ್; ಮಕ್ಕಳ ಸಂಖ್ಯೆಗೆ ಅನುಗುಣವಾಗಿ ನಿರಂತರ ನೀರಿನ ಲಭ್ಯತೆಯೊಂದಿಗೆ ಹೆಣ್ಣು–ಗಂಡು ಮಕ್ಕಳಿಗೆ ಮತ್ತು ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ; ಶುದ್ಧೀಕರಿಸಿದ ಕುಡಿಯುವ ನೀರಿನ ಸೌಲಭ್ಯ; ಸಭಾಂಗಣ; ವಿಶಾಲವಾದ ವಿಶ್ರಾಂತಿ ಕೊಠಡಿ; ವಿದ್ಯುಚ್ಛಕ್ತಿ; ಸುಸಜ್ಜಿತ ರಂಗ ಮಂದಿರ; ಒಳಾಂಗಣ ಹಾಗೂ ಹೊರಾಂಗಣ ಕ್ರೀಡಾಂಗಣ ವ್ಯವಸ್ಥೆ; ಗ್ರಂಥಾಲಯದ ಮತ್ತು ವಾಚನಾಲಯ ಸೌಲಭ್ಯ;ವಿಶಾಲವಾದ ಶಾಲಾ ಪರಿಮಿತಿ ಪ್ರದೇಶವನ್ನೊಳಗೊಂಡ ಕಾಂಪೌಂಡ್; ವಿಶೇಷ ಅಗತ್ಯವುಳ್ಳ ಮಕ್ಕಳಿಗೆ

samachara.com

ಅನುಕೂಲವಾಗುವ ರೀತಿಯಲ್ಲಿ ರ್‍ಯಾಂಪ್ಸ್ ವ್ಯವಸ್ಥೆ; ಮಕ್ಕಳನ್ನು ಕರೆತರಲು ಅಗತ್ಯ ಸಾರಿಗೆ ವ್ಯವಸ್ಥೆ; ವ್ಯವಸ್ಥಿತವಾದ ಊಟದ ಕೋಣೆ ಸಹಿತ ಅಡುಗೆ ಕೋಣೆ; ಶಿಕ್ಷಕರಿಗೆ ಹಾಗೂ ಮಕ್ಕಳಿಗೆ ವಸತಿ ನಿಲಯಗಳು; ಸುಸಜ್ಜಿತ ಪ್ರಯೋಗಾಲಯ; ಸ್ಕೌಟ್–ಎನ್‌ಸಿಸಿ–ಸೇವಾದಳ ಘಟಕಗಳ ಕೊಠಡಿ; ಕ್ರಾಫ್ಟ್ ಪರಿಕರಗಳನ್ನೊಳಗೊಂಡ ಕೊಠಡಿ; ತೋಟಗಾರಿಕಾ ಶಿಕ್ಷಣಕ್ಕೆ ಸಂಬಂಧಿಸಿದ ಕೊಠಡಿ; ದೂರವಾಣಿ, ಇಮೇಲ್ ವ್ಯವಸ್ಥೆ, ದೂರದರ್ಶನ ವ್ಯವಸ್ಥೆ;ಸಾವಯವ ಕೃಷಿ ಭೂಮಿ;ಪ್ರಥಮ ಚಿಕಿತ್ಸಾ ಕೊಠಡಿ ಮತ್ತು ಅಗ್ನಿನಂದಕದ ವ್ಯವಸ್ಥೆಗಳನ್ನೊಳಗೊಂಡಿರಬೇಕು. ನಿಜ ಅರ್ಥದಲ್ಲಿ, ಈ ಸಮಾನ ಸಾರ್ವಜನಿಕ ಶಾಲೆಗಳು ಸಂವಿಧಾನದ ಆಶಯಯದಂತೆ ದೇಶ ಕಟ್ಟುವ ಪುಟ್ಟ ಸಮಾಜಗಳಾಗಿರುತ್ತವೆ. ಈ ಮೂಲಕ ಸರ್ವರಿಗೂ ಸಮಾನ ಶಿಕ್ಷಣದ ಗುರಿ ಸಾಕಾರಗೊಂಡಂತಾಗುತ್ತದೆ.

ಈ ಹೊಸ ವ್ಯವಸ್ಥೆಯಿಂದ, ಪ್ರಾಥಮಿಕ ಶಿಕ್ಷಣದ ನಂತರ ಪ್ರೌಢ ಮತ್ತು ಕಾಲೇಜು ಶಿಕ್ಷಣವನ್ನು ಪಡೆಯಲು ಅಗತ್ಯ ಸೌಲಭ್ಯಗಳಿಲ್ಲದೆ ಶಿಕ್ಷಣದಿಂದ ವಂಚಿತರಾಗುತ್ತಿರುವ ಗ್ರಾಮೀಣ ಪ್ರದೇಶದಲ್ಲಿನ ಹೆಣ್ಣು ಮಕ್ಕಳು ತಮ್ಮ ನೆರೆಹೊರೆಯಲ್ಲಿಯೇ ಪ್ರೌಢ ಹಾಗು ಕಾಲೇಜು ಶಿಕ್ಷಣ ಪಡೆಯಲು ಸಾಧ್ಯವಾಗುತ್ತದೆ. ಹುಟ್ಟಿನಿಂದ ೧೮ ವರ್ಷ ವಯೋಮಾನದವರೆಗಿನ ಎಲ್ಲ ಮಕ್ಕಳು ಜಾತಿ, ಧರ್ಮ, ಲಿಂಗ, ವರ್ಣ, ಸಾಮಾಜಿಕ–ಆರ್ಥಿಕ ಸ್ಥಾನಮಾನದ ಹಂಗಿಲ್ಲದೆ ಸಮಾನ ಶಿಕ್ಷಣ ಪಡೆಯುವ ಗುರಿ ಸಾಕಾರ ಗೊಂಡಂತಾಗುತ್ತದೆ.

ಉದ್ದೇಶಿತ ಗ್ರಾಮ ಪಂಚಾಯತಿ/ವಾರ್ಡ್ ಮಟ್ಟದ ಪಬ್ಲಿಕ್ ಶಾಲೆಯು ೫–೧೨ನೇ ತರಗತಿಯವರೆಗೆ ಕಲಿಸುವ ವ್ಯವಸ್ಥೆಯನ್ನು ಹೊಂದಿದ್ದು ಎಲ್ಲರಿಗೂ ಏಕರೂಪ ಸಮಾನ ಗುಣಮಟ್ಟದ ಶಿಕ್ಷಣವನ್ನು ವೈವಿಧ್ಯಮಯ ಸಂಧರ್ಭೋಚಿತ ಪಠ್ಯವಸ್ತುಗಳನ್ನು ಅಳವಡಿಸಿಕೊಂಡು ಕಲಿಸುವ ಕಲಿಕಾ ವ್ಯವಸ್ಥೆಯನ್ನು ಒಳಗೊಂಡಿರಬೇಕು. ೧೨ನೇ ತರಗತಿಗೆ ಮಾತ್ರ ಅಂತಿಮ ಪಬ್ಲಿಕ್ ಪರೀಕ್ಷೆ ಇದ್ದು ಎಲ್ಲ ಮಕ್ಕಳು ಒಂದು ಹಂತದ ಶಿಕ್ಷಣದ ಗುರಿ ಮುಟ್ಟಲು ಸಾಧ್ಯವಾಗುತ್ತದೆ. ಜೊತೆಗೆ ಇಲ್ಲಿ ಎಲ್ಲಾ ವಿಷಯಗಳನ್ನು ಸಮಗ್ರವಾಗಿ ಬೋಧಿಸುವುದರಿಂದ ಯಾವುದೇ ವಿಷಯದ ಕಲಿಕೆಯಿಂದ ವಿದ್ಯಾರ್ಥಿಗಳು ವಂಚಿತರಾಗುವುದಿಲ್ಲ. ೧೨ನೇ ತರಗತಿಯವರೆಗೆ ಎಲ್ಲಾ ವಿದ್ಯಾರ್ಥಿಗಳು ಸಮಗ್ರವಾಗಿ ಎಲ್ಲಾ ವಿಷಯಗಳನ್ನು ಕಲಿತು ಮುಂದಿನ ಹಂತದಲ್ಲಿ ಸ್ವತಂತ್ರವಾಗಿ ತನ್ನ ಆಸಕ್ತಿಯ ವಿಷಯವನ್ನು ಆಳವಾಗಿ ಅಧ್ಯಯನ ಮಾಡಲು ಆಯ್ಕೆ ಮಾಡಿಕೊಳ್ಳುವ ಸಾಮರ್ಥ್ಯ, ಯೋಚನಾ ಶಕ್ತಿ, ಸ್ವತಃ ತೀರ್ಮಾನಿಸುವ–

samachara.com

ನಿರ್ಣಯಿಸುವ ಪ್ರಬುದ್ಧತೆಯನ್ನು ಬೆಳೆಸಿಕೊಳ್ಳುತ್ತಾರೆ. ಈ ಹೊಸ ಶಿಕ್ಷಣ ವ್ಯವಸ್ಥೆಯಿಂದ ಪ್ರತಿಯೊಬ್ಬ ವಿದ್ಯಾರ್ಥಿ ಎಲ್ಲಾ ವಿಷಯಗಳ ಪ್ರಾಥಮಿಕ ಜ್ಞಾನವನ್ನು ಪಡೆದು ತನಗೆ ಬೇಕೆನಿಸುವ ವಿಷಯದ ಬಗ್ಗೆ ಸಮಗ್ರವಾಗಿ ಅಧ್ಯಯನ ಮಾಡಲು ಸಾಧ್ಯವಾಗುತ್ತದೆ. ಈ ವ್ಯವಸ್ಥೆಯಲ್ಲಿ ಹುಟ್ಟಿನಿಂದ ೧೮ ವರ್ಷದವರೆಗಿನ ಶಿಕ್ಷಣವು ಉಚಿತ ಮತ್ತು ಕಡ್ಡಾಯವಾಗಿ ವಿದ್ಯಾರ್ಥಿಯು ವಾಸಿಸುವ ನೆರೆಹೊರೆಯಲ್ಲಿಯೇ ಸಾರ್ವಜನಿಕ ಸಮಾನ ಶಾಲೆಯ ವ್ಯವಸ್ಥೆಯ ಮೂಲಕ ಉತ್ಕೃಷ್ಟ ಗುಣಮಟ್ಟದ ಸೌಲಭ್ಯಗಳೊಂದಿಗೆ ಯಾವುದೇ ರೀತಿಯ ಅನಾರೋಗ್ಯಕರ ಸ್ಪರ್ಧೆಯಿಲ್ಲದೆ, ಪರೀಕ್ಷೆಗಳ ಭಯವಿಲ್ಲದೆ ನಿರಂತರ ಮೌಲ್ಯ ಮಾಪನ ಮತ್ತು ಮಾರ್ಗದರ್ಶನದ ಮೂಲಕ ಕಲಿಕೆಯ ಹೊಸ ಸಂಸ್ಕೃತಿಯನ್ನು ಹುಟ್ಟು ಹಾಕುತ್ತದೆ. ಈ ಬುನಾದಿ ಶಿಕ್ಷಣ ಪೋಷಕರಿಗೆ ಆರ್ಥಿಕವಾಗಿ ಹೊರೆಯಾಗದೆ ಮಕ್ಕಳಿಗೂ ಸಹ ಒತ್ತಡ ಹಾಗು ಭಯದ ವಾತಾವರಣವನ್ನು ನಿರ್ಮಾಣ ಮಾಡದೆ ವಿದ್ಯಾರ್ಥಿಯು ತನ್ನ ಪರಿಸರದಲ್ಲಿಯೇ ಅತ್ಯಂತ ಶ್ರೇಷ್ಠ ಗುಣಾತ್ಮಕ ಶಿಕ್ಷಣವನ್ನು ಪಡೆಯುವುದರಿಂದ ನಗರ/ಪಟ್ಟಣ ಪ್ರದೇಶಗಳಿಗೆ ಅಲೆಯುವುದು ತಪ್ಪಿದಂತಾಗುತ್ತದೆ.

ಗ್ರಾಮ ಪಂಚಾಯತಿ/ವಾರ್ಡ್ ಮಟ್ಟದ ಈ ಶಿಕ್ಷಣ ವ್ಯವಸ್ಥೆಯು ವಿಕಲ ಚೇತನ ಹಾಗೂ ವಿಶೇಷ ಅಗತ್ಯವುಳ್ಳ ಮಕ್ಕಳಿಗೂ ಸಹ ಕಲಿಕೆಗೆ ಪೂರಕವಾದಂತಹ ವಾತಾವರಣವನ್ನು ಕಲ್ಪಿಸುವುದರ ಮೂಲಕ ಅವರನ್ನೂ ಸಹ ಶಿಕ್ಷಣದ ಮುಖ್ಯವಾಹಿನಿ ಮೂಲಕ ಸಮಾಜದ ಮುಖ್ಯವಾಹಿನಿಗೆ ತರುವಂತಹ ಪ್ರಾಮಾಣಿಕ ಪ್ರಯತ್ನ ವಾಗಿರುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ ಶೋಚನೀಯ ಸ್ಥಿತಿಯಲ್ಲಿರುವ ಹಲವು ಸಾವಿರ ಹಿರಿಯ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಪದವಿ ಪೂರ್ವ ಕಾಲೇಜುಗಳಿಗೆ ಬದಲಾಗಿ ಪಂಚಾಯತಿ/ವಾರ್ಡ್‌ಗೊಂದರಂತೆ ಸುಮಾರು ೬೦೦೦ ದಿಂದ ೭೦೦೦ ಸುಸಜ್ಜಿತ (ಸಾರ್ವಜನಿಕ ಸಮಾನ ಶಾಲೆಗಳು) ಅಸ್ತಿತ್ವಕ್ಕೆ ಬಂದು ಒಂದೇ ಸೂರಿನಡಿ ೫ ರಿಂದ ೧೨ನೇ ತರಗತಿವರೆಗಿನ ಎಲ್ಲ ಮಕ್ಕಳಿಗೆ ಸಮಾನ ಗುಣ ಮಟ್ಟದ ಶಿಕ್ಷಣ ನೀಡುವಂತಹ ಹೊಸ ಶಿಕ್ಷಣ ವ್ಯವಸ್ಥೆಗೆ ಈ ಶಾಲೆಗಳು ಭಾಷ್ಯ ಬರೆಯುತ್ತವೆ.

samachara.com

## ಶಿಫಾರಸು–೨೦

ದತ್ತು ಯೋಜನೆ, ಸಾರ್ವಜನಿಕ–ಖಾಸಗಿ ಸಹಭಾಗಿತ್ವಗಳ ಹೆಸರಿನಲ್ಲಿ ಸರ್ಕಾರಿ ಶಾಲೆಗಳನ್ನು ಸಬಲೀಕರಣಗೊಳಿಸುವ ನೆಪದಲ್ಲಿ ಸರ್ಕಾರಿ ಶಾಲೆಗಳ ಆವರಣ ಹಾಗು ಶಾಲೆಗಳ ಮೂಲ ಆಶಯಕ್ಕೆ ಧಕ್ಕೆಯುಂಟು ಮಾಡುವುದನ್ನು ನಿಲ್ಲಿಸಬೇಕು.

samachara.com

# ವಿವರಣೆ

**ಶಿಕ್ಷಣ ಮೂಲಭೂತ ಹಕ್ಕಾಗಿರುವ ಹಿನ್ನೆಲೆಯಲ್ಲಿ, ಶಿಕ್ಷಣವನ್ನು ಸಾಮಾಜಿಕ ಒಳಿತು ಮತ್ತು ಸಾಮಾಜಿಕ ಪರಿವರ್ತನೆಯ ಸಾಧನವನ್ನಾಗಿಸುವ ಗುರುತರವಾದ ಜವಾಬ್ದಾರಿ ಸರ್ಕಾರದ ಮೇಲಿದೆ**

ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಗೆ ಶಿಕ್ಷಣ ಹಕ್ಕು ವಿಶೇಷ ವರದಿಗಾರರಾದ ಕಿಶೋರ್ ಸಿಂಗ್‌ರವರು ಹೇಳುವಂತೆ "ಶಿಕ್ಷಣ ಖಾಸಗೀಕರಣ ಮತ್ತು ವ್ಯಾಪಾರೀಕರಣದ ಒಂದು ಬಹುದೊಡ್ಡ ಹಾನಿಕರ ಪರಿಣಾಮವೆಂದರೆ ಅದು ಶಿಕ್ಷಣ ಸಾರ್ವತ್ರೀಕರಣದ ಮಹತ್ವವನ್ನು ಕಡೆಗಣಿಸುತ್ತದೆ. ಖಾಸಗಿ ಶಿಕ್ಷಣವು ಅವಕಾಶ ವಂಚಿತರಿಗೆ ಮತ್ತು ಬಡವರಿಗೆ ಅದರಲ್ಲೂ ವಿಶೇಷವಾಗಿ ಯಾರಿಗೆ ಅತಿ ಹೆಚ್ಚಿನ ಶಿಕ್ಷಣದ ಅವಶ್ಯಕತೆ ಇರುತ್ತದೆಯೋ ಅವರಿಗೆ ಶಿಕ್ಷಣವನ್ನು ನಿರಾಕರಿಸುತ್ತದೆ . ಖಾಸಗಿ ಸಂಸ್ಥೆಗಳಲ್ಲಿ ಪ್ರವೇಶವು ಅರ್ಹತೆ ಅಥವಾ ಸಾಮರ್ಥ್ಯವನ್ನು ಅವಲಂಬಿಸದೆ ಯಾರು ಹೆಚ್ಚಿನ ಹಣ ನೀಡುವ ಸಾಮರ್ಥ್ಯವಿದೆಯೋ ಅಂಥವರಿಗೆ ದೊರಕುತ್ತದೆ. ಇದು ಅಂತರಾಷ್ಟ್ರೀಯ ಮಟ್ಟದಲ್ಲಿನ ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ ಮತ್ತು ಮಾನವ ಹಕ್ಕುಗಳ ಒಡಂಬಡಿಕೆಗಳಿಗೆ ವ್ಯತಿರಿಕ್ತವಾಗಿರುತ್ತದೆ. ಯಾರು ಹಣವಂತ ರಿರುತ್ತಾರೋ ಅವರು ಆರ್ಥಿಕವಾಗಿ ಕೆಳಸ್ಥರದಲ್ಲಿರುವವರಿಗಿಂತ ಕಡಿಮೆ ಅರ್ಹತೆಯನ್ನು ಹೊಂದಿದ್ದರೂ ಶಿಕ್ಷಣವನ್ನು ಪಡೆದುಕೊಳ್ಳುತ್ತಾರೆ.

- ಶಿಕ್ಷಣ ಉದ್ಯಮೀಕರಣ ಮತ್ತು ವ್ಯಾಪರೀಕರಣ ಒಂದೆಡೆಯಾದರೆ, ಮತ್ತೊಂದೆಡೆ ಸರ್ಕಾರಿ ಶಾಲೆಗಳನ್ನು ದತ್ತು ಯೋಜನೆ, ಸಾರ್ವಜನಿಕ–ಖಾಸಗಿ ಸಹಭಾಗಿತ್ವ, ಶಾಲಾಭಿವೃದ್ಧಿ ಇತ್ಯಾದಿ ಹೆಸರಿನಲ್ಲಿ ಸರ್ಕಾರಿ ಶಾಲೆಗಳನ್ನು ಸಬಲೀಕರಣಗೊಳಿಸುವ ನೆಪದಲ್ಲಿ ಸರ್ಕಾರಿ ಶಾಲೆಗಳನ್ನು ಖಾಸಗಿ ಕಾರ್ಪೊರೇಟ್ ಸಂಸ್ಥೆಗಳಿಗೆ, ಸರ್ಕಾರೇತರ ಸಂಘ–ಸಂಸ್ಥೆಗಳಿಗೆ ಹಾಗು ವ್ಯಕ್ತಿಗಳಿಗೆ ವಹಿಸಿಕೊಡುವ ಪ್ರಕ್ರಿಯೆ ರಾಜ್ಯದಲ್ಲಿ ನಡೆಯುತ್ತಿದೆ.

samachara.com

ಶಿಕ್ಷಣದ ಹಲವು ಪ್ರಮುಖ ತೀರ್ಮಾನಗಳು ಅಧಿಕಾರಿಗಳ ಹಾಗು ಮೂಲವಾರಸುದಾರರ ಸಕ್ರಿಯ ಪಾಲ್ಗೊಳ್ಳುವಿಕೆಯ ಮೂಲಕ ನಡೆಯುವ ಬದಲು ಖಾಸಗಿ ಕಾರ್ಪೋರೇಟ್ ಸಂಸ್ಥೆಗಳ ಹವಾ ನಿಯಂತ್ರಣ ಕೊಠಡಿಗಳಲ್ಲಿ ನಡೆಯುತ್ತದೆ ಎಂಬ ಆರೋಪ ಕೇಳಿಬರುತ್ತಿದೆ.

- ಹಲವೆಡೆ, ಸರ್ಕಾರಿ ಶಾಲೆಗಳನ್ನು ಖಾಸಗಿ ಕಾರ್ಪೋರೇಟ್ ಸಂಸ್ಥೆಗಳು, ಸರ್ಕಾರೇತರ ಸಂಘ–ಸಂಸ್ಥೆಗಳಿಗೆ ಹಾಗು ವ್ಯಕ್ತಿಗಳು ಶೈಕ್ಷಣೇತರ ಕೆಲಸಗಳಿಗೆ ಬಳಸುತ್ತಿದ್ದು ಶಾಲಾ ಆವರಣ, ಭೂಮಿ ಹಾಗು ಇತರೆ ಸವಲತ್ತುಗಳು ದುರ್ಬಳಕೆಯಾಗುತ್ತಿರುವುದು ಕಂಡುಬಂದಿದೆ.
- ಈ ಅಂಶಗಳ ಹಿನ್ನೆಲೆಯಲ್ಲಿ, ದತ್ತು ಯೋಜನೆ, ಸಾರ್ವಜನಿಕ–ಖಾಸಗಿ ಸಹಭಾಗಿತ್ವ ಹೆಸರಿನಲ್ಲಿ ಸರ್ಕಾರಿ ಶಾಲೆಗಳನ್ನು ಸಬಲೀಕರಣಗೊಳಿಸುವ ನೆಪದಲ್ಲಿ ಸರ್ಕಾರಿ ಶಾಲೆಗಳ ಆವರಣ ಹಾಗು ಶಾಲೆಗಳ ಮೂಲ ಆಶಯಕ್ಕೆ ಧಕ್ಕೆಯುಂಟುಮಾಡುವ ಸಂಸ್ಥೆಗಳ ಹಾಗು ವ್ಯಕ್ತಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಸರ್ಕಾರಿ ಶಾಲೆಗಳನ್ನು ಬಲವರ್ಧನೆಗೊಳಿಸಲು ನಿಜವಾದ ಕಾಳಜಿಯುಳ್ಳ ವ್ಯಕ್ತಿ ಮತ್ತು ಸಂಸ್ಥೆಗಳನ್ನು ಎಚ್ಚರಿಕೆಯಿಂದ ಗುರುತಿಸಿ ಪ್ರೋತ್ಸಾಹಿಸಬೇಕು.

samachara.com

samachara.com

## ಶಿಫಾರಸು–೨೧

ಸರ್ಕಾರಿ ಶಾಲೆಗಳ ಸಬಲೀಕರಣ ಸಮಿತಿಯು ನೀಡುತ್ತಿರುವ ಈ ಶಿಫಾರಸ್ಸುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸಲು ಸಾಧ್ಯವಾಗುವಂತೆ ಉನ್ನತಮಟ್ಟದ ಸಮಿತಿಯೊಂದನ್ನು ರಾಜ್ಯಮಟ್ಟದಲ್ಲಿ ಹಾಗು ಜಿಲ್ಲಾ ಮಟ್ಟದಲ್ಲಿ ರಚಿಸುವುದು.

samachara.com

# ವಿವರಣೆ

ಶಾಲಾ ಸಬಲೀಕರಣ ಸಮಿತಿಯು ನೀಡುತ್ತಿರುವ ಈ ಶಿಫಾರಸುಗಳು ಶೈಕ್ಷಣಿಕ ಗುಣಮಟ್ಟವನ್ನು ಅಭಿವೃದ್ಧಿಪಡಿಸುವುದರ ಜೊತೆಗೆ ಸಮಾನ ಶಿಕ್ಷಣ ನೀತಿಯ ಆಶಯದ ಕಡೆಗೆ ದಾರಿದೀಪಗಳಂತಿವೆ. ಆದ್ದರಿಂದ ಇವುಗಳ ಅನುಷ್ಠಾನ ಕಡ್ಡಾಯವಾಗಿ ಆಗುವುದರಿಂದ ಶೈಕ್ಷಣಿಕ ಕ್ಷೇತ್ರದಲ್ಲಿ ಗುಣಾತ್ಮಕ ಬದಲಾವಣೆಯ ಎಲ್ಲಾ ಅವಕಾಶಗಳೂ ಇವೆ. ಇದು ಕೇವಲ ಸರ್ಕಾರಿ ಶಾಲೆಗಳಿಗೆ ಮಾತ್ರ ಸಂಬಂಧಿಸಿರದೆ ಪರ್ಯಾಯವಾಗಿ ಪೈಪೋಟಿ ನೀಡುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಿಗೂ ಅನ್ವಯವಾಗುತ್ತಿರುವುದರಿಂದ ಈ ಎಲ್ಲಾ ಶಿಕ್ಷಣ ವ್ಯವಸ್ಥೆಗಳ ಮೇಲೆ ಸಮತೋಲನ ಸಾಧಿಸುವ ಉದ್ದೇಶದಿಂದ ಒಂದು ಪರಿವೀಕ್ಷಣಾ ಸಮಿತಿಯ ಅಗತ್ಯವಿರುತ್ತದೆ. ಈ ಪರಿವೀಕ್ಷಣಾ ಸಮಿತಿಯು ರಾಜ್ಯಮಟ್ಟದಲ್ಲಿ ಉನ್ನತ ಸಮಿತಿಯಾಗಿದ್ದು ಜಿಲ್ಲಾ ಮಟ್ಟಗಳಲ್ಲಿ ಉಪಸಮಿತಿಗಳಂತೆ ಕಾರ್ಯನಿರ್ವಹಿಸಬೇಕು.

ರಾಜ್ಯಮಟ್ಟದ ಸಮಿತಿಯಲ್ಲಿ ಮಾನ್ಯ ಶಿಕ್ಷಣ ಸಚಿವರು ಅಧ್ಯಕ್ಷರಾಗಿದ್ದು, ಸಮಿತಿಯಲ್ಲಿ ಸರ್ಕಾರದ ಪದನಿಮಿತ್ತ ಉನ್ನತಮಟ್ಟದ ಅಧಿಕಾರಿಗಳು ಸದಸ್ಯರಾಗಿಯೂ, ಅಧಿಕಾರೇತರ ಸದಸ್ಯರಾದ ಶಿಕ್ಷಣ ತಜ್ಞರು ಮತ್ತು ಸಾಮಾಜಿಕ ಕಾರ್ಯಕರ್ತರು ಒಳಗೊಂಡಿರುತ್ತದೆ.

ಜಿಲ್ಲಾ ಮಟ್ಟದ ಸಮಿತಿಯಲ್ಲಿ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದು, ಜಿಲ್ಲಾ ಪಂಚಾಯತ್‌ನ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು ಮತ್ತು ಜಿಲ್ಲೆಯ ಶಿಕ್ಷಣ ತಜ್ಞರು ಹಾಗು ಸಾಮಾಜಿಕ ಕಾರ್ಯಕರ್ತರ ಅಧಿಕಾರೇತರ ಸದಸ್ಯರನ್ನು ಒಳಗೊಂಡಿರುತ್ತದೆ.

* * *

samachara.com

# ಸರ್ಕಾರಿ ಶಾಲೆಗಳ ಸಬಲೀಕರಣ ಸಮಿತಿ

| | |
|---|---|
| **ಪ್ರೊ. ಎಸ್. ಜಿ. ಸಿದ್ಧರಾಮಯ್ಯ,** ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ | ಅಧ್ಯಕ್ಷರು |
| **ಪ್ರೊ. ಚಂದ್ರಶೇಖರ ದಾಮ್ಲೆ** | ಸದಸ್ಯರು |
| **ಶ್ರೀ ಪ. ಮಲ್ಲೇಶ್** | ಸದಸ್ಯರು |
| **ಶ್ರೀ ಗಂಗಾಧರ ಕುಷ್ಟಗಿ** | ಸದಸ್ಯರು |
| **ಶ್ರೀಮತಿ ಬಾನು ಮುಷ್ತಾಕ್** | ಸದಸ್ಯರು |
| **ಫಾ. ಅಂಬ್ರೋಸ್ ಪಿಂಟೋ** | ಸದಸ್ಯರು |
| **ಡಾ. ಕೆ. ಮುರಳಿಧರ್,** ಕಾರ್ಯದರ್ಶಿಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿ |

## ವಿಶೇಷ ತಜ್ಞರು

**ಡಾ. ವಿ.ಪಿ. ನಿರಂಜನಾರಾಧ್ಯ**

**ಶ್ರೀ ಟಿ.ಎಂ. ಕುಮಾರ್**

**ಶ್ರೀ ರಾ.ನಂ. ಚಂದ್ರಶೇಖರ**

samachara.com

samachara.com